# ಮತಶ್ರದ್ಧೆಯ ಭದ್ರಕೋಟೆಗಳು: ಭಾರತದಲ್ಲಿ ಮದ್ರಸಾಗಳು ಮತ್ತು ಇಸ್ಲಾಮಿಕ್ ಶಿಕ್ಷಣ

## ಇಲ್ಮ್ ಮತ್ತು ಇಸ್ಲಾಮ್: ಆರಂಭದ ಇಸ್ಲಾಮಿಕ್ ಪಾಂಡಿತ್ಯ ಪರಂಪರೆ

**- ಯೋಗಿಂದರ್ ಸಿಕಂದ್**

ನಾವು ದಕ್ಷಿಣ ಏಷ್ಯಾದವರು ಅರ್ಥಮಾಡಿಕೊಂಡಂತೆ; ಮದ್ರಸಾಗಳು ಎಂದರೆ ಇಸ್ಲಾಮ್‌ನ ಪಾಂಡಿತ್ಯ ಪರಂಪರೆಯನ್ನು ಕಲಿಸುವ ಮತ್ತು ಉಳಿಸಿ ಬೆಳೆಸುವ ಸಲುವಾಗಿ ಕಟ್ಟಿರುವ ಸಂಸ್ಥೆಗಳು. ಮದ್ರಸಾ ಎನ್ನುವ ಪದದ ವ್ಯುತ್ಪತ್ತಿ ಅಥವಾ ಮೂಲ, ಅರೇಬಿಕ್ ಪದವಾದ 'ದರ್ಸ್' ಅಥವಾ 'ಕಲಿಕೆ' ಎನ್ನುವ ಪದದಿಂದ ಬಂದಿದೆ. ಹಾಗೆ ನೋಡಿದರೆ, ಅದು ಇಸ್ಲಾಮಿಕ್ ಶಿಕ್ಷಣವೇ ಆಗಬೇಕಾಗಿಲ್ಲ. ತಾಂತ್ರಿಕವಾಗಿ ಯಾವುದೇ ಶಾಲೆ ಅಥವಾ ಕಾಲೇಜು ಅಥವಾ ಯಾವುದೇ ಕಲಿಕಾ ಸಂಸ್ಥೆಯನ್ನಾದರೂ ಮದ್ರಸಾ ಎಂದು ಕರೆಯಬಹುದು. ಸಾಮಾನ್ಯವಾಗಿ ದಕ್ಷಿಣ ಏಷ್ಯಾದಲ್ಲಿ, ಮದ್ರಸಾ ಎಂದರೆ ಇಸ್ಲಾಮಿಕ್ ಪರಂಪರೆಯನ್ನು, ಇಸ್ಲಾಮಿಕ್ ವಿಜ್ಞಾನವನ್ನು ಕಲಿಸುವ ಸಂಸ್ಥೆಗಳೆಂದು ಅರ್ಥೈಸಿಕೊಳ್ಳುತ್ತೇವೆ. ಆದ್ದರಿಂದ ಯಾವ ಮದ್ರಸಾ ಪ್ರತ್ಯೇಕವಾಗಿ ಇಸ್ಲಾಮಿಕ್ ವಿಷಯಗಳನ್ನು ಅಥವಾ ಧಾರ್ಮಿಕ ವಿಷಯಗಳನ್ನು ಕಲಿಸುತ್ತದೆಯೋ ಅದನ್ನು ಸಾಧಾರಣವಾಗಿ 'ದಿನಿ' (ದಿನಿ=ರಿಲಿಜಿಯಸ್) ಎನ್ನುವ ಪೂರ್ವಪದದಿಂದ ಸೂಚಿಸಲಾಗುತ್ತದೆ. ಐತಿಹಾಸಿಕವಾಗಿ ಇಸ್ಲಾಮ್ ನಾಗರೀಕತೆಯಲ್ಲಿ ಮದ್ರಸಾಗಳು ಬಹಳ ಮುಖ್ಯ ಪಾತ್ರವನ್ನು ವಹಿಸಿವೆ. ಇಸ್ಲಾಮ್‌ನ ಪಂಡಿತ ಪರಂಪರೆಯನ್ನು ಬೆಳೆಸುವ ಹಾಗೂ ಪ್ರಸರಣ ಮಾಡುವ ಜವಾಬ್ದಾರಿಯನ್ನು ಹೊತ್ತಿವೆ. 'ಉಲಮಾ'ಗಳು; ಅಂದರೆ ಇಸ್ಲಾಮಿಕ್ ವಿಜ್ಞಾನ ಪರಂಪರೆಯ ಪಂಡಿತರು, ಈ ಮದ್ರಸಾಗಳ ಫಲಶ್ರುತಿಗಳು. ಮಾತ್ರವಲ್ಲ ಪ್ರವಾದಿಯ ಪರಂಪರೆಯನ್ನೂ ಹರಡುವ ಕಾರಣದಿಂದ; ಸ್ಥಾನಮಾನದಲ್ಲಿ ಪ್ರವಾದಿಯ ನಂತರದ ಎರಡನೆಯ ಸ್ಥಾನ ತಮ್ಮದೇ ಎಂದು ಅವರು ಪರಿಭಾವಿಸುತ್ತಾರೆ.

"ಮಕ್ತಬ್"ಗಳು ಮತ್ತು "ಮದ್ರಸಾ"ಗಳು ಹೆಚ್ಚು ಕಡಿಮೆ ಮುಸ್ಲಿಮರು ವಾಸಿಸುವ ಪ್ರತಿ ನಗರ, ಊರು ಹಾಗೂ ಹಳ್ಳಿಗಳಲ್ಲಿ ಇದ್ದೇ ಇರುತ್ತವೆ. ಸ್ವಲ್ಪ ಬಡ ಮುಸ್ಲಿಮ್ ಸಮುದಾಯಗಳಲ್ಲಿ ಮದ್ರಸಾಗಳಿಗೆಂದೇ ಪ್ರತ್ಯೇಕ ಕಟ್ಟಡಗಳು ಇಲ್ಲದೇ ಇರಬಹುದು. ಅಂತಹ ಕಡೆಗಳಲ್ಲಿ ತರಗತಿಗಳನ್ನು ಮಸೀದಿಗಳ ಒಳಗೇ ನಡೆಸುವುದೂ ಇದೆ. ಕೆಲವು ಸಂಸ್ಥೆಗಳು ಉದಾಹರಣೆಗೆ, 'ದರ್ ಉಲ್ ಉಲುಮ್', 'ದಿಯೋ ಬಂದ್' ಅಥವಾ 'ಜಮೀಯತ್ ಉಲ್ ಅಶ್ರಫಿಯಾ', 'ಮುಬಾರಕ್‌ಪುರ್' ನಂತಹ ವಿಶ್ವವಿದ್ಯಾಲಯಗಳ ಗಾತ್ರಕ್ಕೆ ಬೆಳೆದು ನಿಂತ ಸಂಸ್ಥೆಗಳ ಕತೆಯೇ ಬೇರೆ. ಇಲ್ಲೆಲ್ಲ ನಾವು ಕಾಣುವುದು ವಿಸ್ತಾರ ಕ್ಯಾಂಪಸ್ಸುಗಳು, ಪ್ರತ್ಯೇಕ ಕಟ್ಟಡಗಳಲ್ಲಿ ಕ್ರಮವಾಗಿ ತರಗತಿಗಳು,

ಗ್ರಂಥಾಲಯಗಳು, ವಸತಿಗೃಹಗಳು, ಭೋಜನಾಲಯಗಳು, ಅತಿಥಿ ಗೃಹಗಳು, ಬೋಧಕರಿಗಾಗಿ ಮನೆಗಳು, ಔಷಧಾಲಯಗಳು, ಮಸೀದಿಗಳು ಮತ್ತು ಶರಿಯಾ ನ್ಯಾಯಾಲಯಗಳು ಇತ್ಯಾದಿ. ಸಾಕಷ್ಟು ಬಾರಿ ಮೊಘಲ್ ವಾಸ್ತುಶೈಲಿಯನ್ನು ಅನುಕರಿಸಿ ಕಟ್ಟಿದ ಈ ಕಟ್ಟಡಗಳು, ಭವ್ಯವಾದ ಗುಂಬಜ್‌ಗಳು ಹಾಗೂ ಸುಂದರವಾದ ಕಮಾನುಗಳಿಂದ ಕೂಡಿ, ಈ ಮದ್ರಸಾ ಕ್ಯಾಂಪಸ್ಸುಗಳು ಮುಸ್ಲಿಮ್ ಅಸ್ಮಿತೆಯ ಸಂಕೇತಗಳಾಗಿದ್ದವು. ಅಷ್ಟೇ ಅಲ್ಲ, ಮುಸ್ಲಿಮರು ಕಡಿಮೆ ಸಂಖ್ಯೆಯಲ್ಲಿರುವ, ಅಂಚಿನಲ್ಲಿರುವ ಅಲ್ಪಸಂಖ್ಯಾತರಾಗಿರುವ ನೆಲದಲ್ಲಿ ಇವು ಒಂದು ರೀತಿಯಲ್ಲಿ ಸಾಂಕೇತಿಕವಾದ ಹಕ್ಕುದಾರಿಕೆಯನ್ನು ಸಾಬೀತುಪಡಿಸುವ ಗುರುತುಗಳೂ ಆಗಿದ್ದವು.

ಸಮಕಾಲೀನ ಭಾರತದಲ್ಲಿ ಮದ್ರಸಾಗಳಲ್ಲಿರುವ ಉಲಮಾಗಳ ಲೋಕದೃಷ್ಟಿಯನ್ನು ಅರ್ಥಮಾಡಿಕೊಳ್ಳಲು ಮತ್ತು ಉಲಮಾಗಳು ತಮ್ಮ ಪಾತ್ರ ಹಾಗೂ ಕೆಲಸಗಳನ್ನು ಹೇಗೆ ಗ್ರಹಿಸಿಕೊಂಡಿದ್ದಾರೆ ಎಂಬುದನ್ನು ತಿಳಿಯಬೇಕಾದರೆ ಇಸ್ಲಾಮಿಕ್ ಗ್ರಾಂಥಿಕ ಪರಂಪರೆಯಲ್ಲಿ ಜ್ಞಾನದ ಪರಿಕಲ್ಪನೆ ಹಾಗೂ ಕಾಲಾನುಕ್ರಮದಲ್ಲಿ ಆ ಜ್ಞಾನ ಪರಂಪರೆ ಹೇಗೆ ವಿಕಾಸ ಹೊಂದಿತು ಎಂಬುದನ್ನು ತಿಳಿದುಕೊಳ್ಳುವುದು ಅನಿವಾರ್ಯ. ಯಾಕೆಂದರೆ ಪ್ರವಾದಿಯಿಂದ ಪಡೆದ ಜ್ಞಾನವನ್ನು ಎಲ್ಲರಿಗೆ ಹಂಚುವುದು ಮತ್ತು ಅರ್ಹರಾದ ಉಲಮಾಗಳ ಮೂಲಕ ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ದಾಟಿಸುವುದು ಮದ್ರಸಾಗಳ ಮುಖ್ಯ ಕಾಳಜಿ. ಮುಸ್ಲಿಮರು ಅನುಕರಿಸಲು ತಕ್ಕ ಮಾದರಿಗಳಾದ ಆರಂಭಿಕ ಕಾಲದ ಉಲಮಾಗಳ ಆದರ್ಶವನ್ನು ಉಳಿಸಿಕೊಳ್ಳಲು ಅಥವಾ ಮರುಸೃಷ್ಟಿ ಮಾಡಲು ಮದ್ರಸಾಗಳು ಬಯಸುತ್ತವೆ. ಇದೇ ಮಾತು, ಮದ್ರಸಾಗಳ ಶೈಕ್ಷಣಿಕ ವಿಧಾನಗಳು, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಸಂಬಂಧ ಹಾಗೂ ಕಲಿಸುವ ಪಠ್ಯಗಳ ವಿಷಯದಲ್ಲಿಯೂ ಅನ್ವಯವಾಗುತ್ತದೆ.

**ಖುರಾನ್ ಮತ್ತು ಹದೀಸ್ ಜ್ಞಾನಭಂಡಾರ:**

'ಬರಹ' ಅಥವಾ 'ಬರೆದಿರುವಂಥದ್ದು' ಎಂಬುದು ಇಸ್ಲಾಮ್‌ನಲ್ಲಿ ಬಹಳ ಮುಖ್ಯವಾದದ್ದು, ಪವಿತ್ರ ಗ್ರಂಥವಾದ ಖುರಾನ್ ಇಸ್ಲಾಮ್‌ನಲ್ಲಿ ಬಹಳ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆ. ಯಾಕೆಂದರೆ ಖುರಾನ್‌ನಲ್ಲಿ ಬರೆದಿರುವುದೆಲ್ಲ ಸಾಕ್ಷಾತ್ ಪ್ರವಾದಿಯೇ ಬರೆದದ್ದು ಎಂಬುದಾಗಿ ಮುಸ್ಲಿಮರು ಪರಿಭಾವಿಸುತ್ತಾರೆ. ಖುರಾನ್ ಎಂಬ ಪದದ ಅರ್ಥವೇ ಪಠಣ ಅಥವಾ ಪಠಿಸುವುದು. ಅಲ್ಲದೇ ಇಸ್ಲಾಮ್‌ನಲಿ ಈ ಬಗ್ಗೆ ಒಂದು ನಂಬಿಕೆಯೂ ಇದೆ. ಅದೆಂದರೆ ಅಲ್ಲಾಹು (ಅಥವಾ ಸತ್ಯದೇವನು) ಮನುಷ್ಯರನ್ನು ಸಂಪರ್ಕಿಸುವುದು ಕೆಲವೊಂದು ದೇವವಾಣಿಗಳ ಮೂಲಕ ಮತ್ತು ಈ ದೇವವಾಣಿಗಳೇ ಗ್ರಂಥ ರೂಪದ ಖರಾನ್ ಎಂಬುದು. ಜ್ಞಾನಸಂಪಾದನೆ ಪ್ರತಿಯೊಬ್ಬ ಮುಸ್ಲಿಮನಿಗೂ ಅಗತ್ಯ ಎಂಬುದನ್ನು ಇಸ್ಲಾಮ್ ಒತ್ತಿ ಹೇಳುತ್ತದೆ ಮತ್ತು ಅದು ಖುರಾನ್‌ನಲ್ಲಿ ಸ್ಪಷ್ಟವಾಗಿ ಉಲ್ಲೇಖಗೊಂಡಿದೆ. ಪ್ರವಾದಿ

ಮಹಮ್ಮದನಿಗೆ ಕೊಡಲ್ಪಟ್ಟ ಮೊತ್ತ ಮೊದಲ ದೇವವಾಣಿಯೇ ಜ್ಞಾನದ ಪ್ರಾಮುಖ್ಯತೆಯ ಬಗ್ಗೆ ಹೇಳುತ್ತದೆ ಮತ್ತು ಅದು ಹೀಗಿದೆ :

(ಸಂದೇಶವಾಹಕರೆ) ಓದಿರಿ, ನಿಮ್ಮನ್ನು ಸೃಷ್ಟಿಸಿದ ಪ್ರಭುವಿನ ನಾಮದೊಂದಿಗೆ,
ಅವನು ಹೆಪ್ಪುಗಟ್ಟಿದ ರಕ್ತದ ಪಿಂಡದಿಂದ ಮಾನವನನ್ನು ಸೃಷ್ಟಿಸಿದನು
ಓದಿರಿ, ಮತ್ತು ನಿಮ್ಮ ಪ್ರಭು ಮಹಾ ಉದಾರಿ
ಅವನು ಲೇಖನಿಯ ಮೂಲಕ ವಿದ್ಯೆ ಕಲಿಸಿದನು
ಮಾನವನು ತಿಳಿದಿರದಂತಹ ಜ್ಞಾನವನ್ನು ಅವನಿಗೆ ದಯಪಾಲಿಸಿದನು.

ಜ್ಞಾನದ ಬಗ್ಗೆ ಖುರಾನ್ ಎಷ್ಟು ಮಹತ್ವ ನೀಡುತ್ತದೆ ಎಂಬುದು ನಮಗೆ ಬಹಳ ಖಚಿತವಾಗಿ ಮನದಟ್ಟಾಗುತ್ತದೆ ಖುರಾನಿನಲ್ಲಿರುವ ೬೫೪೭ ಪದ್ಯಗಳ ಪೈಕಿ ಸುಮಾರು ೨೦೦ ಪದ್ಯಗಳು ಪ್ರಾರ್ಥನೆಯನ್ನು ಮಾಡಲೇಬೇಕಾದ ಅಗತ್ಯದ ಕುರಿತು ಹೇಳುತ್ತವೆ. ಅಷ್ಟೇ ಅಲ್ಲದೆ, ಅದಕ್ಕಿಂತ ಮೂರು ಪಟ್ಟು ಪದ್ಯಗಳು ಮುಸ್ಲಿಮರಿಗೆ ಪ್ರಕೃತಿಯ ನಿಗೂಢತೆಯ ಬಗ್ಗೆ ಗಮನಿಸುವಂತೆಯೂ, ದೇವರ ಸೃಷ್ಟಿಯ ಬಗ್ಗೆ ಅರಿವು ಪಡೆಯುವಂತೆಯೂ ಮತ್ತು ಬುದ್ಧಿಯನ್ನು ಉಪಯೋಗಿಸಿ ಎಲ್ಲವನ್ನೂ ಅರ್ಥಮಾಡಿಕೊಳ್ಳುವಂತೆಯೂ ಕರೆ ನೀಡುತ್ತವೆ. ಹೀಗೆ ಖುರಾನ್ ಜ್ಞಾನದ ಮಹತ್ವದ ಬಗ್ಗೆ ಮತ್ತೆ ಮತ್ತೆ ತಿಳಿಹೇಳುತ್ತದೆ. ಅಷ್ಟೇ ಅಲ್ಲ ಜ್ಞಾನಿಗಳು ನಿಜವಾಗಿಯೂ ಅಲ್ಲಾಹುವಿನ ಕುರಿತ ಭಯಭಕ್ತಿ ಹೊಂದಿದ ನಿಷ್ಠಾವಂತರಾಗಿರುತ್ತಾರೆ ಎಂದೂ ಹೇಳುತ್ತದೆ. ಅಲ್ಲಾಹುವಿನ ಮೇಲಿನ ವಿಶ್ವಾಸ ಮತ್ತು ಜ್ಞಾನ ಎರಡೂ ಇರುವವನನ್ನು ಅಲ್ಲಾಹು ಮೆಚ್ಚುತ್ತಾನೆಂದೂ, ಅಲ್ಲಾಹುವಿನ ಮೇಲಿನ ವಿಶ್ವಾಸ ಮತ್ತು ಜ್ಞಾನ ಎರಡರಲ್ಲಿ ಒಂದರಿಂದ ಇನ್ನೊಂದನ್ನು ಪ್ರತ್ಯೇಕಿಸಲಾಗುವುದಿಲ್ಲ ಎಂದೂ ಘೋಷಿಸುತ್ತದೆ. ಜ್ಞಾನವಿರುವ ಮನುಷ್ಯ, ದೇವಧೂತರಿಗಿಂತಲೂ ಶ್ರೇಷ್ಠ ಎಂದೂ ಹೇಳುತ್ತದೆ.

ಹದೀಸ್‌ಗಳು ಪ್ರವಾದಿಯಿಂದ ದಾಟಿಬಂದ ಸಂಪ್ರದಾಯಗಳೆಂದು ಹೇಳಲಾಗುತ್ತದೆ. ಧಾರ್ಮಿಕ ಕರ್ತವ್ಯದ ಒಂದು ಭಾಗವಾಗಿ ಜ್ಞಾನಸಂಪಾದನೆಯ ಮಹತ್ವವನ್ನು ಒತ್ತಿ ಹೇಳುವ ಪ್ರವಾದಿಯ ಅನೇಕ ಉಪದೇಶಗಳು ಹದೀಸ್‌ಗಳಲ್ಲಿವೆ. ಸಮಕಾಲೀನ ಮುಸ್ಲಿಮ್ ಪ್ರಾತಿನಿಧಿಕ ವ್ಯವಸ್ಥೆಯಲ್ಲಿ, ಪ್ರವಾದಿಯನ್ನು ಎಲ್ಲಕ್ಕಿಂತ ಹೆಚ್ಚಾಗಿ ಒಬ್ಬ ಅಧ್ಯಾಪಕ(ಮೌಲಿಮ್) ಎಂದೂ, ಸಾರ್ವಜನಿಕ ಶಿಕ್ಷಣ*ದ ಕುರಿತು ಸಾರಿದ ಮೊಟ್ಟಮೊದಲ ಧರ್ಮ ಇಸ್ಲಾಂ ಎಂದೂ ಬಿಂಬಿಸಲಾಗಿದೆ. ಈ ಸಂದರ್ಭದಲ್ಲಿ ಪ್ರವಾದಿ ಮಹಮ್ಮದರ ಹೇಳಿಕೆಯನ್ನು ಸಾಕ್ಷಿಯಾಗಿ ಕೊಡಲಾಗುತ್ತದೆ:- ಅದೇನೆಂದರೆ “ನನ್ನನ್ನು ಇಲ್ಲಿಗೆ ಒಬ್ಬ ಅಧ್ಯಾಪಕನಾಗಿ ಕಳಿಸಲಾಗಿದೆ” “ಜ್ಞಾನ ಎನ್ನುವುದು ಇಸ್ಲಾಮಿನ ಜೀವಾಳ, ಮಾತ್ರವಲ್ಲ ನಂಬಿಕೆಯ ಆಧಾರಸ್ತಂಭ”. ಮಹಮ್ಮದ್ ಹೀಗೆ ಹೇಳಿದ್ದಾರೆಂದು ಪ್ರತೀತಿ. ಅಷ್ಟೇ ಅಲ್ಲ, “ಜ್ಞಾನವನ್ನು ಗಳಿಸಿಕೊಳ್ಳುವುದು ಎಲ್ಲ ಮುಸ್ಲಿಮರ; ಅಂದರೆ ಗಂಡಸರ ಹಾಗೂ ಹೆಂಗಸರ ಕರ್ತವ್ಯ, ಇದನ್ನು ಎಲ್ಲರೂ ಪಾಲಿಸಬೇಕು” ಎಂಬುದಾಗಿ ಮಹಮ್ಮದರು ಘೋಷಿಸಿದ್ದಾರೆಂದೂ ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ. “ನಿಮ್ಮ ಹುಟ್ಟಿನಿಂದ ಸಾವಿನ ವರೆಗೂ ಜ್ಞಾನಕ್ಕಾಗಿ ಹುಡುಕಿ, ಅದಕ್ಕಾಗಿ ನೀವು ಚೀನಾ ದೇಶಕ್ಕೆ

ಹೋಗಬೇಕಾಗಿ ಬಂದರೂ ಸಹ ಬಿಡಬೇಡಿ" ಎಂದು ಇನ್ನೊಂದು ಪರಂಪರೆ ಹೇಳುತ್ತದೆ. ಜ್ಞಾನವನ್ನು ಯಾರು ಹುಡುಕುತ್ತಾರೋ ಅವರು ದೇವರ(ಅಲ್ಲಾಹುವಿನ) ದಾರಿಯಲ್ಲಿ (ಜಿಹಾದ್) ಸಾಗುವವರು ಎಂದು ಮಹಮ್ಮದ್ ಘೋಷಿಸಿರುವುದಾಗಿ ಹೇಳಲಾಗಿದೆ. "ಒಬ್ಬ ವಿದ್ವಾಂಸನ ಶಾಯಿ(ಮಸಿ) ಒಬ್ಬ ಹುತಾತ್ಮನ ರಕ್ತಕ್ಕಿಂತ ಹೆಚ್ಚು ಪವಿತ್ರವಾದದ್ದು" ಎಂದು ಮಹಮ್ಮದ್ ಒಂದೆಡೆ ಹೇಳಿದ್ದಾರಂತೆ. ಎಲ್ಲ ಮುಸ್ಲಿಮರೂ ಜ್ಞಾನವನ್ನು ಗಳಿಸಬೇಕು ಎಂಬ ಮಾತನ್ನು ಹೇಳುತ್ತಾ ಪ್ರವಾದಿ, "ಒಂದೋ ಅಧ್ಯಾಪಕನಾಗಿರಬೇಕು, ಇಲ್ಲವೇ ವಿದ್ಯಾರ್ಥಿಯಾಗಿರಬೇಕು. ಇವೆರಡೂ ಅಲ್ಲದ ಮುಸ್ಲಿಮನ ಬದುಕು ವ್ಯರ್ಥ" ಎಂದು ಹೇಳಿದ್ದಾರೆ ಎನ್ನಲಾಗಿದೆ. ಹಾಗೆಯೇ ಇನ್ನೊಂದು ಹದೀಸ್ ಪ್ರಕಾರ ಪ್ರವಾದಿ ಮತ್ತು ಅವನ ಸಂಗಾತಿಗಳಲ್ಲಿ ಹೇಗೆ ಪ್ರವಾದಿಯೇ ಶ್ರೇಷ್ಠನೋ ಅಥವಾ ಎಲ್ಲ ನಕ್ಷತ್ರಗಳಿಗಿಂತ ಚಂದ್ರ ಹೇಗೆ ಶ್ರೇಷ್ಠನೋ ಹಾಗೆ ಒಬ್ಬ ವಿದ್ವಾಂಸ(ಆಲಿಮ್)ನ ಶ್ರೇಷ್ಠತೆ, ಒಬ್ಬ ಭಕ್ತ(ಅಬಿದ್)ನ ಶ್ರೇಷ್ಠತೆಗಿಂತ ದೊಡ್ಡದು. "ವಿಜ್ಞಾನದ ಹಾಗೂ ಜ್ಞಾನದ ವಿಚಾರಗಳನ್ನು ಒಂದು ಗಂಟೆಯ ಕಾಲ ಕೇಳಿಸಿಕೊಳ್ಳುವುದು, ಸಾವಿರ ಹುತಾತ್ಮರ ಉತ್ತರಕ್ರಿಯೆಗಳಿಗೆ ಹಾಜರಾಗುವುದಕ್ಕಿಂತ ಮುಖ್ಯವಾದದ್ದು ಅಥವಾ ಸಾವಿರ ರಾತ್ರಿಗಳ ಕಾಲ ಪ್ರಾರ್ಥನೆ ಸಲ್ಲಿಸುವುದಕ್ಕಿಂತ ಹೆಚ್ಚು ಮೌಲಿಕವಾದದ್ದು" ಎಂದು ಪ್ರವಾದಿ ಕರೆ ಕೊಟ್ಟಿದ್ದನಂತೆ.

ಇಸ್ಲಾಮ್ ಪರಂಪರೆಯಲ್ಲಿ ಜ್ಞಾನ ಸಂಪಾದನೆ ಎಂಬುದು ಅದರಷ್ಟಕ್ಕೇ ಕೊನೆಯೂ ಅಲ್ಲ ಅಥವಾ ದೈನಂದಿನ ಅಗತ್ಯಗಳನ್ನು ಪೂರೈಸುವ ದಾರಿಯೂ ಅಲ್ಲ ಅಥವಾ ಐಹಿಕ ಭೋಗದ ಮಾರ್ಗವೂ ಅಲ್ಲ. ಬದಲಾಗಿ ಜ್ಞಾನದ ಗುರಿ ಅಲ್ಲಾಹನ ಇಚ್ಛೆಯನ್ನು ತಿಳಿಯುವುದಾಗಿರಬೇಕು ಮತ್ತು ಅದಕ್ಕನುಗುಣವಾಗಿ ಜೀವನವನ್ನು ನಡೆಸುವುದಾಗಿರಬೇಕು. ಈ ಒಂದು ದಾರಿಯ ಮೂಲಕ ಮಾತ್ರವೇ ಮನುಷ್ಯ ಸಾವಿನ ನಂತರ ಸದ್ಗತಿಯನ್ನು ಪಡೆಯಬಹುದು. ನಿಜವಾದ ಜ್ಞಾನ ನಮ್ಮನ್ನು ಧರ್ಮನಿಷ್ಠೆಯ ಕಡೆಗೆ ನಡೆಸುತ್ತದೆ ಮತ್ತು ನಮ್ಮಿಂದ ಒಳ್ಳೆಯ ಕೆಲಸಗಳನ್ನು ಮಾಡಿಸುತ್ತದೆ. ನಿಜವಾದ ಜ್ಞಾನವಿದ್ದಲ್ಲಿ ಮಾತ್ರ ನಮ್ಮ ಆರಾಧನೆ (ನಮಾಜ್) ಪರಿಪೂರ್ಣತೆಯನ್ನು ಪಡೆಯುತ್ತದೆ ಮತ್ತು ಅಂತಹ ಸುಜ್ಞಾನದಿಂದ ತನ್ನ ಸುತ್ತಮುತ್ತಲ ಸಹಜೀವಿಗಳೊಂದಿಗಿನ ಆತನ ನಡವಳಿಕೆ ದೇವರ ಇಚ್ಛೆಯಂತೆಯೇ ಸಾಗುತ್ತದೆ. ಹೀಗಾಗಿ ನಿಜವಾದ ಜ್ಞಾನ ಎನ್ನುವುದು ಪುಸ್ತಕಗಳ ಓದಿನಿಂದ ಬರುವಂತದ್ದಲ್ಲ ಅಥವಾ ಅನೇಕ ವರ್ಷಗಳು ಅನೇಕ ಪುಸ್ತಕಗಳನ್ನು ಅಧ್ಯಯನದಿಂದಲೂ ಸಿಗುವಂತದ್ದಲ್ಲ. ಹಾಗೆ ನೋಡಿದರೆ ಪ್ರವಾದಿಯ ಸಹವರ್ತಿಗಳಲ್ಲಿ ಹಲವರು ಅಕ್ಷರಸ್ಥರಾಗಿರಲಿಲ್ಲವಾದರೂ, ಅಗಾಧ ಜ್ಞಾನವನ್ನು ಹೊಂದಿದವರಾಗಿದ್ದರು.

ಜ್ಞಾನ ಮತ್ತು ಆಚರಣೆ ಎರಡರ ಮಧ್ಯೆ ಅವಿಭಾಜ್ಯವಾದ ನಂಟಿದೆ ಎನ್ನುವುದು ಇಸ್ಲಾಮ್‌ನ ನಿಲುವಾದ್ದರಿಂದ, ಇಸ್ಲಾಮಿಕ್ ಪರಂಪರೆಯಲ್ಲಿ ಶಿಕ್ಷಣ (ತಾಲೀಮ್) ಮತ್ತು ತರಬೇತಿ (ತರ್‌ಬೀಯತ್) ಬೇರೆ ಬೇರೆಯಲ್ಲ. ಈ

ಕಾರಣದಿಂದಾಗಿಯೇ ನಾವು ಮದ್ರಸಾಗಳಲ್ಲಿ ಶಿಕ್ಷಕ ಮತ್ತು ವಿದ್ಯಾರ್ಥಿಗಳ ನಡುವೆ ಗಾಢವಾದ ಸಂಬಂಧವನ್ನು ಕಾಣುತ್ತೇವೆ. ಆದರ್ಶ ಶಿಕ್ಷಕ ಎಂದರೆ ಬರಿಯ ಜ್ಞಾನವನ್ನು ವಿದ್ಯಾರ್ಥಿಗಳಿಗೆ ದಾಟಿಸುವ ವ್ಯಕ್ತಿ ಮಾತ್ರವಲ್ಲ; ಬದಲಾಗಿ ಅವನೊಬ್ಬ ಜ್ಞಾನದ ಸಾಕಾರ, ಆಧ್ಯಾತ್ಮಿಕ ಮಾರ್ಗದರ್ಶಿ, ಪ್ರವಾದಿಯ ಪ್ರತಿನಿಧಿ, ವಿದ್ಯಾರ್ಥಿಗಳು ಅನುಕರಿಸಬಹುದಾದ ಆದರ್ಶ ಮಾದರಿ. ಆದ್ದರಿಂದ ಜ್ಞಾನ ಸಂಪಾದನೆಯಲ್ಲಿ ಸಿಗಬಹುದಾದ ಧರ್ಮನಿಷ್ಠನಾದ ಗುರುವಿನ ಸಂಗ (ಸೊಹಬತ್)ವೂ ಬಹಳ ಮುಖ್ಯವಾದದ್ದು. ಪ್ರಾಚೀನ ಕಾಲದಿಂದ ತೊಡಗಿ ನಮ್ಮ ಕಾಲದವರೆಗೂ ಇಸ್ಲಾಮಿನ ಶಿಕ್ಷಣಶಾಸ್ತ್ರ 'ಸೊಹಬ'ನ ಅಗತ್ಯದ ಕುರಿತು ಮತ್ತೆ ಮತ್ತೆ ಹೇಳುತ್ತದೆ. ಸರಿಯಾದ ನೈತಿಕ ಮೌಲ್ಯಗಳನ್ನು ಮೈಗೂಡಿಸಿಕೊಳ್ಳುವುದು, ಶಿಕ್ಷಕರನ್ನು ಬಹಳ ಹತ್ತಿರದಿಂದ ನೋಡಿ ಅನುಕರಿಸುವುದರಿಂದ ಕಲಿಯುವ ನಡತೆಯ ಶಿಷ್ಟಾಚಾರಗಳು (ಇಕ್‌ಲಾಕ್ ಮತ್ತು ಅದಬ್) ಇವೆಲ್ಲ ಪಠ್ಯಪುಸ್ತಕವನ್ನು ಉರುಹೊಡೆಯುವುದಕ್ಕಿಂತ ಹೆಚ್ಚು ಮುಖ್ಯವಾದದ್ದು ಎಂದು ಇಸ್ಲಾಮಿನ ನಂಬಿಕೆ. ಶಿಕ್ಷಕನಿಲ್ಲದಿದ್ದರೆ ವಿದ್ಯಾರ್ಥಿ ಟೊಳ್ಳು ಮತ್ತು ಅರ್ಥಹೀನ. ಆಚರಣೆ ಅಥವಾ ತರಬೇತಿಯಿಲ್ಲದ ಜ್ಞಾನ ಬಹಳ ಅಪಾಯಕಾರಿ. ಇದು ಜನರನ್ನು ಧರ್ಮದ ಹಾದಿಯಿಂದ ದೂರ ಒಯ್ಯುತ್ತದೆ, ಧಾರ್ಮಿಕ ಜ್ಞಾನವನ್ನು ಲೌಕಿಕ ಲಾಭಗಳಿಗಾಗಿ ಬಳಸಿಕೊಳ್ಳುತ್ತದೆ ಮತ್ತು ಈ ಮೂಲಕ ಅವರನ್ನು ನರಕದ ಕಡೆಗೆ ಕೊಂಡುಹೋಗುತ್ತದೆ.

ಖುರಾನ್ ಮತ್ತು ಹದೀಸ್ ಎರಡರಲ್ಲೂ ಜ್ಞಾನ ಎನ್ನುವುದು ಎಲ್ಲವನ್ನೂ ಒಳಗೊಂಡ ಒಂದು ಪೂರ್ಣಪ್ರಜ್ಞೆ ಎಂಬುದು ಬಹಳ ಗಮನಾರ್ಹ ಸಂಗತಿ. ಜ್ಞಾನದ ವಿಷಯ ಬಂದಾಗ 'ಧಾರ್ಮಿಕ'(ದಿನಿ) ಮತ್ತು 'ಲೌಕಿಕ' ಅಥವಾ 'ಸೆಕ್ಯುಲರ್' (ದುನಿಯಾವಿ) ಇವೆರಡರ ಮಧ್ಯೆ ಅಂತಹ ಯಾವ ವಿಭಾಗವೂ ಇದ್ದಿರಲಿಲ್ಲ. ಈ ಭೇದ ಇಸ್ಲಾಮ್‌ನ ಇತಿಹಾಸದಲ್ಲಿ ಕ್ರಮೇಣ ಆರಂಭ ಆಯಿತು. ಖುರಾನಿನ ಪ್ರಕಾರ ವ್ಯಕ್ತಿಯೊಬ್ಬ ತನ್ನ ಲೌಕಿಕ ಅಗತ್ಯಗಳನ್ನು ಅಲ್ಲಾಹುವಿನ ಇಚ್ಛೆಯ ಪ್ರಕಾರ ನಡೆಸಿಕೊಂಡು ಹೋಗುವುದೇ ಒಂದು ರೀತಿಯ ಆರಾಧನೆ (ಇಬಾದತ್). ಈ ಕಾರಣದಿಂದಾಗಿಯೇ ಖುರಾನ್ ತನ್ನ ಅನುಯಾಯಿಗಳಿಗೆ ಪ್ರಕೃತಿಯ ವಿಸ್ಮಯಗಳ ಬಗ್ಗೆ ಯೋಚಿಸುವಾಗ ತರ್ಕವನ್ನು (ಅಕಲ್) ಉಪಯೋಗಿಸಬೇಕೆಂದು ಒತ್ತಾಯಿಸುತ್ತದೆ. ಯಾಕೆಂದರೆ ಇಸ್ಲಾಮ್, ಪ್ರಾಕೃತಿಕ ವೈಚಿತ್ರ್ಯಗಳನ್ನು ಅಲ್ಲಾಹುವಿನ ಕುರುಹುಗಳು (ಅಯಾತ್) ಎಂದು ನಂಬುತ್ತದೆ. ಒಂದು ಹದೀಸ್‌ನ ಪ್ರಕಾರ "ಜ್ಞಾನ ಎನ್ನುವುದು ಭಕ್ತನ ನಿಜವಾದ ಗೆಳೆಯ ಮತ್ತು ತರ್ಕ ಎನ್ನುವುದು ಅವನ ಮಾರ್ಗದರ್ಶಿ". ಆ ಹಿನ್ನೆಲೆಯಲ್ಲಿಯೇ ಪ್ರವಾದಿಗಳು, ಎಲ್ಲಿಯವರೆಗೆ ತಮ್ಮ ಶಿಷ್ಯರನ್ನು ಒತ್ತಾಯಿಸುತ್ತಿದ್ದರೆಂದರೆ; " ಧರ್ಮದ ನಿಜವಾದ ಶ್ರದ್ಧಾಳುವಿಗೆ ವಿವೇಕದ ಮಾತುಗಳೆಂದರೆ ಕಳೆದುಕೊಂಡ ನಿಧಿ ಇದ್ದಂತೆ. ಅದು ಎಲ್ಲಿ ಸಿಕ್ಕರೂ ಅದನ್ನು ಅವನು ಬಿಡದಂತೆ ಪಡೆದುಕೊಳ್ಳಬೇಕು" ಎಂದು ಕಿವಿಮಾತು ಹೇಳಿದ್ದಾರೆ. ಜ್ಞಾನದ ಬಗೆಗಿನ ಈ ನಿಲುವಿನಿಂದಾಗಿ, ಒಂದು ಕಡೆ ಯುರೋಪಿನಲ್ಲಿ ಮಧ್ಯಯುಗೀನ ಚರ್ಚು,

ವಿಜ್ಞಾನಿಗಳನ್ನು ಶಿಕ್ಷೆಗೆ ಗುರಿಪಡಿಸುತ್ತಿದ್ದ ಹೊತ್ತಲ್ಲಿ; ಇಸ್ಲಾಮ್‌ನ ಆರಂಭಕಾಲದ ಅನೇಕ ಮುಸ್ಲಿಮರು ಬೇರೆ-ಬೇರೆ ವಿಜ್ಞಾನಗಳ ದಾರಿದೀಪಗಳಾದರು.

ಇಸ್ಲಾಮ್‌ನ ಪರಂಪರೆಯಲ್ಲಿ ಜ್ಞಾನವನ್ನು ಅಲ್ಲಾಹುವಿನ ಕೊಡುಗೆ ಎಂದು ಭಾವಿಸಲಾಗುತ್ತಿತ್ತು. ಅಷ್ಟೇ ಅಲ್ಲ; ಆ ಕಾರಣಕ್ಕೆ ಅದನ್ನು ಎಲ್ಲರಿಗೂ ಹಂಚಬೇಕು ಎಂದೂ ಹೇಳಲಾಗುತ್ತಿತ್ತು. ಯಾಕೆಂದರೆ ಜ್ಞಾನವನ್ನು ಹಂಚುವುದು ಖುರಾನಿನ ಆಜ್ಞೆಯಂತೆ, ಪ್ರತಿ ಶ್ರದ್ಧಾವಂತನ ಕರ್ತವ್ಯವಾಗಿದೆ. ಆ ಮೂಲಕ "ಒಳ್ಳೆಯದನ್ನು ಸ್ಥಾಪಿಸುತ್ತಾ, ಕೆಟ್ಟದ್ದನ್ನು ತ್ಯಜಿಸುತ್ತಾ" ಹೋಗು ಎಂಬ ಖುರಾನ್ ಆಶಯ ಪಾಲಿಸುವುದು ಕೂಡ ಸಾಧ್ಯ. ಈ ನಂಬಿಕೆಯಿಂದಾಗಿಯೇ ಭಾರತ ಮತ್ತು ಬೇರೆಡೆಗಳಲ್ಲಿಯೂ ಮದ್ರಸಾಗಳನ್ನು ಸ್ಥಾಪಿಸಿ, ಇಸ್ಲಾಮಿಕ್ ಜ್ಞಾನಭಂಡಾರವನ್ನು ಪ್ರೋತ್ಸಾಹಿಸುವ ಕೆಲಸವನ್ನು ಇಸ್ಲಾಮ್ ಧರ್ಮ ಹಾಗೂ ಮುಸ್ಲಿಮ್ ಸಮುದಾಯಗಳು ಮಾಡುತ್ತಿವೆ. ಖುರಾನ್ ಮತ್ತು ಹದೀಸ್‌ನಲ್ಲಿ ಕೂಡ ಜ್ಞಾನ ಪ್ರಸರಣದ ಪ್ರಾಮುಖ್ಯತೆಯ ಕುರಿತಾದ ಮಾತುಗಳೇ ತುಂಬಿವೆ. ಪ್ರವಾದಿಯು ಷ "ದೇವತೆಗಳು, ಮತ್ತು ಗೂಡಿನಲ್ಲಿರುವ ಇರುವೆಗಳೂ ಸೇರಿದಂತೆ ಆಕಾಶ ಮತ್ತು ಭೂಮಿಯಲ್ಲಿರುವ ಸಕಲ ಜೀವರಾಶಿಗಳು ಲೋಕಕಲ್ಯಾಣಕ್ಕೆ ಕಾರಣವಾಗುವ ಜ್ಞಾನವನ್ನು ಹರಡುವ ವ್ಯಕ್ತಿಗಾಗಿ ಮೊರೆ ಇಡುತ್ತವೆ" ಎಂದು ಹೇಳಿರುವುದಾಗಿ ನಂಬಿಕೆ ಇದೆ. ಇನ್ನೊಂದೆಡೆ ಒಂದು ಹದೀಸ್‌ನಲ್ಲಿ "ಜ್ಞಾನ ದಾನಕ್ಕಿಂತ ದೊಡ್ಡ ದಾನವಿಲ್ಲ" ಎಂದು ಮಹಮ್ಮದರು ಹೇಳಿರುವುದಾಗಿ ಉಲ್ಲೇಖಿಸಲಾಗಿದೆ.

*

ಮೆಕ್ಕಾದಲ್ಲಿ ಪ್ರವಾದಿ ಮಹಮ್ಮದ್ ಮತ್ತು ಅವನ ಸಂಗಾತಿಗಳನ್ನು ಅಲ್ಲಿನ ಪ್ರಬಲ 'ಖುರಾಯಿಶ್' ಬುಡಕಟ್ಟು ಜನಾಂಗದವರು ಬಹುವಾಗಿ ನಿಂದಿಸಿದರು, ವಿರೋಧಿಸಿದರು. ಪ್ರವಾದಿ ಮಹಮದರು ಹೇಳುವ ಏಕದೇವೋಪಾಸನೆ ಮತ್ತು ಸಮತಾವಾದ ಅವರಿಗೆ ತಮ್ಮ ನಂಬಿಕೆಯಾದ ಬಹುದೇವೋಪಾಸನೆ ಮತ್ತು ಸಾಮಾಜಿಕ ಸವಲತ್ತುಗಳಿಗೆ ದೊಡ್ಡ ಕಂಟಕವಾಗಿ ಕಂಡಿತು. ಖುರಾಯಿಶ್‌ಗಳ ವಿರೋಧದ ಕಾರಣದಿಂದ, ಪ್ರವಾದಿ ಮತ್ತು ಅವರ ಸಂಗಾತಿಗಳು, ತಮ್ಮ ಸಂಗಾತಿಗಳಲ್ಲಿ ಒಬ್ಬನಾದ 'ಅರ್ಖಮ್ ಬಿನ್ ಅಬಿ ಅರ್ಖಮ್' ಎಂಬುವವನ ಮೆಕ್ಕಾ ಹೊರವಲಯದ ಕಣಿವೆಯ ಮನೆಯಲ್ಲಿ ಗುಟ್ಟಾಗಿ ಸೇರುತ್ತಿದ್ದರು. ಅಲ್ಲಿ ಅವರು ಒಟ್ಟಿಗೆ ಸೇರಿ ಪ್ರಾರ್ಥನೆ ಮಾಡುತ್ತಿದ್ದರು ಮತ್ತು ಪ್ರವಾದಿಯು ಓದುತ್ತಿದ್ದ ಖುರಾನಿನ ಆಯ್ದ ಭಾಗದ ಪಠಣವನ್ನು ಕೇಳಿಸಿಕೊಳ್ಳುತ್ತಿದ್ದರು. ಇದನ್ನೇ ಇಸ್ಲಾಮ್‌ನ ಮೊತ್ತ ಮೊದಲ 'ಶಾಲೆ' ಎಂದು ಕರೆಯಲಾಯಿತು ಎನ್ನುತ್ತಾರೆ.

ಮೆಕ್ಕಾದಲ್ಲಿ ಹದಿಮೂರು ವರ್ಷಗಳ ಕಾಲ ಉಪಟಳವನ್ನು ಅನುಭವಿಸಿದ ಪ್ರವಾದಿ ತಮ್ಮ ಹಿಂಬಾಲಕರ ಗುಂಪಿನೊಡನೆ ಮದೀನಾಕ್ಕೆ

ತಮ್ಮ ವಾಸವನ್ನು ಬದಲಾಯಿಸಿಕೊಂಡರು. ಮದೀನಾದ ಜನ ಅವರನ್ನು ಸಂತೋಷದಿಂದ ಬರಮಾಡಿಕೊಂಡರು. ಅಲ್ಲೇ ಪ್ರವಾದಿಯು ತಮ್ಮ ಹೊಸ ರಾಜ್ಯ(ಪ್ರೊಟೋ-ಸ್ಟೇಟ್)ದ ಕಲ್ಪನೆಗೆ ತಳಹದಿ ಹಾಕಿದರು. ಅಲ್ಲಿ ಅವರು ಕೈಗೊಂಡ ಮೊಟ್ಟಮೊದಲ ಸಾಹಸವೆಂದರೆ; ಮುಸ್ಲಿಮ್ ಸಮುದಾಯಕ್ಕಾಗಿ ಒಂದು ಮಸೀದಿಯ  ನಿರ್ಮಾಣಕ್ಕೆ ಕೈಹಾಕಿದ್ದು. ಕಾಲಾಂತರದಲ್ಲಿ ಅದೇ ಮಸೀದಿ 'ಪ್ರವಾದಿಯ ಮಸೀದಿ(ಮಜೀದ್ ಇ ನಬವಿ)' ಎಂದಾಯಿತು. ಮದೀನಾದ ಮುಸ್ಲಿಮರಿಗೆಲ್ಲ ಆ ಮಸೀದಿ ಪ್ರಾರ್ಥನಾ ಮಂದಿರವಾಯಿತು. ಅಷ್ಟೇ ಅಲ್ಲ, ಮದೀನಾದ ಆಡಳಿತಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಪ್ರವಾದಿ ಇಲ್ಲೇ ಚರ್ಚಿಸುತ್ತಿದ್ದರು. ಅಲ್ಲೇ ಕಾನೂನಿನ ಕಲಹಗಳನ್ನು ಪರಿಹರಿಸುತ್ತಿದ್ದರು ಮತ್ತು ಮಿಲಿಟರಿಗೆ ಸಂಬಂಧಪಟ್ಟ ಭೇದೋಪಾಯಗಳನ್ನು ಕೂಡ ನಿರ್ಣಯಿಸುತ್ತಿದ್ದರು. ಈ ಮಸೀದಿಯಲ್ಲೇ ಅವರ ಶಿಷ್ಯ(ಸಬಾಹಾ)ರಿಗೆ ಇಸ್ಲಾಂ ಧಾರ್ಮಿಕ ಶಿಕ್ಷಣವನ್ನೂ ನೀಡುತ್ತಿದ್ದರು. ಖುರಾನಿನ ಒಂದೊಂದೇ ಭಾಗವನ್ನು ಓದಿ ಹೇಳುತ್ತಿದ್ದರು ಮತ್ತು ಶಿಷ್ಯರು ಅದನ್ನು ಮನನ ಮಾಡಿಕೊಂಡು ನೆನಪಿಟ್ಟುಕೊಳ್ಳುತ್ತಿದ್ದರು. ಪ್ರವಾದಿ ತಾವು ಪಡೆದ ದೈವೀವಾಣಿಗಳನ್ನು ಶಿಷ್ಯರಿಗೆ ವಿವರಿಸುತ್ತಿದ್ದರು ಮತ್ತು ಆ ಕುರಿತ ಅವರ ಸಂದೇಹ ಮತ್ತು ಪ್ರಶ್ನೆಗಳಿಗೂ ಉತ್ತರ ನೀಡುತ್ತಿದ್ದರು.

ಮದೀನಾದಲ್ಲಿ ಮಹಮ್ಮದರು ತಮ್ಮ  ಶಿಷ್ಯರು ತಾವು ಕಲಿತದ್ದನ್ನು ಉಳಿದವರಿಗೆ ಕಲಿಸುವಂತೆ ವ್ಯವಸ್ಥೆಗಳನ್ನು ಮಾಡಿದರು.  ಉಳಿದವರೂ ಓದು-ಬರಹ ಕಲಿಯಲು ವ್ಯವಸ್ಥೆ ಮಾಡಿದರು. 'ಬದ್ರ್ ಯುದ್ಧ'ದ ನಂತರ (ಬದ್ರ್ ಯುದ್ಧ-೧೩ ಮಾರ್ಚ್ ಕ್ರಿ.ಶ ೬೨೪ – ಇಸ್ಲಾಮ್‌ನ ಮೊದಲ ದಿನಗಳು. ಈ ಯುದ್ಧದಲ್ಲಿ ಮದೀನಾದ ಜನ ಮಹಮ್ಮದ್ ಅವರ ಸಲಹೆಯಂತೆ ಯುದ್ಧ ಮಾಡಿ ಮೊದಲ ಬಾರಿಗೆ ಮೆಕ್ಕಾದ ಜನರನ್ನು ಸೋಲಿಸುತ್ತಾರೆ. ಅಂದರೆ ಮುಸ್ಲಿಮರು ಖುರಾಯಿಶ್ ಜನರನ್ನು ಸೋಲಿಸುತ್ತಾರೆ. ಪ್ರವಾದಿಯವರು ಮದೀನಾಕ್ಕೆ ವಲಸೆ ಬಂದ ಎರಡು ವರ್ಷಗಳ ನಂತರ ಈ ಯುದ್ಧ ನಡೆಯುತ್ತದೆ.) ಸೆರೆ ಸಿಕ್ಕ ಮೆಕ್ಕಾದ ಯುದ್ಧಕೈದಿಗಳನ್ನು ಬಿಡುಗಡೆ ಮಾಡಲು ಪ್ರವಾದಿ, ಒಂದು ಷರತ್ತು ಹಾಕುತ್ತಾರೆ. ಅದೇನೆಂದರೆ ಪ್ರತಿಯೊಬ್ಬ ಕೈದಿಯೂ ಹತ್ತು ಜನ ಮುಸ್ಲಿಮರಿಗೆ ಬರೆಯಲು ಕಲಿಸಬೇಕು ಎಂಬುದು. ಸುಮಾರು ೬೦೦ ಜನ ಮುಸ್ಲಿಮರು ಈ ರೀತಿಯಾಗಿ ಬರೆಯಲು ಕಲಿತರಂತೆ. ಇಷ್ಟಲ್ಲದೆ ಸಿರಿಯಾಕ್, ಹೀಬ್ರೂ ಮತ್ತು ಕಾಪ್ಟಿಕ್ ಮುಂತಾದ ವಿದೇಶೀ ಭಾಷೆಗಳನ್ನು ಕಲಿಯುವಂತೆ ತನ್ನ ಸಹಾಬಾದ ಗುಂಪಿನ ಕೆಲವರನ್ನು ಮಹಮ್ಮದ್ ಅವರು ನಿಯೋಜಿಸಿದ್ದರು ಎಂದೂ ತಿಳಿದು ಬರುತ್ತದೆ. ಗಣಿತ ಮತ್ತು ವೈದ್ಯಕೀಯ ವಿಜ್ಞಾನದಂತಹ ವಿಷಯಗಳನ್ನು ಕಲಿಯುವಂತೆಯೂ ಉತ್ತೇಜಿಸುತ್ತಿದ್ದರು. ಈ ರೀತಿಯಾಗಿ ಗಮನಾರ್ಹ ಪರಿಣಾಮ ಬೀರಿದ ಮಹಮ್ಮದ್ ಅವರ ಈ ಒಂದು ಬಗೆಯ "ಶೈಕ್ಷಣಿಕ ಜಿಹಾದ್" ಸ್ತುತ್ಯಾರ್ಹ. ಯಾಕೆಂದರೆ ಇಸ್ಲಾಮ್ ಪೂರ್ವದ ಅರಬ್ ಜನಾಂಗದಲ್ಲಿ ಸಾಕ್ಷರತೆ ಎನ್ನುವುದರ ಅರಿವೂ ಇರಲಿಲ್ಲ. ಒಂದು ಪ್ರತೀತಿಯ ಪ್ರಕಾರ ಮಹಮ್ಮದರ ಹುಟ್ಟಿಗೂ ಮೊದಲು ಮೆಕ್ಕಾದಲ್ಲಿ ಕೇವಲ

ಹದಿನೇಳು ಜನ ಸಾಕ್ಷರರು (ಓದು ಬರಹ ಕಲಿತವರು) ಇದ್ದರಂತೆ. ಹೀಗಿದ್ದರೂ ಇಸ್ಲಾಮ್ ಪೂರ್ವದ ಅರಬರಲ್ಲಿ ಅವರದ್ದೇ ಆದ ಬಹಳ ಶ್ರೀಮಂತವಾದ ಮೌಖಿಕ ಪರಂಪರೆ ಇತ್ತು. ಕಾವ್ಯದಲ್ಲಿ ಅವರು ಸಾಕಷ್ಟು ಪರಿಣತರಾಗಿದ್ದರು, ಅಲ್ಲದೆ ತಮ್ಮ ಪೂರ್ವಜರ ಸಾಹಸಗಳ ಬಗೆಗೆ ಅನೇಕ ಒಳ್ಳೆಯ ದಂತಕತೆಗಳನ್ನು ಹೆಣೆದಿದ್ದರು ಎಂಬುದೂ ತಿಳಿಯುತ್ತದೆ. ಬರವಣಿಗೆಯ ಬಗ್ಗೆ ಮಾತ್ರ ಅವರು ಅಂತಹ ಗಮನವನ್ನು ಕೊಟ್ಟಿರಲಿಲ್ಲ.

ಜ್ಞಾನವನ್ನು ಪಡೆಯುವುದು ಪ್ರತಿಯೊಬ್ಬ ಮುಸ್ಲಿಮನ ಕರ್ತವ್ಯ ಎಂದು ಪ್ರವಾದಿಯು ಒತ್ತಿ ಹೇಳುತ್ತಿದ್ದುದಷ್ಟೇ ಅಲ್ಲ, ಮದೀನಾದ ಹೆಂಗಸರೂ ಶಿಕ್ಷಣವನ್ನು ಪಡೆಯುವಂತೆ ಉತ್ತೇಜಿಸಿದರು. ಮಹಮ್ಮದ್ ಅವರು ಗಂಡಸರ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡುತ್ತಾರೆ ಎನ್ನುವ ದೂರು ಮಹಿಳೆಯರಿಂದ ಬಂದಾಗ, ಪ್ರವಾದಿಯು ಮಸೀದಿಯಲ್ಲೇ ವಾರಕ್ಕೆ ಒಂದು ದಿನವನ್ನು ನಿಗದಿಪಡಿಸಿ ಅವರಿಗೆ ಶಿಕ್ಷಣ ಸಿಗುವಂತೆ ನೋಡಿಕೊಂಡರಂತೆ. ಮುಸ್ಲಿಮ್ ಹೆಂಗಸರು ಪ್ರವಾದಿ ಮಹಮ್ಮದರ ಹೆಂಡತಿಯರನ್ನು ಆಗಾಗ ಭೇಟಿ ಮಾಡುತ್ತಿದ್ದರಂತೆ. ಯಾಕೆಂದರೆ ಮಹಮ್ಮದರ ಹೆಂಡತಿಯರಲ್ಲಿ ಕೆಲವರು ಸ್ವತಃ ಅಕ್ಷರಸ್ಥರಾಗಿದ್ದರು ಮತ್ತು ಮಹಿಳೆಯರ ಪ್ರಶ್ನೆಗಳನ್ನು ಉತ್ತರಿಸುವಷ್ಟು ವಿವೇಕಿಗಳೂ ಆಗಿದ್ದರು. ಪ್ರವಾದಿಯವರು ತನ್ನ ಹೆಂಡತಿಯರಲ್ಲಿ ಒಬ್ಬರದ 'ಹಫ್ಸಾ' ಅವರಿಗಾಗಿ ಅವರು ಓದು- ಬರಹ ಕಲಿಯುವಂತೆ ಒಬ್ಬ ಶಿಕ್ಷಕನನ್ನು ನಿಯಮಿಸಿದ್ದರು. ಅವರ ಹೆಂಡತಿಯರಲ್ಲಿ ಕಿರಿಯವಳಾದ ಆಯೇಷಾಳ ಬಗ್ಗೆ ಹೇಳುತ್ತಾ "ಇಸ್ಲಾಮ್‌ನ ಬಗ್ಗೆ ಅರ್ಧದಷ್ಟು ಜ್ಞಾನವನ್ನು ಅವಳಿಂದಲೇ ಪಡೆಯಬಹುದು" ಎನ್ನುತ್ತಿದ್ದರಂತೆ. ಮಹಮ್ಮದರ ಗೆಳೆಯನಾದ ಇಬ್ನ್ ಜುಬಾಯ್ರ್ ಅಂತೂ "ಎಲ್ಲ ಸಹಬಾಗಳನ್ನು ಸೇರಿಸಿದರೂ ಆಯೇಷಾಳಿಗೆ ಅವರೆಲ್ಲರಿಗಿಂತ ಹೆಚ್ಚು ಗೊತ್ತಿತ್ತು" ಎಂದು ಒತ್ತಿ ಹೇಳುತ್ತಾನೆ.

## ಪ್ರವಾದಿ ಕಾಲದ ನಂತರದ ಬೆಳವಣಿಗೆಗಳು:

ಇಸ್ಲಾಮಿಕ್ ಶಿಕ್ಷಣವನ್ನು ಪ್ರವಾದಿಯವರ ಕಾಲದಲ್ಲಿ ಮಸೀದಿಗಳಲ್ಲಿ ನೀಡುತ್ತಿದ್ದರು. ಶಿಕ್ಷಣಕ್ಕಾಗಿಯೇ ಪ್ರತ್ಯೇಕ ಸಂಸ್ಥೆಗಳಿರಲಿಲ್ಲ. ಸುತ್ತು ಮುತ್ತಲಿನ ಪ್ರದೇಶಗಳಿಗೆ ಇಸ್ಲಾಮ್ ಹಬ್ಬಿದಂತೆಲ್ಲ ಅರಬಸ್ತಾನದ ಬೇರೆ ಬೇರೆ ಗುಡ್ಡಗಾಡು ಜನಾಂಗಗಳು ಪ್ರವಾದಿಯವರಿಂದ ಕಲಿಯುವುದಕ್ಕಾಗಿ ಮದೀನಾದ ಮಸೀದಿಗೆ ಮುತ್ತಿಕೊಂಡವು. ಕಲಿತಾದ ಮೇಲೆ ತಮ್ಮ ತಮ್ಮ ಪ್ರದೇಶಗಳಿಗೆ ಹಿಂತಿರುಗಿದಂತೆ ಅಲ್ಲೆಲ್ಲ ಖುರಾನಿನ ಶಿಕ್ಷಣವನ್ನು ಕೊಡುವುದಕ್ಕಾಗಿ ಮಸೀದಿಗಳನ್ನು ಕಟ್ಟಿದರು. ಸಹಬಾದ ಒಂದು ಗುಂಪು- ಹೆಚ್ಚಿನವರು ಅದರಲ್ಲಿ ಬಡವರಾಗಿದ್ದರು; ಇನ್ನು ಕೆಲವರು ಕಠಿಣವಾದ ಪವಿತ್ರ ಬದುಕನ್ನು ನಡೆಸಲೆಂದು ಪ್ರಾಪಂಚಿಕ ಸುಖಗಳನ್ನು ಬಿಟ್ಟವರಾಗಿದ್ದರು–ಮದೀನಾದ ಮಸೀದಿಯ ಹೊರಗೆ ಎತ್ತರದ ಪೀಠ(ಸುಫಾ)ದಲ್ಲಿ ಕುಳಿತು ದಿನವಿಡೀ ಧ್ಯಾನ ಮತ್ತು ಖುರಾನಿನ ಪಠಣದಲ್ಲಿ ತೊಡಗಿರುತ್ತಿದ್ದರು. ಉಳಿದವರಿಗೂ ಹೇಳಿಕೊಡುತ್ತಿದ್ದರು. ಈ ಪವಿತ್ರ ಜನಗಳ ಗುಂಪನ್ನು "ಅಲ್ ಇ ಸುಫಾ" ಅಥವಾ "ಪೀಠದಲ್ಲಿ ಕುಳಿತ ಜನ" ಎಂದು

ಉಳಿದವರು ಉಲ್ಲೇಖಿಸುತ್ತಿದ್ದರು. ಇವರನ್ನೇ ಮುಂದೆ 'ಸೂಫಿಗಳ ಪೂರ್ವಜರು' ಎಂದು ಗುರುತಿಸಲಾಯಿತು, ಅಷ್ಟೇ ಅಲ್ಲ ಇವರು ಮೊತ್ತ ಮೊದಲ ಇಸ್ಲಾಮ್ ಶಿಕ್ಷಕರೆಂದು ಗುರುತಿಸಲ್ಪಟ್ಟರು.

ಪ್ರವಾದಿಯವರ ಕಾಲದಲ್ಲಿ ಇಸ್ಲಾಮಿಕ್ ವಿಧಿನಿಯಮಗಳು ಸಾಮಾನ್ಯವಾಗಿ ಖುರಾನನ್ನು ಅವಲಂಬಿಸಿ ಇರುತ್ತಿದ್ದವು. ಪ್ರವಾದಿಯವರ ಹಿಂಬಾಲಕರಿಗೆ ಪವಿತ್ರ ಗ್ರಂಥವಾದ ಖುರಾನ್ ಮತ್ತು ಪ್ರವಾದಿಯವರ ನಡವಳಿಕೆಗಳು(ಸುನ್ನಾಹ್) ಸರಿಯಾದ ನಡಾವಳಿಗಳ ಬಗ್ಗೆ ತಿಳಿಸುವ ಮೂಲ ಮಾರ್ಗದರ್ಶಿ ಪಠ್ಯವಾಗಿತ್ತು. ಆದರೆ, ಪ್ರವಾದಿಯವರ ಮರಣಾನಂತರ ಮುಸ್ಲಿಮರು ಹೊಸ ಸನ್ನಿವೇಶಗಳನ್ನು ಎದುರಿಸಬೇಕಾಯಿತು ಹಾಗೂ ಅವುಗಳಿಗೆ ಖುರಾನ್‌ನಲ್ಲಿ ಸರಿಯಾದ ಪರಿಹಾರ ಅಥವಾ ಮಾರ್ಗದರ್ಶನ ಸಿಗದೆ ಹೋಯಿತು. ಪ್ರವಾದಿಯವರು ಬದುಕಿದ್ದಾಗ ಶಿಷ್ಯರು ಯಾವುದೇ ವಿಷಯದ ಬಗೆಗಾದರೂ ಪ್ರವಾದಿಯವರ ಅಭಿಪ್ರಾಯವನ್ನು ಕೇಳಬಹುದಾಗಿತ್ತು, ಆದರೆ ಈಗ ಅವರು ಅವರೆಲ್ಲರ ಮಧ್ಯೆ ಇಲ್ಲ. ಈಗ ಪ್ರವಾದಿಯವರ ಸ್ಥಾನವನ್ನು ಅವರ ತಕ್ಷಣದ ಉತ್ತರಾಧಿಕಾರಿಗಳಾದ ನಾಲ್ವರು ನಿಜ ಮಾರ್ಗದರ್ಶಿಗಳಾದ "ಖಲೀಫ"ರು ಸುನ್ನಿ ಪಂಗಡಕ್ಕೂ, ನಾಲ್ವರು ನಿಜ ಮಾರ್ಗದರ್ಶಿಗಳಾದ "ಇಮಾಮ"ರು ಶಿಯಾಗಳ ಪಂಗಡಕ್ಕೂ ನೇತಾರರಾದರು. ಈ ಖಲೀಫರು ಮತ್ತು ಇಮಾಮರು ತಾವು ಖುರಾನನ್ನು ಓದಿ ಹೇಗೆ ಗ್ರಹಿಸಿಕೊಂಡರೋ, ಪ್ರವಾದಿಯವರ ಉದಾಹರಣೆಗಳನ್ನು ಹೇಗೆ ಅರ್ಥೈಸಿಕೊಂಡರೋ ಆ ರೀತಿಯಾಗಿ ತೀರ್ಮಾನಗಳನ್ನು ಕೊಟ್ಟರು. ಹೊಸ ವಿಷಯಗಳು ಅಥವಾ ಸಮಸ್ಯೆಗಳು ಎದುರಾದಾಗ ಖುರಾನಿನಲ್ಲಾಗಲಿ ಅಥವಾ ಸುನ್ನಾಹ್‌ನಲ್ಲಾಗಲಿ ಸ್ಪಷ್ಟವಾದ ಆದೇಶಗಳು ಸಿಗದೆ ಇದ್ದಾಗ ಇವರು "ಇಜ್‌ತಿಹಾದ್"ನ ಕಡೆಗೆ ಮುಖ ಮಾಡಿದರು. ಇಜ್‌ತಿಹಾದ್ ಎಂದರೆ ಖುರಾನ್ ಮತ್ತು ಸುನ್ನಾಹ್‌ನ ಸೃಜನಾತ್ಮಕ ಪ್ರತಿಫಲನ ಮತ್ತು ವಿವರಣೆ. ಹೀಗೆ ನಿಜ ಮಾರ್ಗದರ್ಶಿಗಳಾದ ಖಲೀಫರು ಮತ್ತು ಇಮಾಮರ ಇಜ್‌ತಿಹಾದ್‌ನ ವಿವರಣೆ ಸಂದರ್ಭಕ್ಕೆ ತಕ್ಕುದಾಗಿರುತ್ತಿತ್ತು ಹಾಗೂ ವಾಸ್ತವದ ಸಮಸ್ಯೆಗಳ ಮೇಲೆ ಅವಲಂಬಿತವಾಗಿರುತ್ತಿತ್ತು. ಅದು ಬರಿಯ ತಾತ್ವಿಕವಾದ ಅಥವಾ ಕಾಲ್ಪನಿಕವಾದ ವಿಷಯಗಳ ಕುರಿತಾಗಿರಲಿಲ್ಲ. ಆದರೆ ಆನಂತರ ಬಂದ ನ್ಯಾಯಶಾಸ್ತ್ರದ ಪಂಡಿತರ(ಫಖಾಹಾ) ನಿಲುವು ಇದಕ್ಕೆ ವಿರುದ್ಧವಾದದ್ದಾಗಿತ್ತು.

ಸ್ಪಷ್ಟವಾದ ಆದೇಶಗಳ ರೂಪದಲ್ಲೋ ಅಥವಾ ಸಾದೃಶ್ಯಗಳ ರೂಪದಲ್ಲೋ, ಒಟ್ಟಿನಲ್ಲಿ ಪ್ರವಾದಿಯವರ ಮಾದರಿಯ ಆದೇಶಗಳ ಹುಡುಕಾಟ ಕ್ರಮೇಣ ಪ್ರವಾದಿಯವರ ಹೇಳಿಕೆಗಳ ಕುರಿತಾಗಿ ಹಾಗೂ ಪ್ರವಾದಿಯವರು ಹೇಗೆ ನಡೆದುಕೊಳ್ಳುತ್ತಿದ್ದರು ಎಂಬುದರ ಕುರಿತಾಗಿ, ಅವರÀ ಕ್ರಿಯೆ-ಪ್ರತಿಕ್ರಿಯೆಗಳ ಕುರಿತಾಗಿ ಒಂದು ಸಂಗ್ರಹವೇ ತಯಾರಾಗಲು ಕಾರಣವಾಯಿತು. ಅದನ್ನೇ ಹದೀಸ್ ಎಂದು ಕರೆದರು. ಮತ್ತು ಅದೇ ಇಂದಿನ ಮದ್ರಸಾಗಳ ಪಠ್ಯಕ್ರಮದ ಕೇಂದ್ರಬಿಂದುವಾಯಿತು. ಪ್ರವಾದಿಯವರು

ಇಲ್ಲವಾದ ಸಂದರ್ಭದಲ್ಲಿ ಹದೀಸ್ ಮುಸ್ಲಿಮರಿಗೆ ಜೀವನ ನಡೆಸಲು ಬೇಕಾದ ಮಾರ್ಗದರ್ಶನವನ್ನು ನೀಡುವ ಮುಖ್ಯ ದಾಖಲೆಯಾಯಿತು. ಪ್ರವಾದಿಯವರ ಅನೇಕ ಜೊತೆಗಾರರು ಮತ್ತು ಪ್ರವಾದಿಯವರ ನಂತರ ಬಂದ ಇತರರು ಪ್ರವಾದಿಯವರು ಹೇಳಿರಬಹುದಾದ ಮಾತುಗಳನ್ನು ತಿಳಿಸಿ ಹೇಳುವವರು ಯಾರಾದರೂ ಸಿಗಬಹುದು ಎಂದು ಆ ಪ್ರದೇಶದ ಉದ್ದಗಲಕ್ಕೂ ಓಡಾಡಿದರು. ಉದಾಹರಣೆಗೆ 'ಜಬಿರ್ ಇಬ್ನ್ ಅಬ್ದುಲ್ಲಾ' ಎಂಬುವವನು ಒಂದು ಹದೀಸ್ ಪಡೆಯಲು ಒಂದು ತಿಂಗಳಕಾಲ ಪಯಾಸದ ಪ್ರಯಾಣವನ್ನು ಮಾಡಿ ಸಿರಿಯಾದ ವರೆಗೆ ಹೋಗಿ 'ಅಬ್ದುಲ್ಲಾ ಇಬ್ನ್ ಅನಾಸ್' ಎಂಬವನಿಂದ ಪಡೆದನಂತೆ. ಇದೇ ರೀತಿ 'ಅಬು ಅಯೂಬ್ ಅನ್ಸಾರಿ' ಮದೀನಾದಿಂದ ಈಜಿಪ್ಟ್ ವರೆಗೂ ಪ್ರಯಾಣ ಮಾಡಿ ಅಲ್ಲಿನ ವಿದ್ವಾಂಸನಾದ 'ಅಖಾಬಾ ಬಿನ್ ಅಮ್ರ್'ನಿಂದ ಹದೀಸ್ ಒಂದನ್ನು ಕೇಳಿಸಿಕೊಳ್ಳಲು ಹೋಗಿದ್ದನಂತೆ. ಒಂಭತ್ತನೆಯ ಶತಮಾನದ (ಕಾಲ ಕ್ರಿ.ಶ ೮೧೦ ರಿಂದ ೮೭೦) ಇಮಾಮ್ ಬುಖಾರಿ ಎಂಬ ಹದೀಸ್‌ಗಳ ಅತ್ಯಂತ ಅಧಿಕೃತವಾದ ಸಂಗ್ರಹವನ್ನು ಮಾಡಿದ ಸಂಗ್ರಹಕಾರನು ಹದೀಸ್‌ಗಳ ಬೇರೆ ಬೇರೆ ವ್ಯಾಖ್ಯಾನಗಳಿಗಾಗಿ ಹದಿನಾರು ವರ್ಷಗಳ ಕಾಲ ಸುತ್ತಾಡಿದನಂತೆ. ತಾನು ಸಂಗ್ರಹಿಸಿದ ಅರ್ಧ ಮಿಲಿಯಕ್ಕೂ(ಐದು ಲಕ್ಷಕ್ಕೂ ಹೆಚ್ಚು) ಹೆಚ್ಚಿನ ಹದೀಸ್‌ಗಳಲ್ಲಿ ಕೇವಲ ೭,೫೦೦ ರನ್ನು ಆಯ್ಕೆ ಮಾಡಿದನಂತೆ.

ಇಷ್ಟೊಂದು ದೊಡ್ಡ ಸಂಖ್ಯೆಯ ಹದೀಸ್‌ಗಳಿಂದ ಇಮಾಮ್ ಬುಖಾರಿ ಕೇವಲ ೭,೫೦೦ರನ್ನು ಮಾತ್ರ ಅಧಿಕೃತ ಎಂಬುದಾಗಿ ಸೋಸಿ ತೆಗೆದ ವಿಷಯ ಕೇಳಿದಾಗ ಅವನ ಕಾಲಕ್ಕಾಗಲೇ ಹದೀಸ್ ಗಳಲ್ಲಿ ಸಾಕಷ್ಟು ಪ್ರಕ್ಷೇಪಗಳು ಅಥವಾ ಸೇರ್ಪಡೆಗಳು ಆಗುತ್ತಿದ್ದವು ಎಂಬ ಸೂಚನೆ ಸಿಗುತ್ತದೆ. ಆ ಕಾಲದ ಸೈದ್ಧಾಂತಿಕ ಹಾಗೂ ರಾಜಕೀಯ ಸ್ಥಿತಿಗಳಿಗೆ ಹೊಂದುವಂತೆ ಸಾವಿರಾರು ಹದೀಸ್ ವರದಿಗಳು ತಯಾರಾಗುತ್ತಿದ್ದವು ಎಂಬುದೂ ಗೊತ್ತಾಗುತ್ತದೆ. ಇಸ್ಲಾಮ್‌ನಲ್ಲೇ ಪರಸ್ಪರ ಪ್ರತಿಸ್ಪರ್ಧಿಗಳಾಗಿರುವ ಧರ್ಮಶಾಸ್ತ್ರಗಳ ಶಾಖೆಗಳು ಹಾಗೂ ಗುಂಪುಗಳು  ತಮ್ಮ ತಮ್ಮ ನಿಲುವುಗಳನ್ನು ಸಮರ್ಥಿಸಲು ಹಾಗೂ ಬೇರೆಯವರ ನಿಲುವುಗಳನ್ನು ಇಸ್ಲಾಮ್‌ಗೆ ಬದ್ದವಾಗಿಲ್ಲ ಎಂದು ಖಂಡಿಸಲು ತಮ್ಮದೇ ಹದೀಸ್‌ಗಳ ಸಂಗ್ರಹಗಳನ್ನು ಸೃಷ್ಟಿ ಮಾಡಿಕೊಂಡವು. ಹೀಗಾಗಿ ಇಂದು ನಮಗೆ ತಿಳಿದಿರುವ ಈ ಹದೀಸ್‌ಗಳ ಒಂದು ಸಂಗ್ರಹ, ಗಣನೀಯವಾಗಿ, ದೀರ್ಘಕಾಲದ ಐತಿಹಾಸಿಕ ಬೆಳವಣಿಗೆಗಳು ಮತ್ತು ಭೀಕರವಾದ ರಾಜಕೀಯ ಹಕ್ಕುದಾರಿಕೆಯ ಫಲಶ್ರುತಿಯಾಗಿರುವುದನ್ನು ಕಾಣುತ್ತೇವೆ. ಆದ್ದರಿಂದ ಇವುಗಳು ನಿಜವಾಗಿಯೂ ಪ್ರವಾದಿಯವರ ಮಾತನ್ನಾಗಲಿ ಅಥವಾ ಕೃತಿಯನ್ನಾಗಲಿ ಪ್ರತಿನಿಧಿಸುತ್ತವೆ ಎಂದು ಹೇಳಲಾಗುವುದಿಲ್ಲ. ಈ ಸಂಗ್ರಹವನ್ನೇ ಇಂದು ಭಾರತದ ಮದ್ರಸಾಗಳಲ್ಲಿ ಹೇಳಿಕೊಡಲಾಗುತ್ತದೆ ಮತ್ತು ಅನೇಕ ಉಲಮಾಗಳು ಹದೀಸ್‌ಗಳನ್ನು ವಿವೇಚನೆಯಿಂದ ವಿಮರ್ಶೆ ಮಾಡುವುದಿಲ್ಲ. ಎಷ್ಟೋ ಸಲ ಇವರು ತಮ್ಮ ವಾದವನ್ನು ಪುಷ್ಟೀಕರಿಸಲು ಹುರುಳಿಲ್ಲದ(ಜೈಫ್) ಮತ್ತು ತಾವೇ ಸೃಷ್ಟಿಸಿಕೊಂಡ (ಮೌಜು) ಹದೀಸ್

ವರದಿಗಳನ್ನು ಬಳಸುತ್ತಾರೆ. ಮತ್ತು ಹೀಗೆ ಮಾಡುವುದರ ಮೂಲಕ ತರ್ಕ ಹಾಗೂ ನ್ಯಾಯದ ಒಂದು ಒಪ್ಪಿತ ಮಾದರಿಗೇ ವಿರುದ್ಧವಾಗಿ ನಿಲ್ಲುತ್ತಾರೆ.

ವೈಯಕ್ತಿಕ ನಡವಳಿಕೆಗಳು ಮತ್ತು ನೈತಿಕತೆಯ ಬಗ್ಗೆ ಖುರಾನ್ ಕೆಲವೊಂದು ನಿಯಮಗಳನ್ನು ಹೇಳುತ್ತದೆ ಹಾಗೂ ಕೆಲವೊಂದು ಕಾನೂನಿನ ಕ್ರಮಗಳನ್ನು ಉಲ್ಲೇಖಿಸುತ್ತದೆ. ಅಲ್ಲದೆ ಇದನ್ನು ಹದೀಸ್‌ನ ಸಂಗ್ರಹಗಳು ಇನ್ನೂ ವಿವರವಾಗಿ ಉಲ್ಲೇಖ ಮಾಡುತ್ತವೆ. ಹಾಗಿದ್ದರೂ ಕಾಲ ಕಳೆದಂತೆ, ಇಸ್ಲಾಮ್ ಹೊಸ ಪ್ರದೇಶಗಳಲ್ಲಿ ಹಬ್ಬಿದಂತೆ, ಮುಸ್ಲಿಮರು ಹೊಸ ಸನ್ನಿವೇಶಗಳನ್ನು ಎದುರಿಸಬೇಕಾಯಿತು. ಈ ಬದಲಾದ ಸನ್ನಿವೇಶಗಳಿಗೆ ಖುರಾನಿನಲ್ಲಾಗಲೀ ಅಥವಾ ಹದೀಸ್‌ಗಳಲ್ಲಾಗಲೀ ಯಾವುದೇ ನಿರ್ದಿಷ್ಟ ಪರಿಹಾರ ಇರಲಿಲ್ಲ. ಇದರಿಂದಾಗಿ ಹದಿನೆಂಟನೆಯ ಶತಮಾನದ ಮಧ್ಯಭಾಗದಿಂದ ಈಚೆಗೆ ಇಸ್ಲಾಮ್ ನ್ಯಾಯಶಾಸ್ತ್ರ(ಫಿಖ್)ದ ಅನೇಕ ಶಾಲೆಗಳು (ಮಜಹಬ್/ ಮಜಾಹಿಬ್) ಹೊಸದಾಗಿ ಹುಟ್ಟಿಕೊಂಡವು.

ಫಿಖ್ ಅಥವಾ ಇಸ್ಲಾಮ್ ನ್ಯಾಯಶಾಸ್ತ್ರದ ಸ್ವರೂಪ ಮತ್ತು ಬೇರೆ ಬೇರೆ ಫಿಖ್ ಪ್ರಕಾರಗಳ ಬೆಳವಣಿಗೆಯನ್ನು ತಿಳಿದುಕೊಳ್ಳುವುದು ಸಮಕಾಲೀನ ಭಾರತದ ಮದ್ರಸಾಗಳ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಲು ಬಹಳ ಮುಖ್ಯವಾಗಿದೆ. ಮದ್ರಸಾಗಳಲ್ಲಿ ಹೇಳಿಕೊಡುವ ಪಠ್ಯಕ್ರಮಗಳ ಹಿಂದಿರುವ ಆಧಾರಸ್ತಂಭವೇ ಫಿಖ್. ಈ ಪದದ ಅರ್ಥ "ಯಾವುದೇ ಒಂದು ವಿಷಯವನ್ನು ಸರಿಯಾಗಿ ತಿಳಿದುಕೊಳ್ಳುವುದು" ಎಂದು. ಹಾಗೆಯೇ ಖುರಾನಿನಲ್ಲಿ ಇದೇ ಪದ " ಧರ್ಮವನ್ನು ಸರಿಯಾಗಿ ತಿಳಿದುಕೊಳ್ಳುವುದು" ಎಂಬ ಅರ್ಥದಲ್ಲಿ ಬಳಕೆಯಾಗಿದೆ. ಆದರೆ ಕಾಲಕ್ರಮೇಣ ಇದು ಹೆಚ್ಚು ಕಡಿಮೆ ಕಾನೂನಿನ ಅಥವಾ ನ್ಯಾಯಶಾಸ್ತ್ರದ ಸಂದರ್ಭದಲ್ಲಿ ಬಳಕೆಯಾಗಲು ತೊಡಗಿತು. ಫಿಖ್ ಎಂದರೆ ಖುರಾನಿನ ಮತ್ತು ಹದೀಸ್‌ಗಳ ಜೊತೆಗಿನ ಮನುಷ್ಯರ ಒಡನಾಟದಲ್ಲಿ ಪಡೆದ ನಿಯಮ ಹಾಗೂ ಕಾನೂನುಗಳು ಮತ್ತು ಇವುಗಳ ಮೂಲದಿಂದಲೇ ಹುಟ್ಟಿದ ಬೇರೆ ಬೇರೆ ಮಾದರಿಗಳು ಎಂಬರ್ಥ ಪ್ರಾಪ್ತವಾಯಿತು. ಫಿಖ್ ಅಂದರೆ "ಇಸ್ಲಾಮಿಕ್ ಕಾನೂನು" ಎಂಬಂತೆ ತಪ್ಪಾಗಿ ಅರ್ಥಮಾಡಿಕೊಳ್ಳುವ ನಾವು, ಫಿಖ್ ಎಂದರೆ ಆಧುನಿಕ ಅರ್ಥದಲ್ಲಿ ನಾವು ತಿಳಿದುಕೊಳ್ಳುವ 'ಕಾನೂನು' ಎನ್ನುವುದಕ್ಕಿಂತ ಹೆಚ್ಚು ವ್ಯಾಪಕವಾದ ವಿಸ್ತಾರವನ್ನುಳ್ಳದ್ದು ಎಂಬುದನ್ನು ಗ್ರಹಿಸಬೇಕು. ಫಿಖ್ ವ್ಯಕ್ತಿಯೊಬ್ಬನ ವೈಯಕ್ತಿಕ ವಿಷಯವಾದ ಪ್ರಾರ್ಥನೆ, ಶುದ್ಧಿಸ್ನಾನ, ಆಹಾರ ಮತ್ತು ಉಡುಗೆಗಳ ಬಗ್ಗೆ, ಅಲ್ಲದೆ ಸಾರ್ವಜನಿಕ ವ್ಯವಹಾರ, ಸರಕಾರದ ನಡಾವಳಿ ಹೇಗಿರಬೇಕು ಇತ್ಯಾದಿಗಳ ಬಗ್ಗೆ ನಿಯಮಗಳನ್ನು ಹೇಳುತ್ತದೆ. ಫಿಖ್ ಮನುಷ್ಯ ಪ್ರಯತ್ನದ ಫಲವಾಗಿ ರೂಪುಗೊಂಡದ್ದು. ಆದರೆ ಮುಸ್ಲಿಮ್ ನಂಬಿಕೆಯ ಪ್ರಕಾರ "ಶರೀಯ" ಅಂದರೆ 'ಖುರಾನಿನಲ್ಲಿ ತಾನಾಗಿ ಬಹಿರಂಗಗೊಂಡ ಕಾನೂನುಗಳು'. ಆದ್ದರಿಂದ ಅವು ದೈವಿಕವಾದವುಗಳು. ಹೀಗಿದ್ದರೂ ಉಲಮಾಗಳು ಎಷ್ಟೋ ಸಲ ಇವೆರಡನ್ನೂ ಒಂದೇ ಎಂಬಂತೆ ಮಿಶ್ರ ಮಾಡುವುದುಂಟು. ಹೀಗಾಗಿ, "ಫಿಖ್" ಎಂಬುದು

“ಶರೀಯ”ದಿಂದ ಹುಟ್ಟಿದ್ದೇ ಹೊರತು ಅವೆರಡೂ ಒಂದೇ ಅಲ್ಲ. ಶರೀಯದ ಕಾನೂನುಗಳು ಸರ್ವಕಾಲಕ್ಕೂ ಒಂದೇ, ಮೊದಲೇ ನಿರ್ಧಾರಿತವಾಗಿದ್ದು ಎಂಬುದಾಗಿ ಹೆಚ್ಚಿನ ಮುಸ್ಲಿಮರು ಪರಿಗಣಿಸುತ್ತಾರೆ. ಆದರೆ ಫಿಖ್ ತಾತ್ವಿಕವಾಗಿ ಹೆಚ್ಚು ಸಡಿಲವಾದ ಚೌಕಟ್ಟು ಉಳ್ಳದ್ದು ಹಾಗೂ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಒಗ್ಗಿಸಿಕೊಳ್ಳಲು ಬರುವಂತದ್ದು. ಶರೀಯದ ಕಾನೂನುಗಳು ಹೆಚ್ಚು ವ್ಯಾಪಕವಾಗಿ, ಸರ್ವ ಸಾಮಾನ್ಯವಾಗಿದ್ದರೆ, ಫಿಖ್‌ನ ಸೂಚನೆಗಳು ಮತ್ತು ಪರಿಹಾರಗಳು ಹೆಚ್ಚು ನಿರ್ದಿಷ್ಟವಾದವು ಹಾಗೂ ಶರೀಯದ ಕಾನೂನುಗಳನ್ನು ಮನುಷ್ಯರಿಂದ ಎಷ್ಟು ಸಾಧ್ಯವೋ ಅಷ್ಟು ಒಂದು ನಿರ್ದಿಷ್ಟ ಪರಿಸ್ಥಿತಿಗೆ ತಕ್ಕಂತೆ ಅನ್ವಯಿಸಬಹುದಾದವು. ಆದ್ದರಿಂದ ಯಾವುದೇ ಒಂದು ಶಾಖೆಯ ಫಿಖ್, ಶರೀಯದ ವಿಚಾರಗಳನ್ನು ಪೂರ್ಣವಾಗಿ ಅಭಿವ್ಯಕ್ತಿಸುತ್ತದೆ ಎಂದು ಹೇಳಲಾಗುವುದಿಲ್ಲ. ಏನಿದ್ದರೂ ಪರಿಪೂರ್ಣತೆ ಎಂಬುದು ಸತ್ಯದೇವನಲ್ಲಿ ಮಾತ್ರ ಕಾಣುವ ಗುಣ ಎಂದು ಮುಸ್ಲಿಮರ ನಂಬಿಕೆ. ಫಿಖ್‌ನ ಬೆಳವಣಿಗೆಯಲ್ಲಿ ಮನುಷ್ಯನ ಹಸ್ತಕ್ಷೇಪ ಇದೆ ಎನ್ನುವುದು ಅನೇಕ ಫಿಖ್ ಶಾಖೆಗಳಲ್ಲಿರುವ ಅಸಂಖ್ಯವಾದ ವಿರೋಧಾಭಾಸಗಳಿಂದ ಸ್ಪಷ್ಟವಾಗಿ ತಿಳಿಯುತ್ತದೆ. ಯಾಕೆಂದರೆ ಖುರಾನ್ ಮತ್ತು ‘ಸುನ್ನಾಹ’ಗಳನ್ನು ಅವು ಬೇರೆ ಬೇರೆ ರೀತಿಯಲ್ಲಿ ಅರ್ಥೈಸುವ ಪ್ರಯತ್ನಗಳಾಗಿವೆ. ಅಷ್ಟೇ ಅಲ್ಲದೆ, ಆ ಬಗೆಬಗೆಯ ಫಿಖ್‌ಗಳು ಹುಟ್ಟಿ ಬೆಳೆದ ಸಾಮಾಜಿಕ ಹಿನ್ನೆಲೆಗಳೂ ಭಿನ್ನ.

ಬೇರೆ ಬೇರೆ ಪ್ರದೇಶಗಳಲ್ಲಿ ಮುಸ್ಲಿಮರಲ್ಲಿ ಬೇರೆ ಬೇರೆಯ ಒಳಪಂಗಡಗಳ ಗುಂಪುಗಳು ಮತ್ತು ಫಿಖ್ ಶಾಖೆಗಳು ಬೆಳೆಯುವಲ್ಲಿ ಆಯಾ ಪ್ರಾದೇಶಿಕ ಸ್ಥಿತಿಗತಿಗಳು ಮುಖ್ಯ ಪಾತ್ರವನ್ನು ವಹಿಸಿವೆ. ಈ ಪ್ರಕ್ರಿಯೆ ಹಲವು ತಲೆಮಾರುಗಳನ್ನು ಒಳಗೊಂಡಂತೆ ಹಂತ ಹಂತವಾಗಿ ನಡೆಯಿತು. ಪರಿಣಾಮವಾಗಿ ನಿಧಾನವಾಗಿ ಸಂಚಯಗೊಂಡ ಬೋಧನೆಗಳ ಬೆಳವಣಿಗೆ ಮತ್ತು ವಿಸ್ತಾರವನ್ನು ಕಾಣಬಹದು. ಎಷ್ಟೋ ಬಾರಿ ಆಯಾಯ ಪ್ರದೇಶದ ಜನರಾದ ಯಹೂದಿಗಳು, ಪರ್ಶಿಯನ್ನರು ಮತ್ತು ರೋಮನ್ನರ ಆಚರಣೆಗಳೂ ಇದರಲ್ಲಿ ಸೇರಿ ಹೋಗುತ್ತಿದ್ದವು. ಇದರಿಂದಾಗಿ ಖುರಾನಿನಲ್ಲಿ ಅಂಗೀಕಾರಾರ್ಹತೆಯನ್ನು ಪಡೆಯದ ಅಭಿಪ್ರಾಯಗಳು ಫಿಖ್‌ಗಳಲ್ಲಿ ಸೇರಿ ಹೋಗಿ ನ್ಯಾಯ-ಕಾನೂನುಗಳನ್ನು ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಬಹಳ ಮುಖ್ಯವಾದ ಭಿನ್ನತೆಗಳಿಗೆ ಎಡೆಮಾಡಿಕೊಟ್ಟವು. ಈ ಕಾಲಕ್ಕಾಗಲೇ ಇಸ್ಲಾಮ್, ಬಹಳ ಮುಂದುವರಿದ ನಾಗರೀಕತೆಗಳನ್ನು ಹೊಂದಿದ ಮತ್ತು ಅಧಿಕಾರಶಾಹಿ ರಾಜಪ್ರಭುತ್ವವನ್ನು ಹಾಗೂ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿಷ್ಠಿತ ಪರಂಪರೆಯನ್ನಾಗಿ ಹೊಂದಿದ ಸಿರಿಯಾ, ಈಜಿಪ್ಟ್, ಇರಾನ್ ಮತ್ತು ಇರಾಕ್‌ನಂತಹ ಹೊಸ ಸಾಂಸ್ಕೃತಿಕ ಕ್ಷೇತ್ರಗಳಿಗೆ ಹರಡಿಬಿಟ್ಟಿತ್ತು. ಪ್ರವಾದಿಯು ಪ್ರತಿಪಾದಿಸಿದ ಒಂದು ಬಗೆಯ ಪ್ರಜಾಪ್ರಭುತ್ವದ ಆಶಯವನ್ನು ಹೊಂದಿದ್ದ ರಾಜ್ಯದ ಕಲ್ಪನೆ ಈಗ ಅಗಾಧವಾದ ಇಸ್ಲಾಮ್ ಸಾಮ್ರಾಜ್ಯಕ್ಕೆ ಎಡೆ ಮಾಡಿತ್ತು. ಅರೇಬಿಯಾದ ಮರುಭೂಮಿಯ ಗುಡ್ಡಗಾಡು ಜನಾಂಗಗಳಲ್ಲಿ ಇದ್ದ ಒಂದು ಬಗೆಯ ಸಮತಾವಾದದ ಸಮಾಜ ಈಗ ಗತಕಾಲದ ನೆನಪಷ್ಟೇ ಆಗಿ ಉಳಿಯಿತು.

ಈ ಪರಿಸ್ಥಿತಿಯಲ್ಲಿ ಕ್ರಮೇಣ ಫಿಖ್‌ನ ಶಾಖೆಗಳು ಅಧಿಕಾರಶಾಹಿತ್ವ, ಪಿತೃಪ್ರಾಧಾನ್ಯತೆ ಮತ್ತು ಶ್ರೇಣೀಕೃತ ವ್ಯವಸ್ಥೆಯ ಸಾಮಾಜಿಕ ಸಂದರ್ಭದಿಂದ ಆಳವಾಗಿ ಪ್ರಭಾವಿತವಾಗಿದ್ದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ಹೀಗೆ ಸಾಮಾಜಿಕ ನ್ಯಾಯ ಹಾಗೂ ಸಮತಾವಾದದ ಬಹುಮತವನ್ನು ಬಿಟ್ಟು ಫಿಖ್ ಹಾಗೂ ಐತಿಹಾಸಿಕವಾದ ಶರೀಯ ಇವೆರಡೂ ನಿಧಾನವಾಗಿ ರಾಜಪ್ರಭುತ್ವದ ಅಧಿಕಾರವನ್ನು ಮತ್ತು ಕಟ್ಟುನಿಟ್ಟಿನ ಪಿತೃಪ್ರಧಾನ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತಾ ಬಂದವು, ಅಷ್ಟೇ ಅಲ್ಲ ಅವುಗಳನ್ನು ಎತ್ತಿ ಹಿಡಿದವು. ಇದು ಖುರಾನಿನಲ್ಲೇ ಇಲ್ಲದ ಅತ್ಯಂತ ಕಠಿಣವಾದ ಕಾನೂನುಗಳು-ಹೆಂಗಸರ ವಿರುದ್ಧ, ಮುಸ್ಲಿಮರಲ್ಲದವರ ವಿರುದ್ಧ ಮತ್ತು ಗುಲಾಮರ ವಿರುದ್ಧ ಹೇಗೆ ಬಂದವು ಎಂಬುದನ್ನು ಸೂಚಿಸುತ್ತದೆ. ಅದೇ ಕಾಲದಲ್ಲಿ ಬಂದ ಕಟುಕರಾದ ರಾಜರಿಗೆ ವಿಧೇಯತೆಯನ್ನು ತೋರಿಸಬೇಕೆಂಬ ತಡೆಯಾಜ್ಞೆಗಳೂ ಇದನ್ನೇ ಬಿಂಬಿಸುತ್ತವೆ. ಇವೆಲ್ಲಕ್ಕೂ ಖುರಾನಿನಲ್ಲೇ ಆದೇಶಗಳು ಇರಲಿಲ್ಲ. ಇಂತಹ ಅನೇಕ ಫಿಖ್ ನಿಯಮಗಳನ್ನು ಈಗಲೂ ಭಾರತದ ಮದ್ರಸಾಗಳಲ್ಲಿ ಹೇಳಿಕೊಡುತ್ತಿದ್ದಾರೆ.

## ‘ಉಲಮಾ’ಗಳು ವೃತ್ತಿಪರ ವರ್ಗವಾಗಿ ಬೆಳೆದು ಬಂದ ಬಗೆ :

ಫಿಖ್‌ನ ಬೇರೆ ಬೇರೆ ಶಾಲೆಗಳು ಹುಟ್ಟಿ, ಬೆಳೆದಂತೆ ಉಲಮಾಗಳ ಬಗೆಗಿನ ಕಲ್ಪನೆ ನಿಧಾನವಾಗಿ ಬದಲಾಯಿತು. ಈ ರೋಚಕವಾದ ಪ್ರಕ್ರಿಯೆಯ ಜಾಡನ್ನು ತಿಳಿದುಕೊಳ್ಳುವುದು ಸಮಕಾಲೀನ ಉಲಮಾಗಳನ್ನು ಅರ್ಥಮಾಡಿಕೊಳ್ಳಲು ಮುಖ್ಯವಾಗುತ್ತದೆ. ಈ ಕಾಲದ ಉಲಮಾಗಳು ತಮ್ಮ ಬಗ್ಗೆ ಏನು ಭಾವಿಸಿಕೊಂಡಿದ್ದಾರೆ, ಅವರ ಪಾತ್ರಗಳೇನು ಮತ್ತು ಲಾಭಗಳೇನು, ಮುಸ್ಲಿಮ್ ಸಮುದಾಯದ ಪರವಾಗಿ ಇಸ್ಲಾಮ್ ರೀತಿ ರಿವಾಜುಗಳ ಕುರಿತು ಮಾತನಾಡುವ ಅಧಿಕಾರ ತಮಗಿದೆ ಎಂಬ ಅವರ ಹಕ್ಕುದಾರಿಕೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಈ ಹಿನ್ನೆಲೆಯನ್ನು ನಾವು ತಿಳಿದುಕೊಳ್ಳಬೇಕು.

ಹಿಂದಿನ ಕಾಲದಲ್ಲಿ ಯಾವುದೇ ನಿರ್ದಿಷ್ಟ ಕ್ಷೇತ್ರದಲ್ಲಿ ಅಥವಾ ವಿಷಯದಲ್ಲಿ ಯಾರಿಗೇ ಜ್ಞಾನ (ಇಲ್ಮ್) ಇರಲಿ, ಅಂತವರನ್ನು “ಆಲಿಮ್” ಅಥವಾ ವಿದ್ವಾಂಸ ಎಂದೇ ಪರಿಗಣಿಸಲಾಗುತ್ತಿತ್ತು. ಕ್ರಮೇಣ ಕಾಣಿಸಿಕೊಂಡ ಬಹಳ ಕಟ್ಟುನಿಟ್ಟಿನ ವರ್ಗೀಕರಣಕ್ಕೆ ಒಳಪಟ್ಟ ಕಸುಬುದಾರರಾದ ಧಾರ್ಮಿಕ ನ್ಯಾಯಾಧೀಶರಿಗೂ(ಫುಖಾಹಾ), ಉಲಮಾಗಳಿಗೂ ಬಹಳ ವ್ಯತ್ಯಾಸವಿತ್ತು. ಇಸ್ಲಾಮ್ ಆರಂಭವಾದ ಮೊದಲ ಎರಡು ಶತಮಾನಗಳಲ್ಲಿ ಉಲಮಾಗಳು ಒಂದು ವಿಶಿಷ್ಟವಾದ ಪ್ರತ್ಯೇಕ ಪಂಗಡ ಎಂದಾಗಲಿ, ಅವರ ಪಾಂಡಿತ್ಯದ ಕಸುಬಿನ ಬಗ್ಗೆ ವ್ಯವಸ್ಥಿತವಾದ ನಿಯಮಗಳಾಗಲಿ ಇರಲಿಲ್ಲ. ಹಾಗೆ ನೋಡಿದರೆ ಉಲಮಾಗಳಲ್ಲಿ ಅನೇಕರು ಬೇರೆ ಬೇರೆ ಉದ್ಯೋಗಗಳನ್ನು ಜೀವನಕ್ಕಾಗಿ ಅವಲಂಬಿಸಿದ್ದರು. ಅದರಲ್ಲಿ ಮುಖ್ಯವಾದದ್ದು ವ್ಯಾಪಾರ. ಜೊತೆಯಲ್ಲೇ ಅವರು ಧಾರ್ಮಿಕ ಶಿಕ್ಷಣ, ಸಲಹೆ, ಉಪದೇಶ ಇತ್ಯಾದಿಗಳನ್ನು ಮಾಡುತ್ತಿದ್ದರು. ಹಲವರು ಈ ಶಿಕ್ಷಣಕ್ಕೆ ಪ್ರತಿಫಲವಾಗಿ ಹಣವನ್ನು ತೆಗೆದುಕೊಳ್ಳಲೂ

ನಿರಾಕರಿಸುತ್ತಿದ್ದರು. ಯಾಕೆಂದರೆ ಧಾರ್ಮಿಕ ಶಿಕ್ಷಣ ಕೊಡುವುದು ಇಸ್ಲಾಮ್ ನಂಬಿಕೆಯ ನೆಲೆಯಲ್ಲಿ ಒಂದು ಸೇವೆಯಾಗಿತ್ತು. ಆದರೆ ಇಸ್ಲಾಮ್‌ನ ಮೂರನೆಯ ಶತಮಾನದಲ್ಲಿ ಕಸುಬುದಾರ ವರ್ಗವಾದ ಫಖಾಹಾಗಳು ಹುಟ್ಟಿಕೊಂಡರು. ಇವರು ಶಿಕ್ಷಣ ಹಾಗೂ ಪಾಂಡಿತ್ಯದ ಕಾರಣದಿಂದಲೇ ತಮ್ಮ ಸಂಪಾದನೆಯನ್ನು ಗಳಿಸುತ್ತಿದ್ದರು. ಫಿಖ್‌ಗಳಲ್ಲೇ ಅನೇಕ ಪ್ರತಿಸ್ಪರ್ಧಿ ಶಾಲೆಗಳು ಹುಟ್ಟಿಕೊಳ್ಳುವ ಮೂಲಕ ಆದ ಸಾಂದರ್ಭಿಕ ಬದಲಾವಣೆ ಅಂತಹ ಪರಿಸ್ಥಿತಿಯ ಸೃಷ್ಟಿಗೆ ಹೇಗೆ ಕಾರಣವಾಯಿತು ಎಂಬುದನ್ನು ಗಮನಿಸಬೇಕು. ಈ ಫಿಖ್‌ಗಳಲ್ಲಿ ಕ್ರಮೇಣ ಹೇರಳವಾಗಿ ನಿಯಮಗಳು ಬಂದವು. ಯಾರನ್ನು ಒಳಗೆ ಸೇರಿಸಬಹುದು, ಯಾರಿಗೆ ಸದಸ್ಯತ್ವ ಕೊಡಬಹದು, ಸಂಕೀರ್ಣವಾದ ಭಾಷಾ ಕೌಶಲ್ಯ, ಉಡುಗೆ ತೊಡುಗೆಯ ಕಟ್ಟುಪಾಡುಗಳು ಇವೆಲ್ಲವು ಫಖಾಹಾವನ್ನು ಮುಸ್ಲಿಮ್ ಜನಸಾಮಾನ್ಯರಿಂದ ಬೇರೆ ಮಾಡಿದವು. ಫಿಖ್‌ನ ಶಾಲೆಗಳು, "ತಕ್ಲೀದ್"ನ್ನು ಪಾಲಿಸುವುದು- ಅಂದರೆ ನ್ಯಾಯಶಾಸ್ತ್ರವನ್ನು ಕುರುಡಾಗಿ ಪಾಲಿಸುವುದು, ಇವೆಲ್ಲಾ ಪ್ರಾಯಶಃ ಇಸ್ಲಾಮ್‌ನ ನಂಬಿಕೆಯನ್ನು ಅಂದಿನ ಆಳುವ ಅರಸರಿಂದ ಸುರಕ್ಷಿತವಾಗಿರಿಸಲು ಕಂಡುಕೊಂಡ ದಾರಿಗಳಿರಬಹುದು. ಆದರೆ ಕೆಲವೇ ಸಮಯದಲ್ಲಿ ರಾಜಕೀಯ ನೇತಾರರು ಫಖಾಹಾವನ್ನು ಒಪ್ಪಿಕೊಳ್ಳುವ ಮೂಲಕ ಈ ಸಂಸ್ಥೆಯನ್ನು ಧಾರ್ಮಿಕ ಪರಿಣಿತರ ಒಂದು ವೃತ್ತಿಪರ ಸಂಸ್ಥೆಯನ್ನಾಗಿ ಬಲಪಡಿಸಿದರು.

ಶತಮಾನಗಳು ಉರುಳಿದಂತೆ ಫಿಖ್‌ನ ಅನೇಕ ಶಾಲೆಗಳು ಹುಟ್ಟಿ ಬೆಳೆದವು. ಸುನ್ನಿಗಳಲ್ಲೇ ಒಂದು ಸಮಯದಲ್ಲಿ ೫೦೦ಕ್ಕೂ ಹೆಚ್ಚು ಶಾಲೆಗಳು (ಮಜಹಬ್) ಇದ್ದವು. ಏನೇ ಆಗಲಿ, ೧೩ನೆಯ ಶತಮಾನದ ಹೊತ್ತಿಗೆ ಇವುಗಳಲ್ಲಿ ನಾಲ್ಕು ಮಾತ್ರ ಉಳಿದವು. ಇಂದು ಹೆಚ್ಚಿನ ಸುನ್ನಿ ಮುಸ್ಲಿಮರು ಈ ನಾಲ್ಕರಲ್ಲಿ ಯಾವುದಾದರೂ ಒಂದು ಶಾಲೆಯ ಜೊತೆ ತಮ್ಮನ್ನು ಗುರುತಿಸಿಕೊಳ್ಳುತ್ತಾರೆ ಮತ್ತು ಈ ನಾಲ್ಕು ಶಾಖೆಗಳು ಕೂಡ ಸಾಕಷ್ಟು ಸಂಪ್ರದಾಯ ನಿಷ್ಠವೇ ಆಗಿದ್ದವು. "ಹನಾಫಿ" (ಅಬು ಹನೀಫಾ ಅಲ್ ನುಮನ್‌ನ ಹಿಂಬಾಲಕರ ಶಾಲೆ, ಕಾಲ ೭೯೫); "ಮಾಲಿಕಿ" (ಮಾಲಿಕ್ ಇಬ್ನ ಅನಾಸ್‌ನ ಹಿಂಬಾಲಕರ ಶಾಲೆ, ಕಾಲ ೭೬೭); "ಶಾಫಿ"(ಮಹಮ್ಮದ್ ಇಬ್ನ ಇದ್ರಿಸ್ ಅಲ್ ಶಾಫಿಯ ಹಿಂಬಾಲಕರ ಶಾಲೆ, ಕಾಲ ೮೨೦) ಮತ್ತು "ಹಾನ್‌ಬಲಿ" (ಅಹಮದ್ ಇಬ್ನ ಹಾನ್‌ಬಲ್‌ನ ಹಿಂಬಾಲಕರ ಶಾಲೆ, ಕಾಲ ೮೫೫)- ಇವು ಮುಖ್ಯವಾಗಿ ಸುನ್ನಿಗಳ ನಾಲ್ಕು ಶಾಲೆಗಳು. ಹೆಚ್ಚಿನ 'ಶಿಯಾ'ಗಳು ತಮ್ಮನ್ನು "ಜಾಫರಿ" ಶಾಲೆಯ ಜೊತೆ ಗುರುತಿಸಿಕೊಳ್ಳುತ್ತಾರೆ. ಜಾಫರಿ ಶಾಲೆ "ಇಮಾಮ್ ಜಾಫರ್ ಅಸ್ ಸಾದಿಕ್" (ಕಾಲ ೭೬೫) ಅವರ ಹಿಂಬಾಲಕರಿಂದ ಹುಟ್ಟಿದ್ದು. ಫಿಖ್‌ನ ಪ್ರತಿ ಶಾಖೆಯೂ "ಇಜ್‌ತಿಹಾದ್"ನ ಮೇಲೆ ಅಂದರೆ ಇಸ್ಲಾಮಿನ ಮೂಲದಲ್ಲಿರುವ ಕಾನೂನುಗಳ ಸ್ವತಂತ್ರ ಹಾಗೂ ಸೃಜನಶೀಲ ವ್ಯಾಖ್ಯಾನಗಳನ್ನು ಖ್ಯಾತನಾದ ಪ್ರವಾದಿ ಮತ್ತು ಅವನ ಮೂಲ ವಿದ್ಯಾರ್ಥಿಗಳು ಹೇಗೆ ಮಾಡಿದರೋ, ಅದರ ಮೇಲೆ ಅವಲಂಬಿತವಾಗಿದೆ. ಆದರೆ ಬಳಿಕ ಜಗತ್ತಿನ ವಿಸ್ತಾರಗಳಲ್ಲಿ ಮತ್ತು ಬೇರೆ ಬೇರೆಯ ಸಾಮಾಜಿಕ ಹಾಗೂ ಆರ್ಥಿಕ ಸಂದರ್ಭಗಳಲ್ಲಿ ಹಬ್ಬಿರುವ ಇಸ್ಲಾಮ್‌ನ ಫಿಖ್‌ಗಳಲ್ಲಿ ಭಿನ್ನ ಭಿನ್ನ

ಅಭಿಪ್ರಾಯಗಳು ಬರುವುದು ಹೆಚ್ಚು ಸಾಮಾನ್ಯವಾಯಿತು. ಹಲವು ಬಗೆಯ ಇಸ್ಲಾಮಿಕ್ ಕಾನೂನುಗಳು- ಉದಾಹರಣೆಗೆ ಅತ್ಯಂತ ವೈಯಕ್ತಿಕವಾಗಿರುವ ಪ್ರಾರ್ಥನೆ ಮಾಡುವಾಗ ದೇಹದ ಭಂಗಿ ಹೇಗಿರಬೇಕು ಎನ್ನುವ ವಿಚಾರ ಅಥವಾ ಮದುವೆ, ವಿಚ್ಛೇದನಗಳಿಗೆ ಸಂಬಂಧಿಸಿದ ನಿಯಮಗಳು ಹೇಗಿರಬೇಕು ಎನ್ನುವುದರಿಂದ ಮೊದಲಾಗಿ, ಅತ್ಯಂತ ಸಾರ್ವಜನಿಕವಾದ ಕರ್ತವ್ಯವಾಗಿರುವ ಮುಸ್ಲಿಮ್ ದೊರೆಯೊಬ್ಬ ಮುಸ್ಲಿಮರಲ್ಲದ ತನ್ನ ಪ್ರಜೆಗಳ ಜೊತೆ ಹೇಗಿರಬೇಕು ಎಂಬುದರ ವರೆಗೆ ಈ ಫಿಖ್‌ಗಳು ಬೇರೆ ಬೇರೆ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದವು. ಈ ಭಿನ್ನಾಭಿಪ್ರಾಯಗಳಿಂದಾಗಿ ಖುರಾನನ್ನು ಹಲವು ಬಗೆಯಲ್ಲಿ ಅರ್ಥೈಸಲಾಗುತ್ತಿತ್ತು ಮತ್ತು ಇದರಿಂದಾಗಿ ಪರಸ್ಪರ ವಿರುದ್ಧವಾದ, ದುರ್ಬಲವಾದ ಹಾಗೂ ಗೊಂದಲಕಾರಿ ಹದೀಸ್ ವರದಿಗಳು ತಯಾರಾಗುತ್ತಿದ್ದವು.

ಹೊಸ ಶಾಖೆಗಳನ್ನು ಆರಂಭಿಸಿದ ಎಲ್ಲ ಇಮಾಮ್‌ಗಳಿಗೂ ಖುರಾನ್ ಮತ್ತು ಸುನ್ನಾಹ್‌ಗಳನ್ನು ತಾವು ತಮ್ಮ ವೈಯಕ್ತಿಕವಾದ "ಇಜ್‌ತಿಹಾದ್"ನ ಮೇಲೆ ಅರ್ಥೈಸಿಕೊಂಡಿದ್ದೇವೆಂದೂ ಮತ್ತು ಅವು ದೋಷಮುಕ್ತ ಅಲ್ಲವೆಂದೂ ಸ್ಪಷ್ಟವಾಗಿ ಅರಿವಿತ್ತು. ತಾವು ತಪ್ಪುಗಳನ್ನು ಮಾಡಬಹುದಾದ ಸಾಮಾನ್ಯ ಮನುಷ್ಯರು ಎಂಬುದನ್ನು ಒಪ್ಪಿಕೊಳ್ಳುತ್ತಾ, ತಾವು ಹೇಳಿದ್ದನ್ನೆಲ್ಲಾ ಕುರುಡಾಗಿ ಸ್ವೀಕರಿಸಬಾರದೆಂದೂ ಅವರು ತಮ್ಮ ಶಿಷ್ಯರಿಗೆ ಎಚ್ಚರಿಕೆ ನೀಡುತ್ತಿದ್ದರು. ಕೆಲವೊಂದು ವಿಷಯಗಳಲ್ಲಿ ತಮ್ಮ ಅಭಿಪ್ರಾಯಗಳು ಖುರಾನ್ ಹಾಗೂ ಸುನ್ನಾಹ್‌ಗಳಿಗೆ ವಿರುದ್ಧವಾಗುವುದಾದರೆ, ಅಂತಹವನ್ನು ಶಿಷ್ಯರು ಒಪ್ಪಿಕೊಳ್ಳಬಾರದೆಂದೂ, ಬದಲಿಗೆ ಅವರು ಪವಿತ್ರ ಗ್ರಂಥವಾದ ಖುರಾನನ್ನು ಮತ್ತು ಪ್ರವಾದಿಯವರ ಜೀವನದ ಉದಾಹರಣೆಗಳನ್ನು ಅನುಸರಿಸಬೇಕೆಂದು ಸಲಹೆ ಕೊಡುತ್ತಿದ್ದರು. "ಮಜಹಬ್"ನ ಸ್ಥಾಪಕರಾದವರ ನೇರ ಅನುಯಾಯಿಗಳು ಕೂಡ ಇದೇ ಬಗೆಯ ಒಂದು ಮುಕ್ತತೆಯನ್ನು ಹೊಂದಿದ್ದರು. ಇವರು ಕಟುವಾದ ಸಿದ್ಧಾಂತಗಳಿಗೆ, ಪ್ರಮಾಣಗಳಿಗೆ ಕಟ್ಟುಬಿದ್ದವರಾಗಿರಲಿಲ್ಲ. ಆದರೆ ಮುಂದೆ ಬಂದ ಉಲಮಾಗಳಿಗೆ ಇದೇ ಮುಖ್ಯ ಮಾನದಂಡವಾದದ್ದು ಒಂದು ದುರಂತ. ಹಿಂದೆ ಒಬ್ಬ ಇಮಾಮನ ಅನುಯಾಯಿಗಳು ಇನ್ನೊಬ್ಬ ಇಮಾಮನ ಅನುಯಾಯಿಗಳಿಂದ ಸಲಹೆಯನ್ನು ಪಡೆಯಲು ಹಿಂಜರಿಯುತ್ತಿರಲಿಲ್ಲ. ಕೆಲವೊಂದು ಫಖಾಹಾಗಳಂತೂ ತಮ್ಮ ಪಂಗಡದ ಗುರುಗಳೇ ಖುರಾನ್ ಮತ್ತು ಹದೀಸ್‌ಗೆ ಅನುಗುಣವಾಗಿ ನಡೆಯದೇ ಇದ್ದಾಗ ಅವರ ಅಭಿಪ್ರಾಯಗಳನ್ನು ಅಲ್ಲಗಳೆಯಲು ಹಿಂದೇಟು ಹಾಕುತ್ತಿರಲಿಲ್ಲ.

ಹೀಗೆ ಇಜ್‌ತಿಹಾದ್, ಫಿಖ್‌ಗೆ ಸದಾ ಒಂದು ಅಂತರ್ಗತ ಚಲನಶೀಲತೆಯನ್ನು ಕೊಡುತ್ತಾ, ಅದು ಬದಲಾಗುತ್ತಿದ್ದ ಕಾಲಮಾನಕ್ಕೆ ತಕ್ಕಂತೆ ತನ್ನನ್ನು ತಾನು ಸಮಕಾಲೀನಗೊಳಿಸಿಕೊಳ್ಳಲು ನೆರವಾಗುತ್ತಿತ್ತು. ಹಾಗಿದ್ದರೂ ಕೂಡ ಇಜ್‌ತಿಹಾದ್ ಕೊಟ್ಟ ಚಲನಶೀಲತೆಯ ಸಾಧ್ಯತೆಗಳು

ಬಹುಕಾಲ ಮುಕ್ತವಾಗಿ ಉಳಿಯಲಿಲ್ಲ. ನಿಧಾನವಾಗಿ ಫಿಖ್ ಎನ್ನುವುದು ಸಂಕೇತಗಳ ಒಂದು ಸರ್ಕಸ್ ಆಗಿ ಬದಲಾಯಿತು, ಇದರಿಂದ ಇಜ್‌ತಿಹಾದ್‌ನ ಸಾಧ್ಯತೆಗಳು ಬಹಳ ಸಂಕುಚಿತವಾದವು. ಇದು ಇಸ್ಲಾಮಿಕ್ ನ್ಯಾಯ ನಿರ್ಣಯಗಳಿಗೆ ಒಂದು ವಿಶಿಷ್ಟವಾದ ಪಿತೃಪ್ರಧಾನತೆಯನ್ನೂ, ಊಳಿಗಮಾನ್ಯ ಗುಣವನ್ನೂ ತಂದಿತು. ಜ್ಞಾನಿಗಳ ಸಲಹೆ- ಮಾರ್ಗದರ್ಶನ ಪಡೆಯಬೇಕು ಎಂದು ಖುರಾನ್ ತನ್ನ ಅನುಯಾಯಿಗಳಿಗೆ ನೀಡಿದ ಸಲಹೆಯನ್ನೇ ಮುಂದಿಟ್ಟುಕೊಂಡು, ಮುಸ್ಲಿಮರು ಪ್ರತಿ ವಿಷಯದಲ್ಲಿಯೂ ಫಿಕ್ ಪರಿಣಿತರ ಮಾರ್ಗದರ್ಶನ ಪಡೆಯಬೇಕು ಎಂಬುದನ್ನು ಒಂದು ಕಟ್ಟುಪಾಡಿನಂತೆ ಜಾರಿಗೆ ತರಲಾಯಿತು. ಈ ಕಟ್ಟುಪಾಡು ಇಂದೂ ಇವೆ. ಮದ್ರಸಾಗಳಲ್ಲಿ ಕಲಿಸುವ ಉಲಮಾಗಳು ಇಂದಿಗೂ ಇದನ್ನೇ ನಿರಂತರವಾಗಿ ಒತ್ತಿ ಹೇಳುತ್ತಿವೆ. ಹಾಗೆ ಫಿಖ್‌ನಲ್ಲಿ ಪರಿಣತರಾದವರು, “ಪ್ರವಾದಿಯ ಉತ್ತರಾಧಿಕಾರಿಗಳು” ತಾವಾಗಿ ಮುಸ್ಲಿಮ್ ಜನಸಮುದಾಯದ ಮೇಲೆ ಹೆಚ್ಚಿನ ಅಧಿಕಾರ ಹೊಂದಿದ್ದಾರೆ ಎಂಬುದನ್ನು ದೃಢೀಕರಿಸಲು ಅನುಕೂಲಕರವಾದ ಹದೀಸ್‌ಗಳನ್ನು ಸೃಷ್ಟಿ ಮಾಡಿದರು. ಹೀಗೆ ಫಿಖ್ ಎನ್ನುವುದು ಅತ್ಯಂತ ಶ್ರೇಷ್ಠವಾದ ಜ್ಞಾನ ಎಂದೂ, ಮನುಷ್ಯರಿಗೆ ಯಾವುದು ತೀರಾ ಮುಖ್ಯ ಎಂದು ಖುರಾನ್ ಪ್ರೋತ್ಸಾಹಿಸಿತ್ತೋ ಅಂತಹ “ಪ್ರಪಂಚ ಜ್ಞಾನ”ವನ್ನು ಎರಡನೆಯ ದರ್ಜೆಯದೆಂದೂ ಪರಿಗಣಿಸಲಾಯಿತು. ಅದನ್ನು ಅವಜ್ಞೆಯಿಂದ ಕಾಣಲಾಯಿತು. ಸಹಜವಾಗಿ ಇಸ್ಲಾಮಿಕ್ ನ್ಯಾಯದಲ್ಲಿ ಪರಿಣತರಾದ ಫಖಾಹಾಗಳ ಮಾತಿಗೆ ಇದರಿಂದ ಇನ್ನಷ್ಟು ಪುಷ್ಟಿ ದೊರಕಿತು. ಮತ್ತು ಇದೇ “ಅಧಿಕೃತವಾದ” ಇಸ್ಲಾಮಿಕ್ ಸಂಪ್ರದಾಯ ಎಂಬಂತಾಯಿತು.

## ಇಸ್ಲಾಮಿಕ್ ಕಲಿಕೆ ಮತ್ತು ರಾಜಕೀಯ ಗಣ್ಯರು:

ಪ್ರವಾದಿಯ ಮರಣಾನಂತರ, ಬಹಳ ಅಲ್ಪಕಾಲದಲ್ಲೇ, ಮುಸ್ಲಿಮ್ ರಾಜ್ಯ ಎನ್ನುವುದು ಒಂದು ದೊಡ್ಡ ಸಾಮ್ರಾಜ್ಯವಾಗಿ ರೂಪಾಂತರಗೊಂಡಿತ್ತು. ಅದು ಪಶ್ಚಿಮದಲ್ಲಿ ಅಟ್ಲಾಂಟಿಕ್ ಸಾಗರದ ಕಡೆಯಿಂದ ಪೂರ್ವದಲ್ಲಿ ಸಿಂಧ್ ಪ್ರಾಂತ್ಯದವರೆಗೂ ಹಬ್ಬಿತ್ತು. ‘ಉಮಯ್ಯಾದ್ ಖಲೀಫಫ’ರ ಆಳ್ವಿಕೆಯಲ್ಲಿ ಆರನೆಯ ಶತಮಾನದ ಮಧ್ಯಭಾಗದಿಂದ ಎಂಟನೆಯ ಶತಮಾನದ ಮಧ್ಯಭಾಗದವರೆಗೆ ಇಸ್ಲಾಮಿಕ್ ಶಿಕ್ಷಣ ಹೆಚ್ಚು ವ್ಯವಸ್ಥಿತ ರೂಪಗಳನ್ನು ಪಡೆಯಿತು. ಅರೇಬಿಯನ್ ಪರ್ಯಾಯ ದ್ವೀಪದ ಹೊರಗೆ ಎಲ್ಲೆಲ್ಲ ಇಸ್ಲಾಮ್ ಹೊಸ ಪ್ರದೇಶಗಳನ್ನು ಗೆದ್ದುಕೊಂಡಿತೊ, ಅಲ್ಲೆಲ್ಲ ನೂರಾರು “ಸಾಹಬಾ”ಗಳು ಮಸೀದಿ ಶಾಲೆ (ಮಕ್ತಬ್)ಗಳನ್ನು ಆರಂಭಿಸಿದವು. ಪ್ರಾರಂಭದಲ್ಲಿ ವೃತ್ತಿಪರ ಅಧ್ಯಾಪಕರಾಗಲೀ, ಪೂರ್ಣಕಾಲಿಕ ಅಧ್ಯಾಪಕರಾಗಲೀ ಇರಲಿಲ್ಲ. ಯಾರು ಖುರಾನ್, ಹದೀಸ್ ಮತ್ತು ಫಿಖ್‌ಗಳನ್ನು ಪ್ರತಿಫಲದ ಅಪೇಕ್ಷೆ ಇಲ್ಲದೆ ಸ್ವಯಂಪ್ರೇರಿತರಾಗಿ ವಿದ್ಯಾರ್ಥಿಗಳಿಗೆ ಮಸೀದಿಗಳಲ್ಲಿ ಮತ್ತು ಜನರ ಮನೆಗಳಲ್ಲಿಯೇ ಹೇಳಿಕೊಡುತ್ತಿದ್ದರೋ ಅವರು ಈ ಮಕ್ತಬ್‌ಗಳಲ್ಲಿ ಹೇಳಿಕೊಡಲು ಆರಂಭಿಸಿದರು. ಇಂತಹ ಶಿಕ್ಷಕರು ಜೀವನೋಪಾಯಕ್ಕೆ ಬೇರೆ

ಬೇರೆ ವೃತ್ತಿಗಳನ್ನು ಅವಲಂಬಿಸಿದ್ದರು. ಏನೇ ಆಗಲಿ, ಕಾಲಕ್ರಮೇಣ ಬಂದ ಖಲೀಫರು ಮುಸ್ಲಿಮ್ ಮಕ್ಕಳಿಗೆ ಖುರಾನನ್ನು ಕಲಿಸಲು ಬರುವ ಶಿಕ್ಷಕರಿಗೆ ಹಣ ಪಾವತಿಸುವ ಪದ್ಧತಿಯನ್ನು ಜಾರಿಗೆ ತಂದರು.

ಅರೇಬಿಯನ್ ಪರ್ಯಾಯ ದ್ವೀಪದ ಹೊರಗೆ ಇಸ್ಲಾಮ್ ಹಬ್ಬಿದಂತೆಲ್ಲ ಮುಸ್ಲಿಮರು ಹೊಸ ಹೊಸ ವಿಷಯಗಳನ್ನು ಕಲಿತು ಅಳವಡಿಸಿಕೊಳ್ಳಲು ಮೊದಲು ಮಾಡಿದರು. ಕುಫಾ, ಬಾಗ್ದಾದ್, ಡಮಾಸ್ಕಸ್, ಕೈರೋ ಮತ್ತು ಕಾರ್ಡೋಬಾದಂತಹ ಪಟ್ಟಣಗಳು ಪ್ರಮುಖ ಇಸ್ಲಾಮ್ ಶಿಕ್ಷಣ ಕೇಂದ್ರಗಳಾಗಿ ರೂಪುಗೊಂಡವು. ಹೊಸಬರಾದವರಿಗೆ ಅಂದರೆ ಅರೇಬಿಕ್ ಅಲ್ಪ-ಸ್ವಲ್ಪ ತಿಳಿದವರು ಅಥವಾ ಏನೂ ತಿಳಿಯದವರಿಗೆ ಕಲಿಯಲೆಂದೇ ಅರೇಬಿಕ್ ವ್ಯಾಕರಣ, ಛಂದಸ್ಸು, ಪಠಣ ಮತ್ತು ವಾಕ್ಚಾತುರ್ಯ ಮುಂತಾದ ಶಿಸ್ತುಗಳನ್ನು ಅಭಿವೃದ್ಧಿಗೊಳಿಸಲಾಯಿತು. ಗ್ರೀಕ್ ತತ್ವಶಾಸ್ತ್ರಕ್ಕೆ ಪ್ರತಿಯಾಗಿ ಕಲಾಮ್ ಮತ್ತು ದೈವಶಾಸ್ತ್ರ (ಥಿಯಾಲಜಿ) ಶಿಸ್ತುಗಳು ಹುಟ್ಟಿಕೊಂಡವು. ಗ್ರೀಕ್ ತತ್ವಶಾಸ್ತ್ರದ ತರ್ಕಗಳನ್ನೇ ಸಲಕರಣೆಗಳನ್ನಾಗಿ ಉಪಯೋಗಿಸಿಕೊಂಡು, ಇಸ್ಲಾಮ್‌ನೊಳಗೆ ಬಂದ ವಿಚಾರವಾದಿಗಳಾದ "ಮುತಾಜಿಲ್ಹ"ರ ಮತ್ತು "ಇಸ್ಮಾಯಿಲಿ"ಗಳ ವಾದಗಳನ್ನು ನಿರಾಕರಿಸಲು ತೊಡಗಿದರು. ಇವುಗಳ ಜೊತೆಯಲ್ಲೇ ಬೇರೆ ವಿಷಯಗಳಾದ ಸಾಹಿತ್ಯ, ಇತಿಹಾಸ, ವೈದ್ಯಕೀಯ, ತರ್ಕ ಮತ್ತು ಪ್ರವಾದಿಯ ಜೀವನ ಚರಿತ್ರೆ ಮುಂತಾದ ಅಧ್ಯಯನಗಳು ಅಭಿವೃದ್ಧಿಗೊಂಡವು. ಹೆಚ್ಚು ಕಡಿಮೆ ಎಲ್ಲಾ ಮುಸ್ಲಿಮ್ ಪ್ರದೇಶಗಳಲ್ಲೂ ಈ ಎಲ್ಲ ವಿಷಯಗಳನ್ನು ಕಲಿಸಲಾಗುತ್ತಿದ್ದರೂ, ಆಯಾ ಪ್ರದೇಶಗಳ ಭೌಗೋಳಿಕ ಬದಲಾವಣೆಗಳು ಸ್ಥಳೀಯ ವಿವರಗಳಿಗೆ ಸಂಬಂಧಿಸಿದಂತೆ ಕೆಲವು ಪ್ರಭಾವವನ್ನು ಬೀರುತ್ತಿದ್ದವು. ಏನೇ ಆಗಲಿ ಪ್ರಯಾಣ ಮತ್ತು ಪ್ರವಾಸಗಳಿಂದಾಗಿ ಹಾಗೂ ವಿಶೇಷವಾಗಿ ಮೆಕ್ಕಾದ ವಾರ್ಷಿಕ ತೀರ್ಥಯಾತ್ರೆಗಳಿಂದಾಗಿ ಅನೇಕ ಮುಸ್ಲಿಮರು ಬೇರೆ ಬೇರೆ ಪ್ರದೇಶಗಳಿಂದ ಬಂದು ಸೇರುತ್ತಿದ್ದರು. ಅಷ್ಟೇ ಅಲ್ಲ, ಇದರಿಂದಾಗಿ ಪರಸ್ಪರರ ಮಧ್ಯೆ ಇಸ್ಲಾಮಿನ ವಿದ್ವಾಂಸ ಪರಂಪರೆಯನ್ನು ಬೆಳೆಸಲು ಕಾರಣವಾದ ಅನೇಕ ವಿಚಾರಗಳು, ಸಿದ್ಧಾಂತಗಳು ಮತ್ತು ಬರಹಗಳ ವಿನಿಮಯವೂ ನಡೆಯುತ್ತಿತ್ತು.

**ಜ್ಞಾನಧಾರೆಗೆ ಮುಸ್ಲಿಮರ ಕೊಡುಗೆ:**

ಮುಸ್ಲಿಮರ ಪ್ರಕಾರ ಇಸ್ಲಾಮ್ ಬರುವುದಕ್ಕಿಂತ ಮೊದಲು ಅರೇಬಿಯಾ 'ಅಜ್ಞಾನ'ದಲ್ಲಿ (ಜಹೀಲಿಯ್ಯ) ಮುಳುಗಿತ್ತು. ಆದರೆ ಪ್ರವಾದಿಯವರಿಂದ ಆರಂಭವಾದ ಕ್ರಾಂತಿ ವಿವಿಧ ವಿಜ್ಞಾನಗಳಿಗೆ ಅರಬ್ಬರು ತಮ್ಮ ಕೊಡುಗೆಯನ್ನು ಕೊಡುವಂತೆ ಮಾಡಿತು. ಜಗತ್ತಿನ ನಾಗರೀಕತೆಗಳ ಇತಿಹಾಸದಲ್ಲಿ ಮುಸ್ಲಿಮರು ವಿಜ್ಞಾನಕ್ಕೆ ಕೊಟ್ಟ ಕೊಡುಗೆ ಎಂಬುದು ಒಂದು ಸುವರ್ಣ ಅಧ್ಯಾಯ. ಇಸ್ಲಾಮ್‌ನ ಕಟು ವಿಮರ್ಶಕನಾದ ಬರ್ನಾರ್ಡ್ ಲೆವಿಸ್ ಕೂಡ "ಮಧ್ಯಯುಗದ ಆರಂಭದ ಮುಸ್ಲಿಮ್ ಸಮುದಾಯವು ಅಲ್ಲಿಯವರೆಗಿನ ಮನುಷ್ಯರ ಇತಿಹಾಸದಲ್ಲಿಯೇ ಕಲೆ, ವಿಜ್ಞಾನಗಳಲ್ಲಿ ಎಲ್ಲ ನಾಗರೀಕತೆಗಳಿಗಿಂತ ಹೆಚ್ಚಿನ ಮಟ್ಟವನ್ನು ಸಾಧಿಸಿತ್ತು." ಎಂಬ ಮಾತನ್ನು ಒಪ್ಪುತ್ತಾರೆ. ಇನ್ನೂ

ಮುಂದುವರಿದು "ಹೆಚ್ಚಿನ ನಾಗರೀಕತೆಗಳಲ್ಲಿ ಕಲೆ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಧ್ಯಕಾಲೀನ ಯೂರೋಪ್ ಒಂದು ವಿದ್ಯಾರ್ಥಿಯಂತೆ ಭಾಸವಾಗುತ್ತಿತ್ತು ಮತ್ತು ಒಂದರ್ಥದಲ್ಲಿ ಇಸ್ಲಾಮ್ ಜಗತ್ತಿನ ಮೇಲೆಅವಲಂಬಿತವಾಗಿತ್ತು" ಎಂದೂ ಹೇಳುತ್ತಾರೆ. ಮುಸ್ಲಿಮರ ಮೂಲಕ ಮೊದಲ ಬಾರಿಗೆ ಕಾಗದವು ಯೂರೋಪನ್ನು ತಲುಪಿತು. ಹಾಗೆಯೇ ಇಸ್ಲಾಮ್ ಶಿಕ್ಷಣದ ಪ್ರಭಾವದಿಂದಾಗಿಯೇ ಯೂರೋಪಿಯನ್ ಪುನರುತ್ಥಾನ ಸಾಧ್ಯವಾಯಿತು ಅಥವಾ ಈ ಪ್ರಭಾವ ಇಲ್ಲದಿರುತ್ತಿದ್ದರೆ ಅದು ಬೇರೆಯೇ ದಾರಿಯನ್ನು ಹಿಡಿಯುತ್ತಿತ್ತು ಎಂದೂ ಅಭಿಪ್ರಾಯ ಪಡುತ್ತಾರೆ.

೮ನೆಯ ಶತಮಾನದಿಂದ ೧೩ನೆಯ ಶತಮಾನದವರೆಗೆ ಉಮಯ್ಯಾದ್ ಮತ್ತು ಅಬ್ಬಾಸಿದರ ಆಳ್ವಿಕೆಯ ಕಾಲದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಅನೇಕ ಬೆಳವಣಿಗೆಗಳಾದವು. ಇಂತಹ ಅಗಾಧ ಪ್ರಮಾಣದಲ್ಲಿ ಜ್ಞಾನದ ಅರಳುವಿಕೆಯು ಪ್ರಭುತ್ವದ ಆಶ್ರಯವಿಲ್ಲದೆ ಸಾಧ್ಯವಿಲ್ಲ. ಖಲೀಫರು ವಿಜ್ಞಾನಿಗಳನ್ನು ಉದಾರವಾಗಿ ಪೋಷಿಸಿದರು. ಇದರಲ್ಲಿ ಮುಸ್ಲಿಮರಲ್ಲದೆ ಇತರರೂ ಇದ್ದರು. ಅಷ್ಟೇ ಅಲ್ಲ, ಕೆಲವು ಖಲೀಫರು ಸ್ವತಃ ಹಲವು ಬಗೆಯ ಜ್ಞಾನಶಾಖೆಗಳಲ್ಲಿ ಗ್ರಂಥಗಳನ್ನು ಬರೆದವರಾಗಿದ್ದರು. ಉಮಯ್ಯಾದ್ ಖಲೀಫರು ಪ್ರಬಲರಾದ ಮೇಲಂತೂ ಗ್ರೀಕ್, ಕಾಪ್ಟಿಕ್ (ಈಜಿಪ್ಟ್ನ ಮೂಲ ಕ್ರಿಶ್ಚಿಯನ್ನರನ್ನು ಕಾಪ್ಟ್ ಎಂದು ಕರೆಯುತ್ತಾರೆ.), ಪರ್ಶಿಯನ್ ಮತ್ತು ಸಂಸ್ಕೃತದ ಗ್ರಂಥಗಳನ್ನು ಅರೇಬಿಕ್ ಭಾಷೆಗೆ ಭಾಷಾಂತರ ಮಾಡುವ ದೊಡ್ಡ ಆಂದೋಲನವೇ ಆರಂಭವಾಯಿತು. ತತ್ವಶಾಸ್ತ್ರ, ವಿಜ್ಞಾನ, ಗಣಿತ, ಸಾಹಿತ್ಯ ಮತ್ತು ಇತಿಹಾಸ ಹೀಗೆ ಅನೇಕ ವಿಷಯಗಳ ಭಾಷಾಂತರ ನಡೆಯಿತು. ಹಾಗೇ ಅಬ್ಬಾಸಿದರು ಕೂಡ ಶಿಕ್ಷಣವನ್ನು ಉತ್ತೇಜಿಸಲು ಇನ್ನೂ ಹೆಚ್ಚಿನ ಉತ್ಸಾಹವನ್ನು ತೋರಿದರು. ಅನೇಕ ಹೊಸ ಶಾಲೆಗಳನ್ನೂ, ಗ್ರಂಥಾಲಯಗಳನ್ನೂ ಕಟ್ಟಿಸಿದರು. ಅಬ್ಬಾಸಿದರ ಖಲೀಫನಾದ ಎರಡನೆಯ 'ಅಲ್ ಹಕೀಮ್' ಎಂಬುವವನು ಅನೇಕ ದೇಶಗಳಿಂದ ಅನೇಕ ಪುಸ್ತಕಗಳನ್ನು ತರಿಸಲು ಅಪ್ಪಣೆ ಮಾಡಿದ್ದನಂತೆ. ಇವುಗಳ ಪುಸ್ತಕ ಪಟ್ಟಿಯೇ ಸುಮಾರು ೪೦ ಸಂಪುಟಗಳನ್ನು ತುಂಬುವಷ್ಟು ಆಗಿತ್ತಂತೆ. ಅಲ್ ಹಕೀಮ್ ಇದರಲ್ಲಿ ಹೆಚ್ಚಿನ ಪುಸ್ತಕಗಳನ್ನು ಅರೇಬಿಕ್ ಭಾಷೆಗೆ ಅನುವಾದ ಮಾಡಿಸಿದನೆಂದು ಪ್ರತೀತಿ. ಬಹಳ ಪ್ರಸಿದ್ಧನಾಗಿದ್ದ 'ಹಾರೂನ್ ಅಲ್ ರಶೀದ್' (ಕಾಲ ೭೮೬-೮೦೯) ಬಾಗ್ದಾದ್‌ನಲ್ಲಿ "ಅರಿವಿನ ಮನೆ"(ಬಾಯ್ತ ಅಲ್ ಹಿಕ್‌ಮತ್)ಯನ್ನು ಸ್ಥಾಪಿಸಿ ಯಹೂದಿ, ಕ್ರಿಶ್ಚಿಯನ್ ಹಾಗೂ ಮುಸ್ಲಿಮ್ ವಿದ್ವಾಂಸರಿಂದ ಅನೇಕ ಗ್ರಂಥಗಳನ್ನು ಅನುವಾದಿಸಿದ. ಅಬ್ಬಾಸಿದರ ಕೀರ್ತಿಯ ಉತ್ತುಂಗದ ಕಾಲದಲ್ಲಿ ಬಾಗ್ದಾದ್‌ನಲ್ಲಿ ಅನೇಕ ಶಾಲೆಗಳು ಹಾಗೂ ಸುಮಾರು ೭೨ ಗ್ರಂಥಾಲಯಗಳೂ ಇದ್ದವಂತೆ. ಅವುಗಳಲ್ಲಿ ಹೆಚ್ಚಿನವನ್ನು ಮಂಗೋಲರ ದೊರೆಯಾದ ಹುಲಾಕು ಖಾನ್ ೧೨೫೭ರಲ್ಲಿ ಸಂಪೂರ್ಣವಾಗಿ ನಾಶ ಮಾಡಿದ. ಖಲೀಫರನ್ನು ಕೊಂದ ಮತ್ತು ಅಬ್ಬಾಸಿದ್ ಖಲೀಫರ ಆಳ್ವಿಕೆಯನ್ನೇ ಕೊನೆಗೊಳಿಸಿದ.

## ವಿಚಾರವಾದಿಗಳು ಮತ್ತು ಇಸ್ಲಾಮಿಕ್ ಸಂಪ್ರದಾಯವಾದದ ಬೆಳವಣಿಗೆ:

ಪ್ರವಾದಿಯ ಮರಣಾನಂತರ ಅರೇಬಿಯನ್ ಪರ್ಯಾಯದ್ವೀಪದ ಆಚೆಗೂ ಇಸ್ಲಾಮ್ ಹಬ್ಬಿದಂತೆ, ಮುಸ್ಲಿಮರು ಹೊಸ ಸಂಸ್ಕೃತಿಗಳ ಸಂಪರ್ಕಕ್ಕೆ ಬಂದರು. ಈ ಹೊಸ ಸಂಸ್ಕೃತಿಗಳಲ್ಲಿ ಹೆಚ್ಚಿನವು ಹೆಲೆನಿಕ್(ಗ್ರೀಕ್) ನಾಗರಿಕತೆಯ ಪ್ರಭಾವಕ್ಕೆ ಒಳಗಾಗಿ ರೂಪುಗೊಂಡಂತವಾಗಿದ್ದವು. (ಹೆಲ್ಲಾಸ್ ಎನ್ನುವುದು ಗ್ರೀಸ್ ಅನ್ನುವುದಕ್ಕೆ ಮೂಲದಲ್ಲಿ ಸಂವಾದಿಯಾದ ಹೆಸರು. ಇದರಿಂದ ಹೆಲೆನಿಸ್ಟಿಕ್ ಎನ್ನುವ ಪದ ಹುಟ್ಟಿಕೊಂಡಿತು. ಇಲ್ಲಿ ಹೆಲೆನಿಕ್ ನಾಗರೀಕತೆ ಎಂದರೆ ಗ್ರೀಸಿನ ನಾಗರೀಕತೆ ಎಂದರ್ಥ). ಗ್ರೀಕ್ ತತ್ವಶಾಸ್ತ್ರವು ಅನುವಾದಿತ ಗ್ರಂಥಗಳ ಮೂಲಕ ಅನೇಕ ಮುಸ್ಲಿಮ್ ಬುದ್ಧಿಜೀವಿಗಳನ್ನು ಪ್ರಭಾವಿಸಿತು. ಅರೇಬಿಕ್ ಭಾಷೆಗೆ ಅನುವಾದಗೊಂಡ ಗ್ರಂಥಗಳು ಇಸ್ಲಾಮ್‌ನಲ್ಲಿ ಬಹಳ ಬಲವಾದ ವಿಚಾರವಾದದ ಪ್ರವೃತ್ತಿಯನ್ನು ಬೆಳೆಸಿದವು. ಲನೆಯ ಶತಮಾನದಿಂದೀಚೆಗೆ ವಿಚಾರವಾದಿ ಪಂಗಡವಾದ ಮುತಾಜಿûಲರು ಈ ಪ್ರವೃತ್ತಿಗೆ ಉದಾಹರಣೆಗಳಾದರು. ಮುತಾಜಿಲ ವಿಚಾರವಾದಿಗಳು ತರ್ಕ (ಅಕಲ್) ಮತ್ತು ನ್ಯಾಯ (ಅದಲ್)ದ ಮಹತ್ವವನ್ನು ಒತ್ತಿ ಹೇಳಿದರು. ಇಸ್ಲಾಮ್‌ನಲ್ಲಿ ಸ್ವತಂತ್ರ ಯೋಚನೆಗಳಿಗೆ ಸ್ಥಾನ ಇಲ್ಲ ಎಂದು ಆಗ್ರಹ ಮಾಡುತ್ತಿದ್ದ ಉಲಮಾಗಳ ವಿರುದ್ಧವಾಗಿ ಮಾತಾಡಿದರು. ಮುತಾಜಿಲ ವಿಚಾರವಾದಿಗಳು ಖುರಾನ್ ಎಂಬುದು ದೇವರ ಅಂತಿಮ ಸತ್ಯವಲ್ಲ; ಶಾಶ್ವತ ಮಾತಲ್ಲ ಎಂಬುದನ್ನು ಒತ್ತಿ ಹೇಳಿದರು ಮತ್ತು ಹಾಗೆ ಭಾವಿಸಿದರೆ ಅಲ್ಲಾಹುವಿನ ಅನನ್ಯತೆಗೆ ಭಂಗ ಬರುತ್ತದೆ ಎಂದು ವಾದಿಸಿದರು. ಖುರಾನ್ ಎಂಬುದು ಅಲ್ಲಾಹು/ ದೇವರು  ಸೃಷ್ಟಿಸಿದ ನುಡಿಯಾದ್ದರಿಂದ ಮನುಷ್ಯನ ಜ್ಞಾನ ವಿಸ್ತರಿಸಿದಂತೆ, ವಿಚಾರಶಕ್ತಿಯ ಬಲದಿಂದ ಅದನ್ನು ಹೊಸ ರೀತಿಯಲ್ಲಿ ವ್ಯಾಖ್ಯಾನ ಮಾಡಲು ಸಾಧ್ಯ ಮತ್ತು ಈ ಪವಿತ್ರ ಬರಹಗಳಿಗೆ ಹೊಸ ಅರ್ಥಗಳನ್ನು ಕೊಡಲು ಸಾಧ್ಯ ಎನ್ನುತ್ತಾರೆ ಮುತಾಜಿಲರು. ಇವರ ಪ್ರತಿಸ್ಪರ್ಧಿಗಳಾದ “ಅಶಾರಿ”ಗಳು (ಸುನ್ನಿ ಇಸ್ಲಾಮ್‌ನಲ್ಲಿ ಬಂದ ಒಂದು ಪಂಗಡ, ಇವರನ್ನು ಕ್ರಮೇಣ ಅಶಾರಿ ಅಥವಾ ಅಶರೈಟ್ಸ್ ಎಂದು ಕರೆದರು) ಇದಕ್ಕೆ ವಿರುದ್ಧವಾಗಿ ವಾದಿಸಿದರು. ಸತ್ಯದೇವನ ರೀತಿಗಳು ಮಾನವನ ತರ್ಕಕ್ಕೆ ಮೀರಿದ್ದು ಮತ್ತು ಅವುಗಳನ್ನು ಪ್ರಶ್ನೆ ಮಾಡದೆ ಒಪ್ಪಿಕೊಳ್ಳಬೇಕು ಎಂದು ಪ್ರತಿಪಾದಿಸಿದರು. ಖುರಾನ್ ಸತ್ಯದೇವನು ಹೇಳಿದ ಶಾಶ್ವತ ಪದಗಳೇ ಸರಿ ಎಂಬುದಾಗಿ ಚರ್ಚೆ ಮಾಡುತ್ತಾ ಆ ಕಾರಣದಿಂದಲೇ ಖುರಾನನ್ನು ‘ಒಂದು ಬಗೆಯಲ್ಲಿ ಮಾತ್ರ’ ಅರ್ಥೈಸಬಹುದು ಮತ್ತು ಅದು ಯಾವತ್ತಿಗೂ ಬದಲಾಗುವುದಿಲ್ಲ, ಇದು ಖುರಾನಿನ ಅಕ್ಷರಶಃ ವ್ಯಾಖ್ಯಾನವಾಗಿರುತ್ತದೆ ಎಂದು ಸಾರಿದರು. ಮುತಾಜಿûಲರಿಗೆ ವಿರುದ್ಧವಾಗಿ ಸ್ವತಂತ್ರವಾದ ಯೋಚನೆಗಳನ್ನು, ಇಚ್ಛೆಗಳನ್ನು ವಿರೋಧಿಸಿದರು. ಹಾಗೆಯೇ ಮನುಷ್ಯರ ಎಲ್ಲ ಕೃತ್ಯಗಳು, ಅವು ಒಳ್ಳೆಯದಿರಲಿ ಅಥವಾ ಕೆಟ್ಟದ್ದಿರಲಿ, ಅವೆಲ್ಲವೂ ಸತ್ಯದೇವನ ಇಚ್ಛೆಯಂತೆ ನಿರ್ಮಿತವಾದದ್ದು ಮತ್ತು ಮನುಷ್ಯರಾದವರಿಗೆ ಆಯ್ಕೆ ಮಾಡುವ ಅವಕಾಶವೇ ಇಲ್ಲ ಎಂದರು. “ಅಶಾರಿ ವಿದ್ವಾಂಸರು ತಮ್ಮ ಧರ್ಮಶಾಸ್ತ್ರ (ಇಲ್ಮ್ ಅಲ್

ಕಲಾಮ್)ವನ್ನು ಗ್ರೀಕ್ ತತ್ವಶಾಸ್ತ್ರದ ಉಪಕರಣಗಳನ್ನು ಬಳಸಿ ರೂಪಿಸಿಕೊಂಡರು" ಎಂದು ಮುತಾಜಿ಺ಲರು ಟೀಕಿಸಿದರು. ಈ ಟೀಕೆಗೆ ಪ್ರತಿಯಾಗಿ ಅಶಾರಿಗಳು ಮೇಲಿನ ವಾದವನ್ನು ಮಂಡಿಸಿದರು. ಇಂದು ಮದ್ರಸಾಗಳಲ್ಲಿ ಪಾಠ ಮಾಡುವ ಎಲ್ಲ ಉಲಮಾಗಳು ತಮ್ಮನ್ನು ಅಶಾರಿಗಳ ಉತ್ತರಾಧಿಕಾರಿಗಳೆಂದು ತಿಳಿಯುತ್ತಾರೆ, ಅಷ್ಟೇ ಅಲ್ಲ ತಮ್ಮ ಬರಹಗಳ ಮೂಲಕ 'ಅಶರೈಟ್ ನಂಬಿಕೆ'ಯನ್ನು ಉಪದೇಶ ಮಾಡುತ್ತಾರೆ. ಇಂದಿಗೂ ಹಳೆಯ ಆದರ್ಶವಾದ 'ಕಲಾಮ್' ಅನ್ನು "ಅದು ಹತಾಶೆ ಹುಟ್ಟಿಸುವಷ್ಟು ಅಪ್ರಸ್ತುತವಾಗಿದೆ" ಎಂದು ವಿರೋಧಿಗಳು ಕಟುವಾಗಿ ಟೀಕಿಸಿದರೂ ಅದನ್ನೇ ವಿದ್ಯಾರ್ಥಿಗಳಿಗೆ ಪಾಠ ಮಾಡುತ್ತಾರೆ.

ಅಲ್ಪಕಾಲ ರಾಜಾಶ್ರಯವನ್ನು ಪಡೆದ ಮುತಾಜಿಲರು ಅಧಿಕಾರಿಗಳ ದ್ವೇಷಕ್ಕೆ ಗುರಿಯಾದರು, ಅಷ್ಟೇ ಅಲ್ಲ ತಮ್ಮ ನಂಬಿಕೆಗಳಿಗಾಗಿ ಅವರು ಶಿಕ್ಷೆಯನ್ನೂ ಅನುಭವಿಸಬೇಕಾಯಿತು. ಸರಳವಾದ ಬುಡಕಟ್ಟಿನ ಪ್ರಜಾಪ್ರಭುತ್ವದಂತಿದ್ದ ಇಸ್ಲಾಮ್ ಈಗ ಖಲೀಫರನ್ನು ಹೊಂದಿದ ಶ್ರೇಣೀಕೃತವಾದ ಊಳಿಗಮಾನ್ಯ ಪದ್ಧತಿಯ ಕಡೆಗೆ ವಾಲಿತು. ಅಷ್ಟೇ ಅಲ್ಲ ಅಶಾರಿಗಳ ನಿಲುವನ್ನು ತನ್ನ ವಾದಕ್ಕೆ ನ್ಯಾಯಬದ್ಧತೆಯನ್ನು ತಂದುಕೊಡುವ ಒಂದು ಶಕ್ತಿಯುತವಾದ ಸೈದ್ಧಾಂತಿಕ ಆಯುಧವನ್ನಾಗಿ ಬಳಸಿಕೊಂಡಿತು. ಒಂದು ವೇಳೆ, ಎಲ್ಲ ಕೃತ್ಯಗಳು ಅವು ಒಳ್ಳೆಯದಿರಲಿ ಅಥವಾ ಕೆಟ್ಟದ್ದಿರಲಿ ಅಲ್ಲಾಹುವಿನಿಂದಲೆ ನಿರ್ಣಯಿಸಲ್ಪಟ್ಟಿದ್ದರೆ ಖಲೀಫರ ಸೊಕ್ಕು, ಅಧಿಕಾರ ಮತ್ತು ಅನುಕೂಲಗಳು ಕೂಡ ದೈವೇಚ್ಛೆಯೇ ಆಗಿರಬೇಕಲ್ಲವೇ. ಅಶರೈಟ್ಸ್ ಮತ್ತು ಊಳಿಗಮಾನ್ಯ ಇಸ್ಲಾಮ್ ಪ್ರಭುತ್ವಗಳ ಈ ಅಪವಿತ್ರ ಮೈತ್ರಿಗೆ ಪೂರಕವಾಗಿ ಬಹುಸಂಖ್ಯೆಯಲ್ಲಿ ನಕಲಿ ಹದೀಸ್ ವರದಿಗಳನ್ನು ತಯಾರಿಸಿ ಮಹಮ್ಮದ್ ಅವರ ಹೇಳಿಕೆಗಳನ್ನು ತಿರುಚಿ ತಮ್ಮನ್ನು ಜನ ಒಪ್ಪುವಂತೆ ಒತ್ತಡ ಹೇರಲಾಯಿತು ಮತ್ತು ಎಲ್ಲಾ ಬಗೆಯ ಪ್ರತಿರೋಧವನ್ನೂ ಬಗ್ಗುಬಡಿಯಲಾಯಿತು. ಸಂಪ್ರದಾಯಗಳನ್ನು ತಿರುಚಿ ಅನ್ಯಾಯ ಮತ್ತು ಶೋಷಣೆ ಮಾಡುವ ಪ್ರಭುಗಳ ವಿರುದ್ಧ ಮುಸ್ಲಿಮರು ಧ್ವನಿ ಎತ್ತದಂತೆ, ಅರಾಜಕತೆ(ಫಿತ್ನಾ)ಗಿಂತ* ಅನ್ಯಾಯ(ಜುಲ್ಮ್)ವಾದರೂ ಆದೀತು ಎಂಬ ಕಪಟ ಸತ್ಯದ ನೆಪವನ್ನು ಹೇಳುತ್ತಾ, ಖುರಾನಿನ ತುಂಬಾ 'ಅನ್ಯಾಯದ ವಿರುದ್ಧ ಹೋರಾಡಬೇಕು' ಎನ್ನುವ ಉಪದೇಶ ಹೇರಳವಾಗಿದ್ದರೂ ಅದನ್ನು ಮರೆಮಾಚಲಾಯಿತು. ಭಿನ್ನಾಭಿಪ್ರಾಯ ಹೊಂದಿರುವ ಪಂಗಡಗಳನ್ನು ಅವಮಾನಿಸಿ, ಖಂಡಿಸುವುದಕ್ಕಾಗಿ ಹಲವು ಬಗೆಯ ಹದೀಸ್ ವರದಿಗಳನ್ನು ತಯಾರಿಸಲಾಯಿತು. ಯಾಕೆಂದರೆ ಇಂತಹ ಕೆಲವು ಗುಂಪುಗಳು ಕ್ರಮೇಣ ಬಂದ ದಬ್ಬಾಳಿಕೆಯ ಖಲೀಫರ ಆಡಳಿತವನ್ನು ತೀವ್ರವಾಗಿ ವಿರೋಧಿಸಿದ್ದವು. ಈ ನಕಲಿ ಹದೀಸ್‌ಗಳನ್ನು ಸೃಷ್ಟಿ ಮಾಡುವ ಕೆಲಸದಲ್ಲಿ ಆಳುವ ಪ್ರಭುಗಳೊಂದಿಗೆ ಕೈಜೋಡಿಸಿದ್ದ ಉಲಮಾಗಳು ಪ್ರಧಾನ ಪಾತ್ರವನ್ನು ವಹಿಸಿದರು. ಪ್ರತಿಫಲವಾಗಿ ಆಳುವ ದೊರೆಗಳಿಂದ ಅವರಿಗೆ ಉದಾರವಾದ ಸಹಾಯ ದೊರೆಯಿತು.

ಪ್ರಭುತ್ವದ ಜೊತೆಗಿನ ಅವರ ನಿಕಟ ಸಂಪರ್ಕದಿಂದಾಗಿ ನಿಧಾನವಾಗಿ 'ಅಶರೈಟ್ ಉಲಮಾ'ಗಳು ನಿಜವಾದ ಇಸ್ಲಾಮ್ ಸಂಪ್ರದಾಯವನ್ನು ಪ್ರತಿನಿಧಿಸುವವರು ಎಂಬ ಭಾವನೆ ಬಂತು. ಇದಕ್ಕೆ ಸರಿಯಾಗಿ ಪ್ರತಿಭಟಿಸುವ ಪಂಗಡಗಳು 'ಅಸಾಂಪ್ರದಾಯಿಕ' ಎಂಬ ನಿಂದನೆಗೆ ಒಳಗಾದವು. ಅವುಗಳನ್ನು ಬಲವಂತವಾಗಿಯಾದರೂ ಮಟ್ಟ ಹಾಕಬೇಕು ಎಂಬ ಅಭಿಪ್ರಾಯ ಬೆಳೆಯಿತು. ಇತಿಹಾಸದ ಪುಟಗಳನ್ನು ತಿರುವಿದರೆ, ಒಂದಂತೂ ಅಚ್ಚೊತ್ತಿದಂತೆ ಕಾಣಿಸುತ್ತದೆ. ಅದು ಯಾವುದೆಂದರೆ ರಾಜಾಶ್ರಯದ ಉದಾರದಾನ ಮತ್ತು ಇನಾಮುಗಳಿಂದ ಜೀವನ ನಡೆಸುತ್ತಿದ್ದ ಉಲಮಾಗಳು ಕಾಲಕಾಲಕ್ಕೆ ಆಳುವವರ ಹಿತಾಸಕ್ತಿಯನ್ನು ಕಾಪಾಡಲು ಇಸ್ಲಾಮ್‌ನ ನಂಬಿಕೆಗಳನ್ನೇ ತಿರುಚುತ್ತಾ, ಇಸ್ಲಾಮಿಗೆ ವಿರುದ್ಧವಾದ ರಾಜರ ನಡವಳಿಕೆಗಳನ್ನು ಸಮರ್ಥಿಸುತ್ತಾ, ಎಷ್ಟೋ ಬಾರಿ ನಿಯಮಗಳನ್ನೇ ಬದಲಾಯಿಸಿ "ಇಸ್ಲಾಮಿನ ಒಪ್ಪಿಗೆ"ಯನ್ನು ಕೊಡಿಸುತ್ತಿದ್ದರು. ಇಂತಹ ಉಲಮಾಗಳು ತಮ್ಮ ಆಶ್ರಯದಾತರ ಮೂಲಕ ತಮ್ಮ ವಿರೋಧಿಗಳ ಮೇಲೆ ಆಕ್ರಮಣ ಮಾಡಿಸಲೂ ಹೇಸುತ್ತಿರಲಿಲ್ಲ. ಕೆಲವೊಮ್ಮೆ ತಮ್ಮ ವಿರೋಧಿ ಉಲಮಾಗಳನ್ನು ಮತ್ತು ಸೂಫಿಗಳನ್ನು ಧರ್ಮದ್ರೋಹದ ಸುಳ್ಳು ಆರೋಪಗಳ ಮೇಲೆ ನೇಣುಗಂಬಕ್ಕೇ ಏರಿಸುತ್ತಿದ್ದರು. ಹಾಗಿದ್ದರೂ ಧರ್ಮನಿಷ್ಠರಾದ ಉಲಮಾಗಳು ಖಲೀಫರ ಈ ಅತಿಗಳನ್ನು ಪ್ರತಿಭಟಿಸಿ ಅವರ ಕೈಕೆಳಗೆ ಸೇವೆ ಮಾಡುವುದಿಲ್ಲವೆಂದು ನಿರಾಕರಿಸಿದ ಉದಾಹರಣೆಗಳೂ ಇಲ್ಲದಿಲ್ಲ. ಇಸ್ಲಾಮಿನ ಇತಿಹಾಸದುದ್ದಕ್ಕೂ ಇಂತಹ ಅನೇಕ ಕತೆಗಳಿವೆ. ಕೆಲವು ಉಲಮಾಗಳು ಹೇಗೆ ಧೈರ್ಯದಿಂದ ಈ ಕ್ರೂರ ದೊರೆಗಳ ಮತ್ತು 'ಲೌಕಿಕ' (ಉಲಮಾ-ಇ-ಸು)ಉಲಮಾಗಳ ವಿರುದ್ಧ ಮಾತಾಡಿದರು ಮತ್ತು ಅದಕ್ಕಾಗಿ ಅವರು ಹೇಗೆ ದೀರ್ಘಾವಧಿಯ ಜೈಲುವಾಸವನ್ನು ಅನುಭವಿಸಬೇಕಾಯಿತು, ಅಷ್ಟೇ ಅಲ್ಲ ಕೆಲವೊಮ್ಮೆ ಸಾವನ್ನೂ ಸ್ವೀಕರಿಸಬೇಕಾಯಿತು ಎಂಬ ಕತೆಗಳು ಸಾಕಷ್ಟಿವೆ.

ಇಸ್ಲಾಮ್‌ನ ಆಚರಣೆಗಳನ್ನು ನಿರ್ದೇಶಿಸುವವರಲ್ಲಿ ಒಂದು ನಿಖರವಾದ ಶ್ರೇಣೀಕೃತ ವ್ಯವಸ್ಥೆ ಇರಲಿಲ್ಲ. ಆದ್ದರಿಂದ ರಾಜರು ಹಾಗೂ 'ಲೌಕಿಕ' ಉಲಮಾಗಳು ಇಸ್ಲಾಮ್ ಬಗ್ಗೆ ತಮ್ಮದೇ ಆದ ದೃಷ್ಟಿಕೋನವನ್ನು ಹೇರಲು ಪ್ರಯತ್ನಿಸಿದರೂ ವಿಚಾರವಾದಿ ಉಲಮಾಗಳು ಕ್ರಮಬದ್ಧವಾಗಿ "ಅಧಿಕೃತವಾದ ಇಸ್ಲಾಮ್" ಬಗೆಗಿನ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಲೇ ಬಂದರು. ಅಸಂಖ್ಯಾತ ಸೂಫಿಗಳು ಹಾಗೂ ಹಲವಾರು ಶಿಯಾ ಮುಸ್ಲಿಮ್ ಪಂಗಡಗಳು ಇಂತಹ ಧೈರ್ಯವನ್ನು ತೋರಿದರು. ಅಷ್ಟೇ ಅಲ್ಲ ಸೂಫಿ ಪಂಥ ಕ್ರಮಬದ್ಧವಾದ "ಧರ್ಮದ ಒಡನಾಡಿಗಳ ಸಂಘ"ವಾಗಿ ಬೆಳೆಯಿತು. 'ಲೌಕಿಕ' ಉಲಮಾಗಳ ಮತ್ತು ರಾಜರ ನಡುವಿನ ಅಪವಿತ್ರ ಮೈತ್ರಿಯ ಕುರಿತು 'ಧಾರ್ಮಿಕ ಉಲಮಾ'ಗಳಲ್ಲಿ ಹುಟ್ಟಿದ ಅತೃಪ್ತಿಯೇ ಇದಕ್ಕೆ ಮುಖ್ಯ ಕಾರಣವಾಗಿರಬಹುದು ಎಂದು ತೋರುತ್ತದೆ. ಇವರ ಪ್ರಕಾರ ಲೌಕಿಕ ಉಲಮಾಗಳು ಇಸ್ಲಾಮ್‌ನಲ್ಲಿದ್ದ ನಿಜವಾದ ಧಾರ್ಮಿಕ ಅಂಶಗಳನ್ನು ಸೋರಿ ಹೋಗುವಂತೆ ಮಾಡಿದ್ದಲ್ಲದೆ, ಧರ್ಮವನ್ನುಬರಿಯ ಬಾಹ್ಯದಲ್ಲಿ ಕಾಣುವ

(ಜಾಹಿರಿ) ಕಾನೂನು ಮತ್ತು ನಿಯಮಗಳಿಗೆ ಸೀಮಿತಗೊಳಿಸಿದರು. ಇದಕ್ಕೆ ವಿರುದ್ಧವಾಗಿ, ಸೂಫಿಗಳು ಅಥವಾ "ಉಲಮಾ ಇ ಬಾತಿನ್" (ಬಾತಿನ್ ಅಂದರೆ ಒಳಗೆ ಅಡಗಿರುವ ಎಂದು ಅರ್ಥ. ಹಾಗೆಯೇ ಉಲಮಾ ಇ ಬಾತಿನ್ ಅಂದರೆ ಅಮೂರ್ತ ವಿಜ್ಞಾನಗಳ ಉಲಮಾಗಳು ಎಂದರ್ಥ) ಎಂದೂ ಕರೆಯಲ್ಪಡುವವರು; ಶರೀಯದ ಬಾಹ್ಯ ಕಾನೂನುಗಳು ಅವುಗಳಷ್ಟಕ್ಕೇ ಅಂತಿಮ ಸತ್ಯವಲ್ಲ ಎಂದು ಒತ್ತಿ ಹೇಳಿದರು. ಇದಕ್ಕೆ ವಿರುದ್ಧವಾಗಿ ಇನ್ನೊಂದು ಗುಂಪು ಎಲ್ಲರಿಗೂ ಗ್ರಾಹ್ಯವಾಗುವ ಬಾಹ್ಯ ಕಾನೂನುಗಳನ್ನು "ಉಲಮಾ ಇ ಜಾಹಿರ್" ಒತ್ತಿ ಹೇಳಿತು. ಒಂದು ರೀತಿಯಲ್ಲಿ ಈ ಎಲ್ಲಾ ನಿಯಮಗಳು ಕೊನೆಯ ಗುರಿಯಾದ 'ಸತ್ಯ' (ಹಖೀಖತ್)ವನ್ನು ತಲುಪಲು ಬೇಕಾದ ಸಾಧನಗಳು, ಸತ್ಯದೇವನ ಜೊತೆಗಿನ ಸಾಮಿಪ್ಯವನ್ನು ಸಾಧಿಸಲು, ಅವನನ್ನು ನೋಡಲು ಅಥವಾ ಅವನ ಜೊತೆ ಒಂದಾಗಲು ನೆರವಾಗುವ ನಿಯಮಗಳು ಎಂದು ಸೂಫಿಗಳು ಪ್ರತಿಪಾದಿಸಿದರು. ಸೂಫಿಗಳ ಹಾಗೂ ಕಟ್ಟಾ ಬಾಹ್ಯನಿಯಮವಾದಿ (ಉಲಮಾ ಇ ಜಾಹಿರ್)ಗಳ ಮಧ್ಯೆ ಇಂದೂ ಈ ವಿವಾದ ನಡೆಯುತ್ತಲೇ ಇದೆ. ಮತ್ತು ಉಲಮಾ ಇ ಜಾಹಿರ್ ಜೊತೆಗೆ ಗುರುತಿಸಿಕೊಂಡಿರುವ ಅಸಂಖ್ಯಾತ ಮದ್ರಸಾಗಳು ಸೂಫಿಗಳನ್ನು ಸಾರ್ವಜನಿಕವಾಗಿ ನಿಂದಿಸುವುದನ್ನು ಇಂದೂ ಮಾಡುತ್ತಿವೆ.

**ತಖ್ಲೀದ್ ಮತ್ತು ಇಜ್‌ತಿಹಾದ್‌ನ ಅವನತಿ:**

ತಖ್ಲೀದ್ ಅಂದರೆ ಮೂಲ ಅರ್ಥ ಒಬ್ಬ ವ್ಯಕ್ತಿ ಇನ್ನೊಬ್ಬನ ಬೋಧನೆಯನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುವುದು ಎಂದು. ಕ್ರಮೇಣ ತಖ್ಲೀದ್ ಎಂದರೆ ಕುರುಡು ಅನುಕರಣೆ ಎಂಬಲ್ಲಿಗೆ ಅರ್ಥವು ಕುಗ್ಗಿತು. ಇಜ್‌ತಿಹಾದ್‌ನ ಪರಂಪರೆ, ನಾವು ಈಗಾಗಲೇ ನೋಡಿದಂತೆ, ಒಂದು ಆಂತರಿಕವಾದ ಚಲನಶೀಲತೆಯನ್ನು ಫಿಖ್‌ಗೆ ನೀಡಿತು. ಆ ಮೂಲಕ ಅದಕ್ಕೆ ಬದಲಾಗುತ್ತಿದ್ದ ಸಾಮಾಜಿಕ ಸ್ಥಿತಿಗತಿಗಳ ಸವಾಲುಗಳನ್ನು ಸಮರ್ಥವಾಗಿ ಎದುರಿಸುವ ಶಕ್ತಿಯನ್ನು ನೀಡಿತು. ಏನಿದ್ದರೂ ೧೨ನೆಯ ಶತಮಾನದ ಕೊನೆಯ ವೇಳೆಗೆ ಅನೇಕ ಉಲಮಾಗಳು ಇಜ್‌ತಿಹಾದ್‌ನ ಬಾಗಿಲು ಈಗಾಗಲೇ ಭದ್ರವಾಗಿ ಮುಚ್ಚಿದೆ ಎಂದು ವಾದಿಸಿದರು. ಆದರೆ, ಅಂತಹ ಮಾತುಗಳಿಗೆ ಯಾವುದೇ ಪುರಾವೆಗಳೂ ಇರಲಿಲ್ಲ. ವಾಸ್ತವದಲ್ಲಿ ಇಜ್‌ತಿಹಾದ್ ಇನ್ನೂ ಇತ್ತು. ಆದರೆ ಅದರ ಮೌಲ್ಯ, ಶಕ್ತಿ ಮತ್ತು ಪರಿಣಾಮಗಳು ದುರ್ಬಲವಾಗಿದ್ದವು. ಯಾವ ಪ್ರಶ್ನೆಗಳನ್ನು ಮೊದಲಿನ ಉಲಮಾಗಳು ಬಿಡಿಸಿರಲಿಲ್ಲವೋ ಅಂತಹ ಪ್ರಶ್ನೆಗಳಿಗೆ ಇಜ್‌ತಿಹಾದ್ ಉತ್ತರ ಕೊಡಬಹುದಾಗಿತ್ತು. ಆದರೆ ಯಾವೆಲ್ಲಾ ಪ್ರಶ್ನೆಗಳಿಗೆ ಈಗಾಗಲೇ ಉತ್ತರವನ್ನು ಒಮ್ಮತದಿಂದ ರೂಪಿಸಲಾಗಿತ್ತೋ ಅಂತಹವುಗಳಿಗೆ ಹೊಸ ಉತ್ತರಗಳನ್ನು ಹುಡುಕಲು ಸರ್ವಥಾ ಪ್ರೋತ್ಸಾಹವಿರಲಿಲ್ಲ. ಇಜ್‌ತಿಹಾದ್‌ನ್ನು ಈಗಾಗಲೇ ಸ್ಥಾಪಿಸಿರುವ ಫಿಖ್ ಶಾಲೆಗಳಲ್ಲಿ, ಸಣ್ಣಪುಟ್ಟ ವಿಷಯಗಳಿಗೆ ಸಂಬಂಧಿಸಿದಂತೆ ಮಾತ್ರ ಕೆಲವೊಂದು ರೂಪಾಂತರಗಳನ್ನು ಮಾಡಲು ಬಳಸಲಾಗುತ್ತಿತ್ತು. ಹೊಸಬಗೆಯ ಸಂಶೋಧನೆ

ಮತ್ತು ಬರಹಗಳ ಬದಲು ಆಗಿಹೋದ ಉಲಮಾಗಳ ಗ್ರಂಥಗಳ ಮೇಲೆ ವಿವರಣೆಗಳನ್ನೂ, ಆ ವಿವರಣೆಗಳ ಮೇಲೆ ಇನ್ನಷ್ಟು ವ್ಯಾಖ್ಯಾನಗಳನ್ನೂ ಬರೆಯಲು ದೊಡ್ಡಮಟ್ಟದಲ್ಲಿ ಉತ್ತೇಜಿಸಲಾಯಿತು. ಯಾವುದೇ ಒಂದು ವಿಷಯದಲ್ಲಿ ಅಥವಾ ಶಾಸ್ತ್ರದಲ್ಲಿ ಪರಿಣತರ ಮಾತುಗಳಿಗೆ ಬದಲಾಗಿ ಗ್ರಂಥಗಳನ್ನು ಉರುಹೊಡೆದು ಕಲಿಯಲು ಪ್ರೋತ್ಸಾಹಿಸಲಾಯಿತು. ಭಾರತದ ಅನೇಕ ಮದ್ರಸಾಗಳಲ್ಲಿ ಈ ಸಂಪ್ರದಾಯವನ್ನು ಚಾಚೂ ತಪ್ಪದೆ ಇಂದೂ ಪಾಲಿಸುತ್ತಿದ್ದಾರೆ. ಮತ್ತು ಮಧ್ಯಕಾಲೀನ ಫಖಾಹಾಗಳಿಂದ ವಿಕಾಸವಾದ ಫಿಖ್‌ನ ಬಹುಮುಖ್ಯವಾದ ವಿಷಯಗಳು ಈಗಲೂ ಮದ್ರಸಾಗಳ ಪಠ್ಯಕ್ರಮದ ಕೇಂದ್ರ ವಸ್ತುಗಳಾಗಿವೆ. ತಮ್ಮ 'ಪವಿತ್ರ ಪೂರ್ವಜರು(ಸಲಾಫ್ ಇ ಸಾಲಿಹಿನ್)' ಪಟ್ಟಿ ಮಾಡಿದ ನಿಯಮಗಳನ್ನು ಪಾಲಿಸುವುದರ ಬಗ್ಗೆ ಅವರು ನೀಡುವ ಆದ್ಯತೆ, ಯಾಕೆ ಭಾರತದ ಮದ್ರಸಾಗಳು(ಕೆಲವೇ ಅಪವಾದಗಳನ್ನು ಬಿಟ್ಟರೆ) ಯಾವುದೇ ಬಗೆಯ ಆಮೂಲಾಗ್ರ ಬದಲಾವಣೆಗೆ ತೆರೆದುಕೊಂಡಿಲ್ಲ ಎಂಬುದನ್ನು ವಿವರಿಸುತ್ತದೆ.

೧೨೫೮ರಲ್ಲಿ ಎಲ್ಲವನ್ನೂ ಲೂಟಿ ಹೊಡೆಯುತ್ತಾ, ಸರ್ವನಾಶ ಮಾಡುತ್ತ ಬಂದ ಮಂಗೋಲರು ಮುಸ್ಲಿಮ್ ಸಾಮ್ರಾಜ್ಯದ ಬಹುಭಾಗವನ್ನು ಕೊಳ್ಳೆ ಹೊಡೆದರು. ಅಬ್ಬಾಸಿದ್ ಖಲೀಫರ ರಾಜಧಾನಿ ಬಾಗ್ದಾದನ್ನು ನಿರ್ನಾಮ ಮಾಡಿದರು. ಇದು ಉಲಮಾಗಳಲ್ಲಿ ಬಹು ದೊಡ್ಡ ಅಸುರಕ್ಷತೆಯ ಭಾವವನ್ನು ಮೂಡಿಸಿತು. ಮುಸ್ಲಿಮ್ ಅಧಿಕಾರ ಮತ್ತು ಗೌರವ ಈ ರೀತಿ ನಾಶವಾದ್ದನ್ನು ನೋಡಿ ಆಘಾತಕ್ಕೆ ಒಳಗಾದರು. ಸಂಪ್ರದಾಯಸ್ಥ ಉಲಮಾಗಳು ಈ ಸಂದರ್ಭವನ್ನು ತಮ್ಮ ಲಾಭಕ್ಕೆ ಬಳಸಿಕೊಂಡರು. ಸ್ವತಂತ್ರ ಆಲೋಚನೆಗಳನ್ನು ಬೆಳೆಸುವ ಇಜ್‌ತಿಹಾದ್ ಇಸ್ಲಾಮ್‌ನ ಅಖಂಡತ್ವಕ್ಕೆ ಅಪಾಯವನ್ನು ತರಬಹುದು ಎಂದು ಸಂಪ್ರದಾಯವನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಇಜ್‌ತಿಹಾದ್‌ನ ಸಾಧ್ಯತೆಯನ್ನು ಮುಕ್ತವಾಗಿ ತೆರೆದಿಟ್ಟರೆ, ಈ ಅನುಕೂಲವನ್ನು ಅವರಿವರೆನ್ನದೆ ಎಲ್ಲರೂ ಬಳಸಿದರೆ, ಇದರಿಂದ ಕ್ರೂರಿಗಳಾದ ಆಳುವ ವರ್ಗ ತಮ್ಮ ಲಾಭಕ್ಕಾಗಿ ಇಸ್ಲಾಮಿಕ್ ನ್ಯಾಯ ನೀತಿಯ ವಿಷಯಗಳಲ್ಲಿ ಹಸ್ತಕ್ಷೇಪ ಮಾಡಬಹುದು. ಸ್ವತಂತ್ರ ಯೋಚನೆಗಳೆಂಬ ನೆಪದಲ್ಲಿ ಧಾರ್ಮಿಕ ಕಟ್ಟುಪಾಡುಗಳನ್ನೇ ಬದಲಾಯಿಸಬಹುದು ಎಂಬ ಭಯವೂ ಅವರಿಗೆ ಇತ್ತು. ಹಾಗಾಗಿ ಅನೇಕ ಉಲಮಾಗಳು ಸಂಪ್ರದಾಯವನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು ಎಂದು ಆದೇಶವನ್ನು ಹೊರಡಿಸಿದರು. ಮುಸ್ಲಿಮರು ವ್ಯಕ್ತಿಗತ ನೆಲೆಯಲ್ಲಿ ಯಾವುದಾದರೊಂದು ಫಿಖ್ ಶಾಖೆಯ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸಬೇಕು ಎಂದು ಒತ್ತಾಯಿಸಿದರು. ಭಾರತದ ಹೆಚ್ಚಿನ ಉಲಮಾಗಳು ಇಂದಿಗೂ ಇದನ್ನು ಪಾಲಿಸುತ್ತಾರೆ.

ಈಗಾಗಲೇ ಸ್ಥಾಪನೆಗೊಂಡ ಮಜಹಬ್‌ಗಳು ಅಥವಾ ನ್ಯಾಯಶಾಲೆಗಳಿಗೆ ತಖ್ಲೀದ್‌ನ ಹೇರಿಕೆಯಿಂದ ಇಮ್ಮಡಿ ಪ್ರೋತ್ಸಾಹ ದೊರೆಯಿತು. ಹೇಗೆಂದರೆ ಫಿಖ್‌ಗೆ ಸಂಬಂಧಿಸಿದ ಎಲ್ಲಾ ಪುಸ್ತಕಗಳನ್ನು ಒಟ್ಟು ಸೇರಿಸಿದ್ದೇ ಅಲ್ಲದೆ, ಎಲ್ಲ

ಮಜಹಬ್‌ಗಳ ಇಮಾಮರು ಮತ್ತು ಅವರ ನೇರ ಶಿಷ್ಯರ ಅಭಿಪ್ರಾಯಗಳನ್ನು ಅನೇಕ ವಿಷಯಗಳನ್ನು ಒಳಗೊಂಡಂತೆ ವಿವರವಾಗಿ ಕಲೆ ಹಾಕಲಾಯಿತು. ಇಮಾಮರು ಮತ್ತು ಅವರ ನೇರ ಶಿಷ್ಯರು ತಮ್ಮ ಅಭಿಪ್ರಾಯಗಳು ಅಂತಿಮ ಅಲ್ಲವೆಂದೂ ಹಾಗೂ ಎಲ್ಲ ಮುಸ್ಲಿಮರ ಮೇಲೆ ಹೇರಬೇಕಾದ್ದು ಅಲ್ಲವೆಂದೂ ಒತ್ತಿ ಹೇಳಿದ್ದರೂ ಸಹ, ಆನಂತರ ಬಂದ ಉಲಮಾಗಳು ಈಗಾಗಲೇ ಸ್ಥಾಪನೆಗೊಂಡ ಮಜಹಬ್‌ಗಳಲ್ಲಿ ಯಾವುದಾದರೂ ಒಂದಕ್ಕೆ ಕಟ್ಟುನಿಟ್ಟಾಗಿ ಬದ್ಧವಾಗಿರಬೇಕು ಎಂದು ತಾಕೀತು ಮಾಡಿದರು. ಒಂದು ವೇಳೆ ಖುರಾನ್ ಮತ್ತು ಹದೀಸ್‌ಗಳ ಸ್ಪಷ್ಟವಾದ ಆಜ್ಞೆಯ ಕಾರಣದಿಂದ ಫಿಖ್‌ನ ಬೇರೆ ಬೇರೆ ಪುಸ್ತಕಗಳಲ್ಲೇ ಪರಸ್ಪರ ವೈರುಧ್ಯಗಳಿದ್ದರೂ ಸಹ, ಮಜಹಬ್‌ಗಳಿಗೆ ಬದ್ಧವಾಗಿರಲೇಬೇಕು ಎಂದೂ ಹೇಳಿದರು. ಕೆಲವರಂತೂ ಮುಂದೆ ಬರಲಿರುವ ಇಮಾಮರು ಮತ್ತು ಅವರ ಮಜûಹಬ್‌ಗಳ ಬಗ್ಗೆ ಸ್ವತಃ ಮಹಮ್ಮದನೆ ಹೇಳಿದ್ದಾನೆಂದೂ, ಮಜಹಬ್‌ಗಳ ಲಕ್ಷ್ಮಣರೇಖೆ ದಾಟಿ ಹೋಗುವವನು ಧರ್ಮದ್ರೋಹಿ ಅಥವಾ ಧರ್ಮ ಪರಿತ್ಯಾಗ ಮಾಡುವವನಾಗುತ್ತಾನೆ ಎಂಬ ಕಟ್ಟುಕತೆಗಳನ್ನು ಹುಟ್ಟು ಹಾಕಿದರು.

ತಖ್ಲೀದ್‌ಗೆ ಇಷ್ಟೊಂದು ಒತ್ತು ಕೊಟ್ಟದ್ದು ಸಹಜವಾಗಿ ಫಖಾಹಾಗಳ ಕೈಗಳನ್ನು ಇನ್ನಷ್ಟು ಬಲಪಡಿಸಿತು. (ಫಖಾಹಾಗಳೆಂದರೆ ಇಸ್ಲಾಮಿಕ್ ನ್ಯಾಯಾಧಿಕಾರಿಗಳು, ಇಸ್ಲಾಮಿಕ್ ನ್ಯಾಯಶಾಸ್ತ್ರದಲ್ಲಿ ಪರಿಣತರಾದವರು, ಇಸ್ಲಾಮಿಕ್ ಕಾನೂನುಗಳನ್ನು ಬಲ್ಲವರು.) ನ್ಯಾಯಶಾಸ್ತ್ರವನ್ನು ಸವಿಸ್ತಾರವಾಗಿ ವಿವರಿಸುವ ಅವರ ದಾಖಲೆಗಳನ್ನು ಸಂಪ್ರದಾಯದ ಮೂಲ ಆಕರಗಳೆಂದೂ, ಅವುಗಳಲ್ಲಿ ಎಲ್ಲ ಬಗೆಯ ವೈಯಕ್ತಿಕ ಹಾಗೂ ಸಾಮೂಹಿಕ ನಡವಳಿಕೆಗಳನ್ನು ಹೇಳುವ ನಿಯಮಗಳಿವೆಯೆಂದೂ ಹೇಳಲಾಯಿತು. ಇದು ತಾವು ಅಧಿಕೃತವಾದ ಇಸ್ಲಾಮ್ ಪರಂಪರೆಯ ರಕ್ಷಕರೆಂದು ಹೇಳಿಕೊಳ್ಳುವ ಅವರ ವಿಶೇಷ ಹಕ್ಕನ್ನು ಖಾತ್ರಿಗೊಳಿಸಿದಂತೆ ಆಯಿತು. ಹೀಗೆ ನ್ಯಾಯ ಮತ್ತು ಕಾನೂನು ಎಂಬುದು ಉಲಮಾಗಳ ಮನಸ್ಸಿನಲ್ಲಿ ಎಂತಹ ಮಹತ್ವ ಪಡೆಯಿತು ಎಂದರೆ ಹೆಚ್ಚಿನ ಮುಸ್ಲಿಮರಿಗೆ ಇಂದು ಇಸ್ಲಾಮಿಕ್ ಶಿಕ್ಷಣ ಎಂದರೆ ಕಾನೂನುಗಳನ್ನು ತಿಳಿದುಕೊಳ್ಳುವುದು ಎಂದಾಗಿದೆ. ಇಂದು ಜ್ಞಾನ ಎಂದರೆ ಫಿಖ್‌ನ ಸೂಕ್ಷ್ಮಾತಿಸೂಕ್ಷ್ಮ ವಿವರಗಳನ್ನು ತಿಳಿದುಕೊಳ್ಳುವುದು, ಅವು ಅತ್ಯಂತ ವೈಯಕ್ತಿಕ ವಿಷಯಗಳಾದ ಶೌಚ, ಪೂಜೆ ಮತ್ತು ಲೈಂಗಿಕತೆಗಳಿಂದ ಹಿಡಿದು ರಾಜಕೀಯದ ವರೆಗೆ ಕಾನೂನು ಏನು ಹೇಳುತ್ತದೋ ಅದಕ್ಕೆ ಬದ್ಧವಾಗಿರುವುದು ಎಂದಾಗಿದೆ. ಈ ಸಂಪ್ರದಾಯವನ್ನು ಇಂದಿಗೂ ಮದ್ರಸಾಗಳಲ್ಲಿ ಅಚ್ಚೊತ್ತಿದಂತೆ ಅನುಸರಿಸುತ್ತಾರೆ. ಹಾಗೂ ಈ ಕಾರಣದಿಂದ ಫಿಖ್‌ನ ನಿಯಮಗಳೆ ಪಠ್ಯಕ್ರಮವನ್ನು ರೂಪಿಸುವ ಮೂಲ ಆಕರಗಳಾಗಿವೆ.

ಕಾನೂನು ಹಾಗೂ ನಿಯಮಗಳ ಬಗ್ಗೆ ಎಲ್ಲೆಡೆ ಹಬ್ಬಿದ ಅತಿಯಾದ ಕಾಳಜಿ, ಜೊತೆಗೆ ತಖ್ಲೀದನ್ನು ಪಾಲಿಸಬೇಕೆನ್ನುವ ಕಡ್ಡಾಯವಾದ ಆದೇಶ ಇವೆರಡೂ ಸೇರಿ ಬೇರೆ ಬೇರೆ ಫಿಖ್‌ನ ಶಾಖೆಗಳ ಮಧ್ಯೆ ಸಂಘರ್ಷ

ಹುಟ್ಟುಹಾಕಿದವು. ಆಳುವವರ ಆಶ್ರಯಕ್ಕಾಗಿ ಮತ್ತು ಸಾರ್ವಜನಿಕರ ಬೆಂಬಲಕ್ಕಾಗಿ ಪರಸ್ಪರ ಅವರ ಮಧ್ಯೆ ದೊಡ್ಡ ಸ್ಪರ್ಧೆಯೇ ನಡೆಯಿತು. ಈ ರೀತಿಯ ಸಂಘರ್ಷಗಳು ಬೇರೆ ಬೇರೆ ರೂಪಗಳಲ್ಲಿ ಇಂದಿಗೂ ಮದ್ರಸಾಗಳ ಮಧ್ಯೆ ನಡೆಯುತ್ತಿವೆ. ಯಾವ ಪ್ರಮಾಣದಲ್ಲಿ ಈ ಮಜಹಬ್‌ಗಳ ಮಧ್ಯೆ, ಮದ್ರಸಾಗಳ ಮಧ್ಯೆ ಸಂಘರ್ಷ ನಡೆಯಿತೆಂದರೆ ಡಮಾಸ್ಕಸ್‌ನಲ್ಲಿ ಅರಬ್ ವಿದ್ವಾಂಸ 'ಶಾಫೀ' ಆರಂಭಿಸಿದ "ರಾವಾಹೀಯ" ಮದ್ರಸಾಗಳ ಜನ ಬೇರೆ ಶಾಖೆಗಳಾದ "ಹಾನ್‌ಬಲಿ" ಮಜûಹಬ್‌ಗಳನ್ನು ಇಸ್ಲಾಮ್‌ನ ಹೊರಗಿನದು ಎಂಬಂತೆ ಬಹಿಷ್ಕರಿಸಿದ್ದರಂತೆ. ('ಶಾಫೀ ಮಜಹಬ್' ಸುನ್ನಿ ಇಸ್ಲಾಮ್‌ನ ನಾಲ್ಕು ಇಸ್ಲಾಮಿಕ್ ಕಾನೂನು ಶಾಲೆಗಳಲ್ಲಿ ಒಂದು). ಅಂದರೆ ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ಹೇಗೆ ಇಸ್ಲಾಮ್‌ನಿಂದ ಹೊರಗೆ ಎಂದು ಪರಿಗಣಿಸಲಾಗುತ್ತಿತ್ತೋ ಹಾಗೆ. ಈ ರೀತಿಯ ಜಗಳಗಳಿಂದಾಗಿ, ಮಜûಹಬ್‌ಗಳು ಒಂದರಿಂದ ಇನ್ನೊಂದು ಬಹಳ ಬೇರೆಯದೇ ಆಗಿರುತ್ತವೆ ಮತ್ತು ಹೆಚ್ಚಿನ ಬಾರಿ ಪರಸ್ಪರ ವಿರೋಧವಾಗಿರುತ್ತವೆ ಎಂಬ ಭಾವನೆಯನ್ನು ಹುಟ್ಟಿಸಿತು. ಅಷ್ಟೇ ಅಲ್ಲ ಫಿಲಿಪ್ಸ್ ಎನ್ನುವ ವಿದ್ವಾಂಸನ ಪ್ರಕಾರ ಈ ಜಗಳಗಳು ಮತಾಂಧತೆ ಹಾಗೂ ಪಂಥೀಯತೆಯ ಗುಣಗಳನ್ನು ಬೆಳೆಸುತ್ತವೆ. (ಮೊದಲು ಡೆನ್ನಿಸ್ ಬ್ರಾಂ ್ಯಡ್‌ಲೀ ಫಿಲಿಪ್ಸ್ ಆಗಿದ್ದು ಆಮೇಲೆ ಮತಾಂತರ ಮಾಡಿಕೊಂಡು ಅಬು ಅಮೀನಾ ಬಿಲಾಲ್ ಫಿಲಿಪ್ಸ್ ಆದ ಕೆನಡಾದ ಮುಸ್ಲಿಮ್ ಶಿಕ್ಷಕ, ಭಾಷಣಕಾರ, ಲೇಖಕ. ಈಗ ಖತಾರ್‌ನಲ್ಲಿ ವಾಸಿಸುತ್ತಿದ್ದಾರೆ). ಇಸ್ಲಾಮಿಕ್ ನ್ಯಾಯಶಾಸ್ತ್ರದ ಬೇರೆ ಬೇರೆ ರೀತಿಗಳಾಗಿ ಹುಟ್ಟಿಕೊಂಡ ಈ ಪಂಗಡಗಳು ಕ್ರಮೇಣ ವಾಸ್ತವದ ಎಲ್ಲ ನೆಲೆಗಳಲ್ಲಿ ಪ್ರತ್ಯೇಕ ಸಮುದಾಯಗಳಾಗಿ ಮತ್ತು ಪ್ರತ್ಯೇಕವಾದ ರಾಜಕೀಯಾಸಕ್ತ ಗುಂಪುಗಳಾಗಿ ಬದಲಾದವು. ಎಷ್ಟೋ ಬಾರಿ ಒಂದು ಗುಂಪಿಗೆ ಸೇರಿದ ಮುಸ್ಲಿಮರು ಇನ್ನೊಂದು ಗುಂಪಿನ ಇಮಾಮ್‌ನ ನೇತೃತ್ವದಲ್ಲಿ ಪ್ರಾರ್ಥನೆ ಮಾಡುವುದನ್ನು ನಿರಾಕರಿಸಿದರು. ಇದರಿಂದಾಗಿ ಬೇರೆ ಬೇರೆ ಮಜಹಬ್‌ಗಳಿಗೆ ಸೇರಿದ ಮುಸ್ಲಿಮರು ಒಂದು ಪ್ರದೇಶದಲ್ಲಿ ವಾಸಿಸುತ್ತಿದ್ದರೆ ಊರಲ್ಲಿರುವ ಒಂದೇ ಮಸೀದಿಯಲ್ಲಿ ಅವರೆಲ್ಲರಿಗೂ ಪ್ರತ್ಯೇಕವಾದ ಪ್ರಾರ್ಥನಾ ಮೂಲೆಗಳನ್ನು ಕಾದಿರಿಸುವ ಪದ್ಧತಿ ಬಂತು. ಮೆಕ್ಕಾದಲ್ಲಿರುವ ಪ್ರಸಿದ್ಧ ಮಸೀದಿಯಲ್ಲಿ ಕೂಡ ಬೇರೆ ಬೇರೆ ಮಜಹಬ್‌ಗಳ ಮುಸ್ಲಿಮರಿಗಾಗಿ ಪ್ರತ್ಯೇಕ ಪ್ರಾರ್ಥನಾ ಮೂಲೆಗಳನ್ನು "ಕಾಬಾ"ದ ಸುತ್ತಲೂ ಕಟ್ಟಲಾಯಿತು. ಹಾಗೂ ಈ ಪದ್ಧತಿ ೨೦ನೆಯ ಶತಮಾನದ ಮೊದಲ ಭಾಗದವರೆಗೂ ಮುಂದುವರಿಯಿತು. ಕೆಲವು ವಿದ್ವಾಂಸರಂತೂ ಯಾವುದೋ ಒಂದು ಮಜಹಬ್‌ನ ಮುಸ್ಲಿಮ್ ವ್ಯಕ್ತಿ ಇನ್ನೊಂದು ಮಜಹಬ್‌ನ ಇಮಾಮ್‌ನ ಸೂಚನೆಗಳನ್ನು ಪಾಲಿಸಿದರೆ ಅಂತಹವನನ್ನು ಸ್ಥಳೀಯ ನ್ಯಾಯಾಧೀಶರು ತಮ್ಮ ತಿಳುವಳಿಕೆಗನುಸಾರವಾಗಿ ಶಿಕ್ಷಿಸಬೇಕು ಎಂದರು. ಪ್ರತಿಸ್ಪರ್ಧಿಗಳಾದ ಶಾಲೆಗಳ ಉಲಮಾಗಳು ಪರಸ್ಪರರ ಮೇಲೆ 'ಫತ್ವಾ' ಹೊರಡಿಸಲೂ ಹಿಂಜರಿಯಲಿಲ್ಲ. ಹೀಗೆ ಪ್ರತಿಯೊಬ್ಬನೂ ಆಳುವ ಅಧಿಕಾರಶಾಹಿ ವರ್ಗದ ವಶೀಲಿಗಳನ್ನು ಪಡೆಯಲು ಹೊಂಚುಹಾಕುತ್ತಾ, ಉಲಮಾಗಳ ನಡುವಿನ ಈ ಜಗಳಗಳನ್ನು ಪ್ರಚೋದಿಸುತ್ತಾ ಮಜûಹಬ್‌ಗಳ ಮಧ್ಯದ ಈ ಸಂಘರ್ಷ ಇನ್ನಷ್ಟು

ಹೆಚ್ಚಾಗುವಂತೆ ಮಾಡಿದರು. ಎರಡು ಫಿಖ್ ಶಾಖೆಗಳ ಹಿಂಬಾಲಕರ ನಡುವಿನ ಜಗಳಗಳು ಕೆಲವೊಮ್ಮೆ ದಂಗೆಯಾಗಿ ಬದಲಾದದ್ದೂ ಇದೆ.

ಅದೂ ಅಲ್ಲದೆ ಬೇರೆ ಬೇರೆ ಮಜಹಬ್‌ಗಳ ಉಲಮಾಗಳು ಇವುಗಳನ್ನು ಚರ್ಚೆಮಾಡುತ್ತಾ ತಾತ್ವಿಕ ವಿಷಯಗಳ ಬಗ್ಗೆ ಕೂದಲು ಸೀಳುವ ವಿಮರ್ಶೆಯನ್ನು ಮಾಡುತ್ತಾ ವಾಸ್ತವ ಪ್ರಪಂಚದ ಕಾಳಜಿಗಳಿಂದ ದೂರ ಹೋದರು. ಈಗಲೂ ಅನೇಕ ಮದ್ರಸಾಗಳಲ್ಲಿ ಇದೇ ಮುಂದುವರಿಯುತ್ತಿದೆ. ಕೆಲವೊಮ್ಮೆ ಆಳುವ ವರ್ಗ ತಮಗೆ ಅನುಕೂಲವಾಗುವಂತಹ ಕಾನೂನಿನ ಅಭಿಪ್ರಾಯಗಳನ್ನು ಪಡೆಯಲು, ತಮ್ಮ ಉದ್ದೇಶಗಳನ್ನು ಈಡೇರಿಸಿಕೊಳ್ಳಲು ಈ ಚರ್ಚೆಗಳನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವುದನ್ನು ನಾವು ಕಾಣುತ್ತೇವೆ. ಎಷ್ಟೋ ಸಲ ಒಂದು ನಿರ್ದಿಷ್ಟ ಶಾಖೆಯ ಆಲಿಮ್ ಯಾವುದೋ ಒಂದು ವಿಷಯವನ್ನು "ಮಾಡಬಹುದು" ಎಂದರೆ, ಇನ್ನೊಂದು ಶಾಖೆಯ ಆಲಿಮ್ ಅದು ಅಪ್ಪಟ "ನಿಷಿದ್ಧ" ಎಂದು ಖಂಡಿಸುತ್ತಿದ್ದರು. ಮತ್ತು ಆಳುವವರು, ಯಾವ ಗುರುವಿನ ಅಭಿಪ್ರಾಯ ಅವರ ಉದ್ದೇಶಗಳನ್ನು ಪೂರೈಸುತ್ತದೋ ಅವರ ಪರ ವಹಿಸುತ್ತಿದ್ದರು. ಶರೀಯದಲ್ಲಿ ಹೇಳಿರುವ ವಿಷಯಗಳು ಅನುಕೂಲವಾಗಿ ಇಲ್ಲದಿದ್ದಲ್ಲಿ "ಪವಿತ್ರ ಉಪಾಯ"(ಹಿಯಾಲ್) ಎನ್ನುವ ಪ್ರತ್ಯೇಕ ವಿಭಾಗವನ್ನು ಫಿಖ್ ಗ್ರಂಥಗಳಲ್ಲಿ ಸೇರಿಸಿ ಒಂದು ಬಗೆಯ ಪರಿಹಾರವನ್ನು ಹೇಳುವ ಪ್ರವೃತ್ತಿ ಆರಂಭವಾಯಿತು ಮತ್ತು ಆಳುವ ವರ್ಗ ಇದರ ಲಾಭವನ್ನು ಬಿಡದೆ ಪಡೆದುಕೊಳ್ಳುತ್ತಿತ್ತು. ಪ್ರತಿಯೊಬ್ಬ ರಾಜನೂ (ಆಧುನಿಕ ಕಾಲದಲ್ಲಿ ಅಧಿಕಾರ ವರ್ಗ) ಯಾವುದಾದರೂ ಒಂದು ಮಜಹಬ್‌ನ್ನು ರಾಜ್ಯದ ಅಧಿಕೃತ ಶಾಲೆಯೆಂದು ಘೋಷಣೆ ಮಾಡುತ್ತಿದ್ದರು. ಅವುಗಳಲ್ಲಿ ಕೆಲಸ ಮಾಡುವ ಉಲಮಾಗಳನ್ನು ನ್ಯಾಯಾಧೀಶರಾಗಿಯೋ, ಅಧಿಕಾರಿಗಳಾಗಿಯೋ ತಕ್ಕ ಹುದ್ದೆಗಳಲ್ಲಿ ನೇಮಕ ಮಾಡುತ್ತಿದ್ದರು. ಹೀಗೆ ಆಮಿಷಗಳ ಮೂಲಕ ಅವರನ್ನು ಗೆದ್ದುಕೊಂಡು ತಾವು ಮಾಡುವ ಕೆಲಸಗಳಿಗೆ ಕಾನೂನಿನ ಮುದ್ರೆಯನ್ನು ಸುಲಭವಾಗಿ ಪಡೆಯುತ್ತಿದ್ದರು. ಸಹಜವಾಗಿಯೇ ಇದು ಮಜಹಬ್‌ಗಳ ಮಧ್ಯೆ ವಿರೋಧವನ್ನು ಮತ್ತು ಸ್ಪರ್ಧೆಯನ್ನು ಇನ್ನಷ್ಟು ಹೆಚ್ಚು ಮಾಡಿತು. ಹಾಗೆಯೇ ಮದ್ರಸಾ ಸಂಸ್ಥೆಗಳ ಸ್ಥಾಪನೆಯೊಂದಿಗೆ ಈ ವಿರೋಧ ಇನ್ನಷ್ಟು ವೇಗವನ್ನು ಪಡೆದುಕೊಂಡಿತು.

**ಮದ್ರಸಾಗಳ ಮೂಲ:**

ನಾವು ಈಗಾಗಲೇ ನೋಡಿರುವಂತೆ ಪ್ರವಾದಿಯವರ ಕಾಲದಲ್ಲಿ ಮಸೀದಿಯಲ್ಲಿ ಶಿಕ್ಷಣವನ್ನು ನೀಡುತ್ತಿದ್ದರು. ಕ್ರಮೇಣ ಇಸ್ಲಾಮ್ ಅರೇಬಿಯನ್ ಪರ್ಯಾಯದ್ವೀಪದ ಹೊರಗೆ ವೇಗವಾಗಿ ಹಬ್ಬಿದಂತೆ, ಅಷ್ಟು ವಿಸ್ತಾರವಾದ ಸಾಮ್ರಾಜ್ಯದ ಆಡಳಿತದ ಅಗತ್ಯಗಳನ್ನು ಪೂರೈಸುವ ಹೆಚ್ಚು ಸಂಘಟಿತವಾದ ಒಂದು ಶಿಕ್ಷಣ ವ್ಯವಸ್ಥೆ ಬೇಕು ಎಂಬುದು ಎಲ್ಲರ ಅರಿವಿಗೆ ಬಂತು. ಇದು ಮಸೀದಿಯಿಂದ ಪ್ರತ್ಯೇಕವಾಗಿರುವ ಒಂದು ಸಂಸ್ಥೆಯಾಗಿರಬೇಕೆಂದೂ ಇದ್ದದ್ದರಿಂದ ಮದ್ರಸಾಗಳು(ಶಾಲೆಗಳು) ಹುಟ್ಟಿಕೊಂಡವು. ಆಮೇಲೂ ಕೂಡ

ಆರಂಭದ ದಿನಗಳಲ್ಲಿ ಧಾರ್ಮಿಕ ಶಿಕ್ಷಣವನ್ನು ಮಸೀದಿಗಳಲ್ಲಿ, ಸೂಫಿಗಳ ಗುಡಿಸಲುಗಳಲ್ಲಿ, ಸಾಹಿತ್ಯದ ಕೂಟಗಳಲ್ಲಿ, ಉಲಮಾಗಳ ಮನೆಗಳಲ್ಲಿ, ಎಷ್ಟೋ ಸಲ ಗುಹೆಗಳಲ್ಲಿ, ಮರದ ಕೆಳಗೆ ಕಟ್ಟಿರುವ ತಾತ್ಕಾಲಿಕ ಶಿಬಿರಗಳಲ್ಲಿ ಕೊಡುತ್ತಿದ್ದರೂ ಮದ್ರಸಾ ಅಧಿಕೃತವಾದ ಶಿಕ್ಷಣ ಪದ್ಧತಿಯ ದೊಡ್ಡ ಸಂಸ್ಥೆಯಾಗಿ ಮೂಡಿ ಬಂತು.

ಕ್ರಿ.ಶ ೯೫೦ರಲ್ಲಿ ಶಿಯಾ ಬುಯಿದ್ (ಬುಯಿದ್ ರಾಜವಂಶವನ್ನು 'ಅಲಿ ಇಬ್ನ್ ಬುಯಾ' ಆರಂಭಿಸಿದ) ವಂಶದವರು ಅಬ್ಬಾಸಿದರ ರಾಜಧಾನಿಯಾದ ಬಾಗ್ದಾದನ್ನು ವಶಪಡಿಸಿಕೊಂಡರು ಮತ್ತು ೧೨೫೮ರಲ್ಲಿ ಅಬ್ಬಾಸಿದ್ ಖಲೀಫೇಟನ್ನು ಮಂಗೋಲರು ಸರ್ವನಾಶ ಮಾಡಿದರು. ಈ ಕಾಲ ಮುಸ್ಲಿಮ್ ಸಮಾಜ ಬಹಳ ವೇಗವಾದ ರೂಪಾಂತರವನ್ನು ಹೊಂದುತ್ತಿದ್ದ ಕಾಲ. ಬೆಳೆಯುತ್ತಲೇ ಹೋಗುತ್ತಿದ್ದ ಶಿಯಾಗಳ ಪ್ರಭಾವ, ಈಜಿಪ್ಟ್ನ ಇಸ್ಮಾಯಿಲಿ ಫಾತಿಮಿದ್ಸ್(ಶಿಯಾ ಇಸ್ಲಾಮ್‌ನ ಒಂದು ಶಾಖೆ)ಗಳ ಕ್ಷಿಪ್ರವಾದ ಸಾಮ್ರಾಜ್ಯ ವಿಸ್ತರಣೆ ಮತ್ತು ಸಿರಿಯಾದಲ್ಲಿ ಇಸ್ಮಾಯಿಲಿ ಮತಪ್ರಚಾರಕರಿಂದ ಎದುರಾದ ಸವಾಲು, ಹಾಗೂ ಪ್ರೊಫೆಸರ್ ಎಫ್ರಾಟ್ (ಪ್ರೊ.ಡಾಫ್ನಾ ಎಫ್ರಾಟ್ ಇಸ್ರೇಲಿನ ಮುಕ್ತ ವಿಶ್ವವಿದ್ಯಾಲಯದ ಇತಿಹಾಸ, ತತ್ವಜ್ಞಾನ ಮತ್ತು ಜುದಾಯಿಕ್ ಸ್ಟಡೀಸ್ ವಿಭಾಗದ ಪ್ರಾಧ್ಯಾಪಕರು) ಅವರ ಪ್ರಕಾರ, ಇರಾನ್ ಕಂಡ 'ಸುನ್ನಿ ಪುನರುತ್ಥಾನ' ಇವೆಲ್ಲವುಗಳ ಕಾರಣದಿಂದ ಸುನ್ನಿ ಇಸ್ಲಾಮ್‌ನ ಮತೀಯ ಸಂಸ್ಥೆಗಳು ಮತ್ತು ಶಿಕ್ಷಣ ಹೆಚ್ಚೆಚ್ಚು ಸಾಂಸ್ಥಿಕ ರೂಪವನ್ನು ಪಡೆಯಿತು. ಅಪಾಯದಲ್ಲಿದೆ ಎಂದು ನಂಬಲಾದ ಸುನ್ನಿ ಸಮುದಾಯದ(ಸುನ್ನಿ ಉಲಮಾಗಳು ಇಸ್ಮಾಯಿಲಿಗಳನ್ನು ಅಪಾಯಕಾರಿ ವಿಚಾರವಾದಿಗಳು ಎಂದು ಪರಿಗಣಿಸುತ್ತಿದ್ದರು) ಅಸ್ಮಿತೆಯನ್ನು ಕಾಪಾಡುವ ಪ್ರಯತ್ನ ನಡೆಯಿತು. ಈ ಕಾಲದಲ್ಲೇ ನಾವಿಂದು ನೋಡುತ್ತಿರುವ "ಮದ್ರಸಾ"ಗಳ ಒಂದು ಸಾಂಸ್ಥಿಕ ರೂಪ ಜನ್ಮ ತಾಳಿತು.

ನಾವಿಂದು ಯಾವುದನ್ನು ಮದ್ರಸಾ ಎಂಬ ಹೆಸರಿನಿಂದ ಗುರುತಿಸುತ್ತೇವೆಯೋ, ಅಂತಹ ಮೊದಲ ಮದ್ರಸಾ ಯಾವಾಗ ಸ್ಥಾಪಿತವಾಯಿತು ಎಂಬುದರ ಬಗ್ಗೆ ಸರ್ವಾನುಮತವಿಲ್ಲ. ಕೆಲವರು ಇರಾನಿನ ಪಟ್ಟಣವಾದ 'ನಿಶಾಪುರ' ಎಂಬಲ್ಲಿ ೧೧ನೆಯ ಶತಮಾನದಲ್ಲಿ ಸ್ಥಾಪಿತವಾದ 'ಮದ್ರಸಾ ನಿಜಾಮೀಯ' ಎಂಬ ಸಂಸ್ಥೆಗೆ ಈ ಗೌರವ ಸಲ್ಲುತ್ತದೆ ಎಂದು ನಂಬುತ್ತಾರೆ. ಏನೇ ಆಗಿರಲಿ, ಇದಕ್ಕೂ ಮೊದಲೇ ಕೆಲವು ಮದ್ರಸಾಗಳು ಅಸ್ತಿತ್ವದಲ್ಲಿದ್ದವು ಎಂದು ತೋರುತ್ತದೆ. ಮೂಲವೊಂದರ ಪ್ರಕಾರ ಮೊದಲ ಮದ್ರಸಾಗಳನ್ನು ೮ನೆಯ ಶತಮಾನದಲ್ಲಿ ಆಫ್ರಿಕಾದಲ್ಲಿ ಇಬ್ಬರು ಸಹೋದರಿಯರು ಸ್ಥಾಪಿಸಿದರು. ಇವರಲ್ಲಿ ಒಬ್ಬಳಾದ ಫಾತಿಮಾ ಬಿಂಟ್ ಮಹಮ್ಮದ್ ಎಂಬಾಕೆ 'ಜಾಮಿಯಾ ಕೈರವಾನ್' ಎಂಬ ಮದ್ರಸಾವನ್ನು ಟ್ಯುನೀಷಿಯಾದಲ್ಲಿ ಸ್ಥಾಪಿಸಿದಳೆಂದೂ, ಇನ್ನೊಬ್ಬಳು ಮರಿಯಮ್ ಎಂಬಾಕೆ ಮೊರೊಕ್ಕೊದ ಫೆಸ್ ಎಂಬಲ್ಲಿ 'ಜಾಮಿಯಾ ಆಂಡಾಲುಸ್' ಎಂಬ

ಮದ್ರಸಾವನ್ನು ಸ್ಥಾಪಿಸಿದಳೆಂದೂ ತಿಳಿದು ಬರುತ್ತದೆ. ಸರಿಯಾಗಿ ಒಂದು ಶತಮಾನದ ಬಳಿಕ ಫಾತಿಮಿದ್ ಖಲೀಫ 'ಅಲ್ ಮುಯಿಜುದ್ದಿನ್ ಬಿಲ್ಲಾಹ್'ನು ಕೈರೋದಲ್ಲಿ ಇಂದಿಗೂ ಉಳಿದಿರುವ ಜಗತ್ತಿನ ಅತ್ಯಂತ ಹಳೆಯ ವಿಶ್ವವಿದ್ಯಾಲಯ ಮಹೋನ್ನತ 'ಜಾಮಿಯಾ ಅಲ್ ಅಜರ್'ನ್ನು ಸ್ಥಾಪಿಸಿದ. ತಮ್ಮ ರಾಜಕೀಯ ಮತ್ತು ಧರ್ಮದ ವಿರೋಧಿಗಳಾದ ಸುನ್ನಿಗಳನ್ನು ಸೋಲಿಸಲು ಇಸ್ಮಾಯಿಲಿ  ಧರ್ಮಪ್ರಚಾರಕರಿಗೆ ಈ ಶಾಲೆಯಲ್ಲಿ ತರಬೇತಿ ಕೊಡಲಾಗುತ್ತಿತ್ತು. ಇಂದಿನ ಅಫಘಾನಿಸ್ತಾನದ 'ಘಜ್ನಿ' ಎಂಬಲ್ಲಿ ತುರ್ಕಿಯ ರಾಜನಾದ ಸುಲ್ತಾನ್ ಮಹಮುದ್ (ಕಾಲ ೯೭೧-೧೦೩೦) ಎಂಬವನು ೧೧ನೆಯ ಶತಮಾನದಲ್ಲಿ ಒಂದು ಮದ್ರಸಾವನ್ನು ಸ್ಥಾಪಿಸಿದ. ಇದು ನಿಶಾಪುರ್‌ನಲ್ಲಿ ಸ್ಥಾಪಿತವಾದ ನಿಜಾಮಿಯಾ ಮದ್ರಸಾಕ್ಕಿಂತ ಕೆಲವೇ ವರ್ಷಗಳ ಮೊದಲು ಬಂತು.

ಏನೇ ಇರಲಿ, ನಿಶಾಪುರ್‌ನಲ್ಲಿ ಸ್ಥಾಪಿತವಾದ ನಿಜಾಮಿಯಾ ಮದ್ರಸಾ ಇಡೀ ಇಸ್ಲಾಮ್‌ನ ಸಂದರ್ಭದಲ್ಲೇ ಆಳುವ ಸರಕಾರದಿಂದಲೇ ಸ್ಥಾಪಿತವಾದ ಮೊತ್ತ ಮೊದಲ ಮದ್ರಸಾ ಎನ್ನಬಹದು. ಹಾಗೂ ನಂತರದಲ್ಲಿ ಎಲ್ಲೆಡೆ ಬಂದ ಮದ್ರಸಾಗಳಿಗೆ ಇದೇ ಮಾದರಿಯಾಯಿತು. ಇದನ್ನು ಸ್ಥಾಪಿಸಿದವನು 'ಖ್ವಾಜಾ ಅಬು ಆಲಿ ಹಸನ್' ಅಥವಾ ಜನಪ್ರಿಯವಾಗಿ 'ನಿಜಾಮ್ ಉಲ್ ಮುಲ್ಕ್ ತುಸಿ'(ಕಾಲ ೧೦೧೮-೧೦೯೨) ಎಂದು ಕರೆಯಲ್ಪಟ್ಟವನು. ಅವನ ಹೆಸರಿನಿಂದಲೇ 'ನಿಜಾಮಿಯಾ ಮದ್ರಸಾ' ಎನ್ನುವ ಹೆಸರು ಬಂತು. ಇರಾನ್‌ನ 'ಮಶ್ಯಾದ್' ಎಂಬಲ್ಲಿ ಹುಟ್ಟಿದ 'ನಿಜಾಮ್ ಉಲ್ ಮುಲ್ಕ್' ತನ್ನ ಕ್ಷೇತ್ರದಲ್ಲಿ ಬಹಳ ಎತ್ತರಕ್ಕೆ ಏರಿ ಆ ಕಾಲದ ದೊರೆ 'ಸೆಲ್ಜುಕ್ ಟರ್ಕ್ ಸುಲ್ತಾನ್ ಅಲ್ಪ್ ರ್ಸಲಾನ್'(೧೦೬೩-೧೦೭೨) ನ ಪ್ರಧಾನ ಮಂತ್ರಿಯಾದ. ಅಬ್ಬಾಸಿದ್ ಖಲೀಫರ ನೇರ ಪ್ರತಿನಿಧಿಯಾಗಿ ಕೆಲಸ ಮಾಡುತ್ತಿದ್ದರೂ, ಸುಲ್ತಾನನೂ ತನ್ನ ವಿಸ್ತಾರವಾದ ಅಬ್ಬಾಸಿದ್ ಸಾಮ್ರಾಜ್ಯದ ಸಿಂಹಾಸನದ ಬಲದಿಂದ ಸಾಕಷ್ಟು ಶಕ್ತಿಯನ್ನು ಪ್ರದರ್ಶಿಸುತ್ತಿದ್ದ. ಸುಲ್ತಾನನ ಕಾಲದ ಅನಂತರ ನಿಜಾಮ್ ಉಲ್ ಮುಲ್ಕ್ ನು ಅರ್ಸಲಾನ್‌ನ ಮಗನಾದ ಮಲಿಕ್ ಶಾನ (೧೦೭೨-೧೦೯೨) ಕೈ ಕೆಳಗೂ ಹಲವರು ವರ್ಷಗಳ ಕಾಲ ಸೇವೆ ಸಲ್ಲಿಸಿದ.

ನಿಶಾಪುರದ ಮದ್ರಸಾದ ನಂತರ ನಿಜಾಮ್ ಉಲ್ ಮುಲ್ಕ್ ಅದೇ ರೀತಿಯ ಮದ್ರಸಾಗಳನ್ನು ಅಬ್ಬಾಸಿದ್ ಸಾಮ್ರಾಜ್ಯದ ಅನೇಕ ಕಡೆಗಳಲ್ಲಿ ಸ್ಥಾಪಿಸಿದ. ಅವುಗಳಲ್ಲಿ ಮುಖ್ಯವಾದವುಗಳು ಬಾಗ್ದಾದ್, ಬಾಲ್ಕ್, ಹೇರಟ್, ಬಸ್ರಾ ಮತ್ತು ಖೋರಾಸಾನ್. ಎಲ್ಲ ಮದ್ರಸಾಗಳೂ ಅವನ ಹೆಸರನ್ನು ಉಳಿಸಿಕೊಂಡು 'ನಿಜಾಮಿಯಾ ಮದ್ರಸಾ'ಗಳಾದವು. ಹಲವು ಬಗೆಯ ವಿಷಯಗಳನ್ನು ಈ ಶಾಲೆಗಳಲ್ಲಿ ಕಲಿಸಲಾಗುತ್ತಿತ್ತು. ಖುರಾನ್ ಮತ್ತು ಹದೀಸ್‌ನ ಅಧ್ಯಯನ ಪಠ್ಯಕ್ರಮದ ಕೇಂದ್ರಭಾಗವಾಗಿತ್ತು. ಆದರೆ ಕ್ರಮೇಣ ಪಠ್ಯಕ್ರಮದಲ್ಲಿ 'ಫಿಖ್'ಗೆ ಹೆಚ್ಚಿನ ಗಮನವನ್ನು ನೀಡಲಾಯಿತು. ರಾಜರ ನ್ಯಾಯಾಲಯಗಳಲ್ಲಿ ಕೆಲಸ ಮಾಡುವಂತಹ ನ್ಯಾಯಾಧೀಶರನ್ನು ತರಬೇತು ಮಾಡುವಂತಹ ಮುಖ್ಯ ಕೆಲಸ

ಮದ್ರಸಾಗಳ ಮೇಲೆ ಬಿತ್ತು. ಇದಲ್ಲದೆ ಮದ್ರಸಾಗಳು ಗಣಿತ, ಖಗೋಳಶಾಸ್ತ್ರ ಮತ್ತು ಅನೇಕ ಮಾನವಿಕ ವಿಷಯಗಳನ್ನೂ ಹೇಳಿ ಕೊಡುತ್ತಿದ್ದವು. ಈ ಶಾಲೆಗಳಲ್ಲಿ ಅನೇಕ ಅಧ್ಯಾಪಕರು ಸೂಫಿ ಶಿಕ್ಷಕರೆಂಬಂತೆ ಕೆಲಸ ಮಾಡುತ್ತಾ ಶರೀಯದ ಜೊತೆಗೆ ಅತೀಂದ್ರಿಯದ ಹಾದಿಯನ್ನು ಬೆರೆಸಲು ಪ್ರಯತ್ನಿಸಿದರು.

ನಿಜಾಮಿಯಾ ಮದ್ರಸಾಗಳು ಮತ್ತು ಬೇರೆ ಶಾಲೆಗಳು ಕಾಲಕ್ರಮೇಣ ಯಾವ ಬಗೆಯ ರಾಜಕೀಯ ಪಾತ್ರಗಳನ್ನು ವಹಿಸಿದವು ಎಂಬ ಅಂಶ ಬಹಳ ಚರ್ಚಾಸ್ಪದ ಸಂಗತಿಯಾಗಿದೆ. 'ಜಾರ್ಜ್ ಮಕ್‌ಡಿಸಿ' ಎಂಬ ವಿದ್ವಾಂಸ "ಮದ್ರಸಾಗಳು ಹೆಚ್ಚುಕಡಿಮೆ ಸ್ವತಂತ್ರವಾದ ಸಂಸ್ಥೆಗಳು. ಅವುಗಳ ಪಠ್ಯಕ್ರಮದ ಮೇಲೆ ಆಳುವ ಸರಕಾರಗಳ ಹಿಡಿತ ಇರಲಿಲ್ಲ" ಎಂದ. (ಜಾರ್ಜ್ ಅಬ್ರಾಹಂ ಮಕ್‌ಡಿಸಿ ಓರಿಯೆಂಟಲ್ ಸ್ಟಡೀಸ್‌ನ ಅಧ್ಯಾಪಕರಾಗಿದ್ದರು. ಲೆಬನಾನ್‌ನಲ್ಲಿ ಸ್ವಲ್ಪ ಕಾಲ ವಿದ್ಯಾರ್ಥಿಯಾಗಿ ಅಭ್ಯಾಸ ಮಾಡಿದರು. ಕೊನೆಗೆ ಪೆನ್ಸಿಲ್ವೇನಿಯಾ ವಿಶ್ವ ವಿದ್ಯಾಲಯದಲ್ಲಿ 'ಅರಬ್ ಮತ್ತು ಇಸ್ಲಾಮಿಕ್ ಸ್ಟಡೀಸ್' ಸೆಂಟರ್‌ನ ಡೈರೆಕ್ಟರ್ ಆಗಿ ನಿವೃತ್ತರಾದರು). ಆದ್ದರಿಂದ ಮದ್ರಸಾಗಳು ಪ್ರಭುತ್ವದ ನೀತಿ ನಿಲುವುಗಳ ರಚನೆಯಲ್ಲಿ ಪಾತ್ರವಹಿಸಿವೆ ಎಂಬುದು ತಪ್ಪು ದಾರಿಗೆಳೆಯುವಂತಹ ಹೇಳಿಕೆ ಎಂದು ಅವನು ವಾದಿಸುತ್ತಾನೆ. ಆದರೆ ಬೇರೆ ವಿದ್ವಾಂಸರು ಈ ಮಾತನ್ನು ಒಪ್ಪುವುದಿಲ್ಲ. ಮದ್ರಸಾಗಳಿಗೆ ಇದ್ದ ರಾಜಾಶ್ರಯ ಹಾಗೂ ವಿಚಾರವಾದಿ ಗುಂಪುಗಳ ಬಗ್ಗೆ ಮದ್ರಸಾಗಳಿಗೆ ಇದ್ದ ತೀವ್ರ ವಿರೋಧ ಇವೆರಡೂ ಕಾರಣದಿಂದ ಸುನ್ನಿ ರಾಜರಿಗೆ ಮತ್ತು ಅವರ ಕಾನೂನುಗಳಿಗೆ ಅಧಿಕೃತತೆಯನ್ನು ಕೊಡುವಲ್ಲಿ ಮದ್ರಸಾಗಳು ಶಕ್ತಿಶಾಲಿ ಮಾಧ್ಯಮಗಳಾಗಿದ್ದವು. ಯಾಕೆಂದರೆ ಮದ್ರಸಾಗಳಿಂದ ಪದವೀಧರರಾಗಿ ಹೊರ ಬಂದ ಅನೇಕ ವಿದ್ಯಾರ್ಥಿಗಳು ಸರಕಾರದ ಆಡಳಿತ ಸೇವೆಗಳಲ್ಲಿ ನ್ಯಾಯಾಧೀಶರಾಗಿ (ಕಾಜಿ), ಕಾನೂನು ತಜ್ಞರಾಗಿ (ಮುಫ್ತಿ) ಮತ್ತು ಸಾರ್ವಜನಿಕ ನೀತಿಗಳನ್ನು ನಿಯಂತ್ರಣ ಮಾಡುವವರಾಗಿ (ಮುಶ್ತಾಹಿಬ್) ಸೇರಿಕೊಳ್ಳುತ್ತಿದ್ದರು. ನಿಜಾಮಿಯಾ ಮದ್ರಸಾಗಳು ಶಾಫೀ ಶಾಖೆಯ ಫಿಖ್ ಮತ್ತು ಅಶಾರಿಯಾ ಸಂಪ್ರದಾಯಗಳನ್ನು ಕಲಿಸಿ ಜನಪ್ರಿಯಗೊಳಿಸಲು ನಿಯೋಜಿತವಾಗಿದ್ದವು. ಆದ್ದರಿಂದ ಅಶಾರಿಯಾಗಳು ಆಳುವವರ ಅಗತ್ಯಗಳು ಮತ್ತು ಆಸಕ್ತಿಗಳನ್ನು ಪ್ರತಿಬಿಂಬಿಸುವಂತಿದ್ದವು. ಅಧಿಕಾರದಲ್ಲಿರುವವರಿಗೆ ಹೇಗೆ ವಿಧೇಯತೆ ತೋರಿಸಬೇಕು ಎಂಬುದನ್ನು ಬೋಧಿಸುತ್ತಿದ್ದವು. ಅಷ್ಟೇ ಅಲ್ಲ ರಾಜಕೀಯಕ್ಕೆ ಅಪಾಯಕಾರಿ ಎಂದು ಭಾವಿಸಿದ ಇಸ್ಮಾಯಿಲಿಗಳು ಮತ್ತು ಮುತಾಜಿಲರಂತಹ ವಿಚಾರವಾದಿಗಳನ್ನು ವಿರೋಧಿಸುತ್ತಿದ್ದವು. ಈ ನೆಲೆಯಿಂದ ನೋಡಿದಾಗ ಮಕ್‌ಡಿಸಿ ಹೇಳಿದ್ದಕ್ಕೆ ವಿರುದ್ಧವಾಗಿ ಮದ್ರಸಾಗಳು ರಾಜಕೀಯದಲ್ಲಿ ಬಹಳ ಸೂಕ್ಷ್ಮವಾದ ಮತ್ತು ಮುಖ್ಯವಾದ ಪಾತ್ರವನ್ನು ವಹಿಸುತ್ತಿದ್ದವು ಎಂಬುದನ್ನು ಒಪ್ಪಬೇಕಾಗುತ್ತದೆ.

ನಿಜಾಮ್ ಉಲ್ ಮುಲ್ಕ್‌ನ ಮದ್ರಸಾಗಳಲ್ಲಿ ಅತ್ಯಂತ ಪ್ರಸಿದ್ಧವಾದ ಬಾಗ್ದಾದಿನಲ್ಲಿರುವ 'ನಿಜಾಮಿಯಾ ಮದ್ರಸಾ', ೧೦೬೭ರಲ್ಲಿ 'ಅಬ್ಬಾಸಿದ್ ಅಲ್

ಖಾಸಿಮ್ ಬಿ ಅಮ್ರಿಲ್ಲಾ' ಎಂಬ ರಾಜನ ಆಳ್ವಿಕೆಯಲ್ಲಿ ಆರಂಭವಾಯಿತು. ನಿಜಾಮ್ ಉಲ್ ಮುಲ್ಕ್ ನಿಂದ ದತ್ತಿಯಾಗಿ ಕೊಡಲ್ಪಟ್ಟ ವಿಸ್ತಾರವಾದ ಭೂಮಿಯಲ್ಲಿ ಕಟ್ಟಿದ ಬಹಳ ಭವ್ಯವಾದ ಕಟ್ಟಡದಲ್ಲಿ ಈ ಮದ್ರಸಾ ಇತ್ತು. ಇದರ ಆದಾಯದ ಮೂಲ ಕೂಡ ರಾಜನಿಂದಲೇ ಬರುತ್ತಿತ್ತು. ರಾಜ್ಯದ ಬೇರೆ ಬೇರೆ ಭಾಗಗಳ ಸುಮಾರು ೬೦೦೦ ವಿದ್ಯಾರ್ಥಿಗಳಿಗಾಗಿ ಮದ್ರಸಾದ ಹೊರಗೆ ಒಂದು ದೊಡ್ಡ ಮಾರುಕಟ್ಟೆಯನ್ನೇ ಕಟ್ಟಿಸಲಾಗಿತ್ತು. ಅಲ್ಲಿನ ಗ್ರಂಥಾಲಯದಲ್ಲಿ ವೈವಿಧ್ಯಮಯ ವಿಷಯಗಳ ಮೇಲೆ ಸಾವಿರಾರು ಪುಸ್ತಕಗಳಿದ್ದವು. ಈ ಮದ್ರಸಾ ಸುಮಾರು ೩೦೦ ವರ್ಷಗಳ ಕಾಲ ಕೆಲಸ ಮಾಡಿತು. ಅಷ್ಟೇ ಅಲ್ಲ ಅನೇಕ ಪ್ರಸಿದ್ಧ ವಿದ್ಯಾರ್ಥಿಗಳನ್ನು, ಅಧ್ಯಾಪಕರನ್ನು ಈ ಮದ್ರಸಾ ಕೊಡುಗೆಯಾಗಿ ಕೊಟ್ಟಿತು. ಇದರಲ್ಲಿ ಮುಖ್ಯರಾದವರು ಇತಿಹಾಸಕಾರ ಇಮಾಮ್ ತಬಾರಿ, ಪ್ರಸಿದ್ಧ ಸೂಫಿ ವಿದ್ವಾಂಸರಾದ ಇಮಾಮ್ ಘಜಾಲಿ, ಶಿಹಾಬುದ್ದೀನ್ ಸುಹ್ರಾವರ್ದಿ ಮತ್ತು 'ಅಬ್ದುಲ್ ಖಾದಿರ್ ಜಿಲಾನಿ' ಮೊದಲಾದವರು.

ನಿಜಾಮ್ ಉಲ್ ಮುಲ್ಕ್ ಉದಾಹರಣೆಯನ್ನು ಅನುಸರಿಸಿ ಆ ನಂತರದ ಮುಸ್ಲಿಮ್ ದೊರೆಗಳು, ವರಿಷ್ಠರು ಮತ್ತು ಶ್ರೀಮಂತ ವ್ಯಾಪಾರಸ್ಥರು ಬೇರೆ ಬೇರೆ ಪ್ರದೇಶಗಳಲ್ಲಿ ಭೂಮಿ ಕಾಣಿಗಳನ್ನು ಕೊಟ್ಟು ಮದ್ರಸಾಗಳನ್ನು ನಿರ್ಮಿಸಿದರು. ಅಷ್ಟೇ ಅಲ್ಲ ದೊಡ್ಡ ಗ್ರಂಥಾಲಯಗಳನ್ನು ಒದಗಿಸಿ ಕೊಟ್ಟರು. ಮತೀಯ ಮತ್ತು ಉಳಿದ ಅನೇಕ ವಿಷಯಗಳ ಬಗ್ಗೆ ಗ್ರಂಥಗಳನ್ನು ಬರೆದ ಉಲಮಾಗಳಿಗೆ ಧಾರಾಳವಾಗಿ ಬಹುಮಾನಗಳನ್ನು ಕೊಟ್ಟರು. ಹೀಗೆ ಒಳ್ಳೆಯ ಕೆಲಸಗಳನ್ನು ಮಾಡುವುದರಿಂದ ದೇವರ ಅನುಗ್ರಹಕ್ಕೆ ಪಾತ್ರರಾಗುತ್ತೇವೆ ಎಂದು ಅವರು ನಂಬಿದ್ದರು. ಕೆಲವು ಮದ್ರಸಾಗಳ ಬಹಳ ಹೆಸರುವಾಸಿಯಾದ ಉಲಮಾಗಳು ವರಿಷ್ಠರ ಜೊತೆ ವೈವಾಹಿಕ ಸಂಬಂಧಗಳನ್ನೂ ಬೆಳೆಸಿದರು. ಎಲ್ಲಾ ಮದ್ರಸಾಗಳನ್ನೂ ರಾಜ್ಯದ ಸರಕಾರಗಳು ನಡೆಸುತ್ತಿರಲಿಲ್ಲ. ಹಾಗಿದ್ದರೂ ಹಲವು ಶಾಲೆಗಳನ್ನು ಬಹಳ ಗೌರವಾನ್ವಿತ ಉಲಮಾಗಳು ನಡೆಸುತ್ತಿದ್ದು, ಅವರು ಪ್ರಜ್ಞಾಪೂರ್ವಕವಾಗಿಯೇ ರಾಜರ ಹಾಗೂ ವರಿಷ್ಠರ ಸಂಪರ್ಕವನ್ನು ತ್ಯಜಿಸಿದ್ದೂ ಇತ್ತು. ಇಂತಹ ಸಂದರ್ಭದಲ್ಲಿ ಯಾರು ಆಳುವವರಿಂದ ದೂರ ಉಳಿದರೊ ಅಂತಹ ಉಲಮಾಗಳಿಗೆ ರಾಜಾಶ್ರಯದ ಜೊತೆ ಸಂಪರ್ಕ ಇಟ್ಟುಕೊಂಡ ಉಲಮಾಗಳನ್ನು ಹೋಲಿಸಿ ಪರಸ್ಪರ ತೂಗಿ ನೋಡುತ್ತಿದ್ದರು. ಮೊದಲಿನ ಬಗೆಯವರನ್ನು ಸಾರ್ವಜನಿಕರು ನಿಜವಾದ ದೇವರ ಪ್ರತಿನಿಧಿಗಳು ಎಂಬಂತೆ ಕಂಡರೆ, ಎರಡನೆಯ ಬಗೆಯವರನ್ನು ಭ್ರಷ್ಟರು ಹಾಗೂ ಪ್ರಪಂಚದಲ್ಲಿನ ಕ್ಷುಲ್ಲಕ ವಿಷಯಗಳಿಗಾಗಿ ತಮ್ಮ ನಂಬಿಕೆಯನ್ನೇ ಮಾರಾಟ ಮಾಡುವವರು ಎಂಬಂತೆ ನೋಡುತ್ತಿದ್ದರು. ಆಳುವವರಿಂದ ಯಾರು ದೂರವಿರುತ್ತಿದ್ದರೋ ಅವರು ಸಾಮಾನ್ಯವಾಗಿ ಸೂಫಿ ಗುರುಗಳಾಗಿರುತ್ತಿದ್ದರು. ನಿಜವಾದ ಆಧ್ಯಾತ್ಮಿಕ ಗುರುಗಳಾಗಿದ್ದುಕೊಂಡು ದಾನಗಳ ಮೂಲಕ ಬಡವರಿಗೆ ನೆರವಾಗುತ್ತಿದ್ದರು.

ಮದ್ರಸಾದ ಶಿಕ್ಷಣ ಎಲ್ಲರಿಗೂ ಉಚಿತವಾಗಿತ್ತು. ಆದ್ದರಿಂದ ಎಲ್ಲ ಬಗೆಯ ಸಾಮಾಜಿಕ ವರ್ಗಗಳಿಂದ ವಿದ್ಯಾರ್ಥಿಗಳು ಬರುತ್ತಿದ್ದರು. ಕೆಲವೊಮ್ಮೆ ಗೌರವಾನ್ವಿತ ಗುರುಗಳ ಪ್ರಸಿದ್ಧಿ ವಿದ್ಯಾರ್ಥಿಗಳನ್ನು ಬಹಳ ದೂರದ ಪ್ರದೇಶಗಳಿಂದ ಈ ಮದ್ರಸಾಗಳಿಗೆ ಆಕರ್ಷಿಸುತ್ತಿತ್ತು. ಇದರಿಂದಾಗಿ ಮದ್ರಸಾ ಬಡವರಿಗೆ ಸಮಾಜದಲ್ಲಿ ಮೇಲೆ ಬರಬಹುದಾದ ಒಂದು ಅವಕಾಶವನ್ನು ಕೊಡುವ ಒಂದು ಅದ್ಭುತ ಮಾಧ್ಯಮವಾಯಿತು. ಮತ್ತು ಈ ಮೂಲಕ ಎಲ್ಲ ಬಗೆಯ ಸಾಮಾಜಿಕ ವರ್ಗಗಳು ಭಾಗವಹಿಸಬಹುದಾದ ಒಂದು ಸಮಾನ ಸಾಂಸ್ಕೃತಿಕ ಪ್ರಪಂಚವನ್ನು ರೂಪಿಸಿತು. ಜೊತೆಯಲ್ಲೇ ಮದ್ರಸಾಗಳು, ಸ್ಥೂಲವಾಗಿ ನಿರ್ವಚಿಸಲು ಸಾಧ್ಯವಾಗುವ ಇಸ್ಲಾಮ್ ನಾಗರೀಕತೆಯ ಏಕತೆಯ ಕಲ್ಪನೆ ಅಟ್ಲಾಂಟಿಕ್ ತೀರದಿಂದ ಭಾರತದವರೆಗೆ ಮತ್ತು ಭಾರತದಿಂದಾಚೆಗೂ ಹಬ್ಬುವಂತೆ ಅನುವು ಮಾಡಿದವು. ಮದ್ರಸಾಗಳ ಪ್ರಾರಂಭದ ಕಾಲದಲ್ಲಿ ಒಂದು ಬಗೆಯ ಉದಾರ ವ್ಯವಸ್ಥೆ ಇತ್ತು. ಇದರಿಂದಾಗಿ ಬಗೆ ಬಗೆಯ ಆಲೋಚನೆಗಳ ವಿನಿಮಯಕ್ಕೆ ಅವಕಾಶ ಇತ್ತು. ಒಂದೆಡೆಯಲ್ಲಿ ಪ್ರಮಾಣಕಗಳಿಂದಲೇ ಅಳೆಯಲ್ಪಡುವ ಇಸ್ಲಾಮ್ ಇತ್ತು. ಕ್ರಮೇಣ ಸ್ಪಷ್ಟವಾದ ಸಾಂಸ್ಥಿಕ ಗುಂಪುಗಳಾಗಿ ಕಾಣುವ ಉಲಮಾಗಳ ಹುಟ್ಟು ಆಯಿತು. ಇವೆಲ್ಲವೂ ಸೇರಿದ ಒಂದು ಸಂಕೀರ್ಣ ಜಾಲದಲ್ಲಿ ಸಂಬಂಧಗಳು, ನಿಷ್ಠೆಗಳು ಮ್ತತು ಪರಸ್ಪರ ವಿನಿಮಯ ಮಾಡಿಕೊಂಡ ಗ್ರಂಥಗಳು ಹಾಗೂ ಪರಿಣತಿಗಳು ಎಲ್ಲವೂ ಸೇರಿ ರೂಪಿತಗೊಂಡ ಒಂದು ಲೋಕದೃಷ್ಟಿ ಇವೆಲ್ಲವೂ ಇಸ್ಲಾಮಿಕ್ ನ್ಯಾಯಶಾಸ್ತ್ರದ ಅತ್ಯಗತ್ಯವಾದ ಅಸ್ಮಿತೆಯನ್ನು ರೂಪಿಸಿದ್ದವು.

ಆರಂಭದ ದಿನಗಳಲ್ಲಿ ಮಸೀದಿಗಳಲ್ಲಿ ನಡೆಸುತ್ತಿದ್ದ ಅಧ್ಯಯನ ಮಂಡಲಗಳಿಗಿಂತ, ಮದ್ರಸಾಗಳು ಹೆಚ್ಚು ವ್ಯವಸ್ಥಿತವಾದ ರೀತಿಯ ಶಿಕ್ಷಣವನ್ನು ಪ್ರತಿನಿಧಿಸಿದವು ಎನ್ನಬಹುದು. ಹಾಗಿದ್ದರೂ ಮದ್ರಸಾಗಳು ಹೆಚ್ಚು ಕಡಿಮೆ ಅನೌಪಚಾರಿಕವಾದ ಮತ್ತು ಬದಲಾವಣೆಗಳಿಗೆ ತೆರೆದುಕೊಂಡ ಸಂಸ್ಥೆಗಳಾಗಿದ್ದವು. ವಿದ್ಯಾರ್ಥಿಗಳ ಮೊದಲ ನಿಷ್ಠೆ ವ್ಯಕ್ತಿಗತ ಶಿಕ್ಷಕರ ಬಗೆಗೆ ಇರುತ್ತಿತ್ತೇ ಹೊರತು ಸಂಸ್ಥೆಯಾಗಿ ಪ್ರತಿನಿಧಿಸುವ ಮದ್ರಸಾದ ಬಗೆಗೆ ಅಲ್ಲ. ಯಾಕೆಂದರೆ ವಿದ್ಯಾರ್ಥಿಗಳ ದೃಷ್ಟಿಯಿಂದ ಅವರ ಕಲಿಕೆಯ ಕೇಂದ್ರಬಿಂದು ಅವರಿಗೆ ಪಾಠ ಹೇಳುವ ಶಿಕ್ಷಕರೇ ಸರಿ. ಆದ್ದರಿಂದ ಅನೇಕ ವಿದ್ಯಾರ್ಥಿಗಳು ಪ್ರಸಿದ್ಧಿ ಪಡೆದ ಒಳ್ಳೆಯ ಶಿಕ್ಷಕರನ್ನು ಹುಡುಕುತ್ತಾ ಊರಿಂದೂರಿಗೆ, ಅಷ್ಟೇ ಅಲ್ಲ ಒಂದು ಮದ್ರಸಾದಿಂದ ಇನ್ನೊಂದಕ್ಕೆ ಓಡಾಡುತ್ತಿದ್ದರು.

ಮಧ್ಯಕಾಲೀನ ಮದ್ರಸಾಗಳಲ್ಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯಬೇಕಾದರೆ ಅದಕ್ಕೆಂದೇ ಪ್ರತ್ಯೇಕ ನಿಯಮಗಳಿರಲಿಲ್ಲ, ಪರೀಕ್ಷೆಗಳಿರಲಿಲ್ಲ. ಹಾಗೆಯೇ ವಯಸ್ಸಿನ ನಿರ್ಬಂಧವೂ ಇರಲಿಲ್ಲ. ಎಷ್ಟೋ ಸಲ ವಿದ್ಯಾರ್ಥಿಯೊಬ್ಬ ಯಾವುದೇ ಒಂದು ಮದ್ರಸಾದ ಒಬ್ಬ ಅಧ್ಯಾಪಕನಿಗೆ ಸೇರಿದ ಅಧ್ಯಯನ ಮಂಡಲ ಅಥವಾ ಶಾಖೆಯಿಂದ ಇನ್ನೊಂದು ಮದ್ರಸಾಕ್ಕೆ ಹೋಗಬಹುದಿತ್ತು. ಅಲ್ಲಿ ಮೊದಲು ಕಲಿಯುತ್ತಿದ್ದ ವಿಷಯಗಳನ್ನೇ

ಮುಂದುವರಿಸಬಹುದಿತ್ತು ಅಥವಾ ಪೂರ್ತಿಯಾಗಿ ಬೇರೆಯೇ ವಿಷಯಗಳನ್ನು ಆಯ್ಕೆ ಮಾಡಲೂಬಹುದಿತ್ತು. ಬೇರೆ ಬೇರೆ ವಯಸ್ಸಿನ ಅನೇಕ ವಿದ್ಯಾರ್ಥಿಗಳು ಒಟ್ಟಿಗೇ, ಒಂದೇ ಸಮಯದಲ್ಲಿ ಒಬ್ಬ ಶಿಕ್ಷಕನ ಕೈ ಕೆಳಗೆ ಕಲಿಯಬಹುದಿತ್ತು ಮತ್ತು ಯಾವುದೇ ಒಂದು ಅಧ್ಯಯನವನ್ನು ಇಷ್ಟೇ ನಿರ್ದಿಷ್ಟ ಸಮಯದಲ್ಲಿ ಮುಗಿಸಬೇಕು ಎನ್ನುವ ಒತ್ತಡವಿರಲಿಲ್ಲ. ಯಾವುದೇ ಒಂದು ವಿಷಯದ ಬಗ್ಗೆ ಬಂದಿರುವ ಒಂದು ಒಳ್ಳೆಯ ಗ್ರಂಥವನ್ನು, ಆ ವಿಷಯದಲ್ಲಿ ಪರಿಣತರಾಗಿರುವ ಶಿಕ್ಷಕರ ಅಡಿಯಲ್ಲಿ ಅಧ್ಯಯನ ಮಾಡಬೇಕು ಎನ್ನುವುದು ಹೆಚ್ಚು ಮುಖ್ಯವಾಗಿತ್ತು. ಆಮೇಲೆ ವಿದ್ಯಾರ್ಥಿಯು ಆ ಪುಸ್ತಕವನ್ನು ಮುಗಿಸಿದಾಗ, ಅವನಿಗೆ ಅವನ ಶಿಕ್ಷಕರಿಂದ ಒಂದು ಪ್ರಮಾಣಪತ್ರ (ಇಜಾಸಾ ಅಥವಾ ಸನದ್) ಸಿಗುತ್ತಿತ್ತು. ಅದರಲ್ಲಿ ವಿದ್ಯಾರ್ಥಿಯು ತನ್ನ ಕೈ ಕೆಳಗೆ ಗ್ರಂಥವನ್ನು ಅಧ್ಯಯನ ಮಾಡಿದ್ದಾನೆಂದೂ ಮತ್ತು ಅದನ್ನು ಅವನು ಬೇರೆಯವರಿಗೆ ಹೇಳಿಕೊಡಬಹದೆಂದೂ ಪ್ರಮಾಣೀಕರಿಸಲಾಗುತ್ತಿತ್ತು. ಈ ಇಜಾಸಾದಲ್ಲಿ ವಿದ್ಯಾರ್ಥಿಯು ಯಾರ ಕೈ ಕೆಳಗೆ ಕಲಿತಿದ್ದಾನೋ ಆ ಶಿಕ್ಷಕನ ಹೆಸರು, ಮುದ್ರೆ ಇರುತ್ತದೋ ಅದನ್ನು ನಂಬಿಕೆಗೆ ಅರ್ಹವಾದ ಪ್ರಮಾಣಪತ್ರ ಎಂದು ಭಾವಿಸಲಾಗುತ್ತಿತ್ತು. ಆ ಶಿಕ್ಷಕ ಮೊದಲು ತನ್ನ ಶಿಕ್ಷಕನಿಂದ ಅದನ್ನು ಕಲಿತಿರುತ್ತಿದ್ದ. ಹೀಗೆ ಈ ಸರಪಳಿಯನ್ನು ಕೊನೆಗೆ ಗ್ರಂಥವನ್ನು ಬರೆದ ಲೇಖಕನವರೆಗೂ ಗುರುತಿಸಬಹುದಾಗಿತ್ತು. ಮತ್ತು ಸರಪಳಿಯಲ್ಲಿ ಬರುವ ಎಲ್ಲ ಕೊಂಡಿಗಳಿಗೂ ಸರಿಯಾದ ಹೆಸರು ಇರಬೇಕಾಗಿತ್ತು. ಒಬ್ಬ ವಿದ್ಯಾರ್ಥಿಯು ಎಷ್ಟು ಗ್ರಂಥಗಳನ್ನು ಓದಿದ್ದಾನೆ ಮತ್ತು ಯಾವೆಲ್ಲ ವಿದ್ವಾಂಸರ ಕೆಳಗೆ ಆತ ಅಧ್ಯಯನ ಮಾಡಿದ್ದಾನೆ ಎನ್ನುವುದರ ಮೇಲಿಂದ ಆತನ ಜ್ಞಾನವನ್ನು ನಿರ್ಣಯ ಮಾಡಲಾಗುತ್ತಿತ್ತು.

ಆರಂಭಕಾಲದ ಈ ಮದ್ರಸಾಗಳಲ್ಲಿ ಒಂದು ಕಟ್ಟುನಿಟ್ಟಾದ ಪಠ್ಯಕ್ರಮ ಇದ್ದಂತೆ ತೋರುವುದಿಲ್ಲ. ಕೆಲವೊಮ್ಮೆ ಈ ಮದ್ರಸಾಗಳಿಗೆ ರಾಜಾಶ್ರಯ ಇರುತ್ತಿದ್ದರೂ, ಸಾಮಾನ್ಯವಾಗಿ ಶಿಕ್ಷಕರು ಯಾವ ಗ್ರಂಥಗಳನ್ನು ಮೆಚ್ಚಿಕೊಳ್ಳುತ್ತಿದ್ದರೋ ಆ ಗ್ರಂಥಗಳನ್ನು ಬೋಧಿಸುತ್ತಿದ್ದರು. ಎಷ್ಟೋ ಬಾರಿ ಮದ್ರಸಾಗಳಲ್ಲಿ ಹೇಳಿಕೊಡಲ್ಪಟ್ಟ ವಿಷಯಗಳ ಮೇಲೆ ಸ್ಥಳೀಯ ಅಂಶಗಳ ನಿಯಂತ್ರಣ ಇರುತ್ತಿತ್ತು, ಇನ್ನು ಕೆಲವೊಮ್ಮೆ ನಿರ್ದಿಷ್ಟ ಶಿಕ್ಷಕರ ಇಷ್ಟವೋ ಅಥವಾ ಪೂರ್ವಾಗ್ರಹವೋ ಶಿಕ್ಷಣವನ್ನು ಪ್ರಭಾವಿಸುತ್ತಿತ್ತು. ಏನೇ ಆದರೂ ಖುರಾನ್ ಮತ್ತು ಹದೀಸ್ ಮಧ್ಯಕಾಲೀನ ಮದ್ರಸಾಗಳ ಶಿಕ್ಷಣದ ಕೇಂದ್ರಭಾಗವಾಗಿತ್ತು. ಯಾವ ವಿದ್ಯಾರ್ಥಿಯು ಇಡಿಯ ಖುರಾನನ್ನು ನೋಡದೆ ಪಠಿಸಬಲ್ಲನೋ, ಯಾರು ಅತಿ ಹೆಚ್ಚಿನ ಸಂಖ್ಯೆಯ ಹದೀಸ್ ವರದಿಗಳನ್ನು ಪಠಿಸಬಲ್ಲರೋ ಅವರು ಹೆಮ್ಮೆ ಮತ್ತು ಆಧ್ಯಾತ್ಮಿಕ ಸಾಧನೆಯ ಸಂಕೇತವಾಗುತ್ತಿದ್ದರು. ಮದ್ರಸಾಗಳಿಂದ ಹೊರಬಂದ ಹೆಚ್ಚಿನ ಪದವೀಧರರು ರಾಜ್ಯದ ಆಡಳಿತ ವ್ಯವಸ್ಥೆಯ ಜೊತೆಗೆ ಕೆಲಸ ಮಾಡಲು ಹೋಗುತ್ತಿದ್ದುದರಿಂದ ಫಿಖ್ ಅಥವಾ ಇಸ್ಲಾಮಿಕ್ ನ್ಯಾಯಶಾಸ್ತ್ರ ಪಠ್ಯಕ್ರಮದ ಮುಖ್ಯ ಭಾಗವಾಯಿತು. ಮೊದಲಿನ ಮುಕ್ತ ಮದ್ರಸಾಗಳ ಬದಲಿಗೆ, ಕ್ರಮೇಣ ಮದ್ರಸಾಗಳು

ಯಾವುದಾದರೂ ಒಂದು ನ್ಯಾಯದ ಶಾಖೆಯನ್ನು ಮಾತ್ರ ಕಲಿಸಬೇಕೆಂಬ ಮಿತಿಯನ್ನು ಹೇರಿಕೊಂಡರು. ತಮ್ಮ ತಮ್ಮ ಮದ್ರಸಾಗಳ ಪೋಷಕರ ಹಾಗೂ ಶಿಕ್ಷಕರ ನಿಷ್ಠೆ ಯಾವ ಕಡೆಗಿದೆಯೋ ಆ ಶಾಖೆಯ ನಿಯಮಗಳ ಪ್ರಕಾರ ಪಠ್ಯಕ್ರಮ ತಯಾರಾಯಿತು. ಇದರಿಂದಾಗಿ ಶಿಕ್ಷಣ ಎಂದರೆ ಫಿಖ್‌ನ್ನು ವಿವರವಾಗಿ ತಿಳಿದುಕೊಳ್ಳುವುದು ಎಂಬಂತಾಯಿತು. ಮತ್ತು ಬೇರೆ ಬೇರೆ ಶಾಖೆಗಳ ಮಧ್ಯೆ ಭಿನ್ನಾಭಿಪ್ರಾಯಗಳು ಇನ್ನಷ್ಟು ತೀವ್ರವಾದವು. ಇದರ ಜೊತೆಗೆ ಖುರಾನಿನ ಮೇಲೆ ಬರೆದ ವ್ಯಾಖ್ಯಾನಗಳಂತಹ 'ಸಂವಹನಗೊಂಡ ವಿಜ್ಞಾನಗಳು'(ಉಲುಮ್ ಅಲ್ ನಖಾಲಿಯಾ) ಒಂದು ತಲೆಮಾರಿನಿಂದ ಇನ್ನೊಂದಕ್ಕೆ ಸಂವಹನಗೊಳ್ಳುತ್ತಾ ಬಂದವು. ಜೊತೆಯಲ್ಲೇ ಮಧ್ಯಕಾಲೀನ ಮದ್ರಸಾಗಳು ಹಲವು ಬಗೆಯ 'ತಾರ್ಕಿಕ ವಿಜ್ಞಾನ'ಗಳನ್ನು(ಉಲುಮ್ ಅಲ್ ಅಖಾಲಿಯಾ) ಅಂದರೆ ವ್ಯಾಕರಣ, ಕಾವ್ಯ, ತತ್ವಶಾಸ್ತ್ರ, ವೈದ್ಯಕೀಯ ಶಾಸ್ತ್ರ, ಗಣಿತ ಮತ್ತು ಖಗೋಳ ವಿಜ್ಞಾನ ಮುಂತಾದುವುಗಳನ್ನು ಹೇಳಿಕೊಡುತ್ತಿದ್ದವು.

ಮದ್ರಸಾದಲ್ಲಿ ಹಲವು ವರ್ಷಗಳನ್ನು ಕಳೆದ ಒಬ್ಬ ವಿದ್ಯಾರ್ಥಿಗೆ ವೈವಿಧ್ಯಮಯ ವೃತ್ತಿಪರ ಆಯ್ಕೆಗಳು ಇರುತ್ತಿದ್ದವು. ಅವನು ನೇರವಾಗಿ ರಾಜ್ಯದ ನೌಕರಶಾಹಿ ವ್ಯವಸ್ಥೆಯನ್ನು ಸೇರಬಹುದಿತ್ತು ಅಥವಾ ಮದ್ರಸಾ ಒಂದರಲ್ಲಿ ಶಿಕ್ಷಕನಾಗಿ ಕೆಲಸ ಮಾಡಬಹುದಿತ್ತು. ಇಲ್ಲವೇ ತನ್ನದೇ ಒಂದು ಮದ್ರಸಾವನ್ನು ಸ್ಥಾಪಿಸಲೂ ಬಹುದಿತ್ತು. ಮಸೀದಿಯಲ್ಲಿ ಉಪದೇಶ ಮಾಡುವ ಕೆಲಸ ಆರಂಭಿಸಬಹುದಿತ್ತು. ಅಥವಾ ಇದೆಲ್ಲವನ್ನೂ ಬಿಟ್ಟು ಹೆಚ್ಚಿನ ಅಧ್ಯಯನವನ್ನೂ ಆಯ್ಕೆ ಮಾಡಬಹುದಿತ್ತು. ಇಸ್ಲಾಮ್ ಧರ್ಮದ ಕುರಿತು ವಿದ್ವಾಂಸನಾಗುವ ಆಸಕ್ತಿ ಇದ್ದರೆ ಮದ್ರಸಾಗಳಲ್ಲಿ ಖುರಾನ್, ಹದೀಸ್‌ಗಳಂತಹ ಸಂವಹನ ವಿಜ್ಞಾನದ ಬಗ್ಗೆ ಕಲಿಯಬಹುದಿತ್ತು. ಇಲ್ಲವೇ ತಾರ್ಕಿಕ ವಿಜ್ಞಾನವನ್ನು ಕಲಿಸುವ ಶಾಲೆಗಳಿಗೂ ಸೇರಬಹುದಿತ್ತು. ಆದ್ದರಿಂದ 'ಧರ್ಮದ' ಮತ್ತು 'ಲೌಕಿಕ' ಅಥವಾ 'ವೈಚಾರಿಕ' ಶಿಕ್ಷಣದ ಬಗ್ಗೆ ಮಧ್ಯಕಾಲೀನ ಮುಸ್ಲಿಮ್ ಸಮಾಜಗಳಲ್ಲಿ ಅಂತಹ ಕಟ್ಟುನಿಟ್ಟಿನ ಭೇದ ಇರಲಿಲ್ಲ. ಕ್ರಮೇಣ ಇವೆರಡರ ಮಧ್ಯೆ ಭೇದ ಹೆಚ್ಚು ಬೆಳೆಯುತ್ತಾ ಹೋಯಿತು. ಹಲವು ಫಖಾಹಾಗಳು ಅದು ಧರ್ಮ ಅಲ್ಲ ಎಂದು ವಿರೋಧಿಸಿದರು. ಗ್ರೀಕರ ವಿಚಾರವಾದ ಮತ್ತು ಲೌಕಿಕ ವಿಜ್ಞಾನಗಳು ಮುಸ್ಲಿಮರ ಧರ್ಮಶ್ರದ್ಧೆಯನ್ನು ಕಳೆಯುತ್ತವೆ ಎಂದು ಅವರು ಆರೋಪಿಸಿದರು.

****

ಇಸ್ಲಾಮ್ ಶಿಕ್ಷಣ ಮತ್ತು ಮಧ್ಯಕಾಲೀನ ಅರಬರು ಹಾಗೂ ಇರಾನಿನ ಉಲಮಾಗಳಿಂದ ಅಭಿವೃದ್ಧಿಗೊಂಡ ಹಲವು ರೀತಿಯ 'ವೈಚಾರಿಕ' ಮತ್ತು 'ಸಂವಹನ'ಗೊಂಡ ವಿಜ್ಞಾನಗಳು ಪ್ರಪಂಚದ ಬೇರೆ ಭಾಗಗಳಲ್ಲಿರುವ ಮುಸ್ಲಿಮರ ಮೇಲೆ ಆಳವಾದ ಪರಿಣಾಮವನ್ನು ಬೀರಿದವು. ತುರುಕರು ಭಾರತದ ಮೇಲೆ ದಾಳಿ ಮಾಡಿ ಬಲಗೊಳ್ಳುವ ಹೊತ್ತಿಗೆ, ಪಶ್ಚಿಮ ಏಷ್ಯಾ ಹಾಗೂ ಇರಾನ್‌ಗಳಲ್ಲಿ ಇಸ್ಲಾಮಿಕ್ ವಿದ್ವತ್ತಿನ ಪರಂಪರೆ ಮತ್ತು ಶಾಸ್ತ್ರೀಯವಾದ

ಮದ್ರಸಾಗಳ ಶಿಕ್ಷಣ ಭದ್ರವಾಗಿ ಬೇರೂರಿತ್ತು. ಶೀಘ್ರದಲ್ಲೇ ಭಾರತದಲ್ಲಿ ಅನೇಕ ಮದ್ರಸಾಗಳ ಸ್ಥಾಪನೆಯಾಯಿತು ಮತ್ತು ಭಾರತವು ಇಸ್ಲಾಮಿಕ್ ಕಲಿಕೆಯ ಒಂದು ಮುಖ್ಯ ಕೇಂದ್ರವಾಗಿ ಹೊರ ಹೊಮ್ಮಿತು. ಅವುಗಳಲ್ಲಿ ಅನೇಕ ಮದ್ರಸಾಗಳಿಗೆ ಮುಸ್ಲಿಮ್ ದೊರೆಗಳು ಆಶ್ರಯದಾತರಾಗಿದ್ದರು.

ಈ ಮುಂದಿನ ಅಧ್ಯಾಯದಲ್ಲಿ ದೆಹಲಿ ಸುಲ್ತಾನರ ಕಾಲ, ಆ ಬಳಿಕ ಮೊಘಲರ ಕಾಲ ಮತ್ತು ಬ್ರಿಟಿಷರ ಕಾಲದಲ್ಲಿ ಭಾರತದಲ್ಲಿ ಮದ್ರಸಾ ಶಿಕ್ಷಣದ ಹುಟ್ಟು ಹಾಗೂ ಬೆಳವಣಿಗೆಗಳು ಹೇಗೆ ನಡೆದವು ಎಂಬುದನ್ನು ವಿಶ್ಲೇಷಿಸಲಾಗಿದೆ.

**ಅನುವಾದ: ಡಾ. ವಿಶಾಲಾ ವಾರಣಾಶಿ**

---